ಸಂಸ್ಕಾರ ತರಂಗಿಣೀ

ಪುಷ್ಪ – 12

ಪ್ರೇತಕಾಂಡ

ಭಾಗ – 1

ಪ್ರಪ್ರಥಮ ಬಾರಿಗೆ ವಿನೂತನ ವಿಧಾನದಲ್ಲಿ,
ಕನ್ನಡದಲ್ಲಿ ಅರ್ಥಸಹಿತವಾಗಿ,
ಶಾಸ್ತ್ರೀಯ ಪಿತೃಮೇಧ(ಅಪರ)ವಿಷಯದ

ಶ್ರೀವೈದ್ಯನಾಥೀಯ ಸ್ಮೃತಿಮುಕ್ತಾಫಲ
ಮತ್ತು
ಶ್ರೀಯಲ್ಲಾಜೀಯ ಅನುಧರ್ಮಶಾಸ್ತ್ರ
ಹಾಗೂ
ಶ್ರೀವೆಂಕಟರಾಮಾವಧಾನೀಯ ಪ್ರಯೋಗರತ್ನಾಕರ
ಗ್ರಂಥಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ.

ಅಕ್ಷರ ಜೋಡಣೆ
ಶ್ರೀಮತಿ ಭಾರತೀ ಶರ್ಮಾ

ಸಂಪಾದಕರು, ಅನುವಾದಕರು
ಮತ್ತು ಪ್ರಕಾಶಕರು
ವೇ॥ಬ್ರ॥ ಶ್ರೀ
ಎ.ಸಿ. ಶಕ್ತಿಧರ ಶರ್ಮಾ

ಸಂಚಾಲಕರು
ವಿದ್ವಾನ್ ವೇ॥ಬ್ರ॥ ಶ್ರೀ
ಚಂದ್ರಶೇಖರ ಶರ್ಮಾ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವಿದ್ವಾನ್ ವೇ॥ಬ್ರ॥ ಶ್ರೀ
ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವಿದ್ವಾನ್ ವೇ॥ಬ್ರ॥ ಶ್ರೀ
ಕಿರಣ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವೇದವೇದಾಂಗ ವಿದ್ವಾನ್
ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು

ಸಲಹೆಗಾರರು
ವಿದ್ವಾನ್ ವೇ॥ಬ್ರ॥ ಶ್ರೀ ವೇಂಕಟೇಶ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು
ವಿದ್ವಾನ್ ವೇ॥ಬ್ರ॥ ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು

ಸಂಸ್ಕಾರ ತರಂಗಿಣೀ

ಪುಷ್ಪ – 12

(ಪ್ರೇತಕಾಂಡ)

ಭಾಗ – 1

ಪ್ರಪ್ರಥಮ ಬಾರಿಗೆ ದಿನೂತನ ದಿಧಾನದಲ್ಲಿ,
ಕನ್ನಡದಲ್ಲಿ ಅರ್ಥಸಹಿತವಾಗಿ,
ಶಾಸ್ತ್ರೀಯ ಪಿತೃಮೇಧ(ಅಪರ)ದಿಷಯದ

ಶ್ರೀವೈದ್ಯನಾಥೀಯ ಸ್ಮೃತಿಮುಕ್ತಾಫಲ
ಮತ್ತು
ಶ್ರೀಯಲ್ಲಾಜೀಯ ಅನುಧರ್ಮಶಾಸ್ತ್ರ
ಹಾಗೂ
ಶ್ರೀವೆಂಕಟರಾಮಾವಧಾನೀಯ
ಪ್ರಯೋಗರತ್ನಾಕರ
ಗ್ರಂಥಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ.

ವಿಷಯ ಸೂಚಿ

ಗ್ರಂಥನಾಮ – i

ವಿಷಯ ಸೂಚಿ – ii

ಗುರುವಂದನೆ – vi

ಕೃತಜ್ಞತೆಗಳು – vii

ಸಂಪಾದಕೀಯ – viii

ನಮ್ಮ ಪ್ರಕಟಣೆಗಳು – ix

ಪ್ರತಿಗಳು ದೊರೆಯುವ ಸ್ಥಳಗಳು – xii

ಹಿರಿಯರ ನುಡಿ – ವೇ॥ಬ್ರ॥ ಶ್ರೀ ಮಾರ್ಕಂಡೇಯಾವಧಾನಿಗಳು – xiii

ಸಂಪಾದಕರ ಮಾತು – ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮರು – xvi

1. ಶ್ರೀವೈದ್ಯನಾಥೀಯ ಸ್ಮೃತಿಮುಕ್ತಾಫಲ (ಶ್ರಾದ್ಧಕಾಂಡ)

1 ಮುಮೂರ್ಷೋಃ ಆತುರಸ್ಯ ಸ್ನಾನ ವಿಧಿಃ – 1

2 ಪುಂಡ್ರ, ಭಸ್ಮ, ರುದ್ರಾಕ್ಷಾದಿ ವಿಧಿಃ – 3

3 ಭಗವತ್ತೀರ್ಥ ನಿಷೇವಣಂ – 5

4 ಸರ್ವಪ್ರಾಯಶ್ಚಿತ್ತಂ – 6

5 ಕೃಚ್ಛ್ರ ತತ್ಪ್ರತಿನಿಧಿ ಸ್ವರೂಪಂ – 7

6 ಆಪದಿ ಕರ್ತ್ರಂತರ ವರಣಾದಿ – 11

7 ಅಂತ್ಯಕಾಲೇ ಭಗವನ್ನಾಮ ಕೀರ್ತನಂ – 16

8 ದಾನ ವಿಧಿಃ – 18

9 ದಾನ ವಿಶೇಷಾಃ – 20

10 ಅಂತ್ಯಕಾಲೇ ಜಪ್ಯ ಮಂತ್ರಾಃ – 24

11 ಮರಣದಿನ ಗುಣದೋಷೌ – 28

12 ಕರ್ತುಃ ಸಂಸ್ಕಾರ ಯೋಗ್ಯತಾ ಸಿದ್ಧ್ಯರ್ಥಂ ಪ್ರಾಯಶ್ಚಿತ್ತಂ – 34

13 ಮೃತಾಹ ದಾನೇ ವೈಶಿಷ್ಟ್ಯಂ – 35

14 ಊರ್ಧ್ವೋಚ್ಛಿಷ್ಟಾದಿ ಪ್ರಾಯಶ್ಚಿತ್ತಂ – 36

15 ದೇವಾಲಯಾದಿ ಮರಣೇ ಪ್ರಾಯಶ್ಚಿತ್ತಂ – 40

2. ಶ್ರೀಯಲ್ಲಾಜೀಯ ಅನುಧರ್ಮಶಾಸ್ತ್ರ (ಅಪರವಿಷಯ)

ಪೀಠಿಕೆ – 44

1 ಪೈತೃಮೇಧಿಕ ಪರಿಭಾಷಾ – 46

2 ಮುಮೂರ್ಷೋಃ ಕರ್ತವ್ಯಾನಿ – 49

3 ಕರ್ಣಮಂತ್ರ ಜಪಃ – 51

4 ಷಣ್ಣಿಮಿತ್ತ ಪ್ರಾಯಶ್ಚಿತಂ ಉಚ್ಯತೇ – 52

5 ದಹನಕರ್ತೃ ಪ್ರಾಯಶ್ಚಿತ್ತಂ ಉಚ್ಯತೇ – 54

6 ಧನಿಷ್ಠಾಪಂಚಕೇ – 57

7 ಧನಿಷ್ಠಾಪಂಚಕಮರಣೇ ವಿಶೇಷಃ – 58

8 ತಿಥಿವಾರನಕ್ಷತ್ರೇ ಪುನರ್ದಹನಂ ಯಥಾ ಕಲ್ಪಕಾರಿಕಾಃ – 60

9 ಭದ್ರ ತಿಥ್ಯಾದೌ – 61

10 ತ್ರಿಪಾನ್ನಕ್ಷತ್ರೇ ಮರಣೇ – 61

11 ಪ್ರಥಮದಿವಸೇ ಅಕೃತವಪನಸ್ಯ ಕಾಲನಿರ್ಣಯಮಾಹ – 62

12 ರಾತ್ರೌ ವಪನ ನಿಷೇಧಃ – 65

13 ರಾತ್ರೌ ತಿಲೋದಕ – ಪಿಂಡದಾನಾದಿ ನಿಷೇಧಃ – 72

14 ಪಿಂಡದಾನ ಕಾಲಃ – 73

15 ದುರ್ಮೃತಸ್ಯ ನಾರಾಯಣಬಲಿಃ – 73

16 ದೇಶವಿಶೇಷ ಮರಣೇ	–	79
17 ಪ್ರಮಾದ ದುರ್ಮೃತಿಃ	–	82
18 ಕೃಚ್ಛ್ರ ಪ್ರತಿನಿಧಿಃ	–	86
19 ನಿಷ್ಕ ವಿಷಯೇ	–	87
20 ಅಗ್ನಿ ಪ್ರದಾತಾರಃ	–	90
21 ಅನುಪನೀತಸ್ಯ ಪಿತೃ ಸಂಸ್ಕಾರಾಧಿಕಾರಃ	–	91
22 ಅಥ ನಾರಾಯಣಬಲಿಃ	–	92
23 ಬೋಧಾಯನೋಕ್ತ ನಾರಾಯಣಬಲಿಃ	–	98
24 ಸರ್ಪಹತಸ್ಯ ನಾಗಬಲಿ ಪ್ರಕಾರಃ	–	101
25 ಪೂರ್ವಪಕ್ಷನಯನಂ	–	103
26 ಪಕ್ವಾವಶಿಷ್ಟ ಹೋಮಕ್ರಮಃ	–	105
27 ದರ್ಶಪೂರ್ಣಮಾಸಾದಿ ಪೂರ್ಣಾಹುತಿಃ	–	111
28 ಪಿಂಡಪಿತೃಯಜ್ಞ ಲೋಪೇ	–	115
29 ಪಶೋಃ ಪೂರ್ಣಾಹುತಿಃ	–	117
30 ಆಗ್ರಯಣ ಲೋಪ ಪ್ರಾಯಶ್ಚಿತ್ತಂ	–	118
31 ನಕ್ಷತ್ರೇಷ್ಟಿ ಲೋಪಃ	–	120
32 ಚಾತುರ್ಮಾಸ್ಯ ಲೋಪಪೂರಣಂ	–	120
33 ಇಷ್ಟಿಮಧ್ಯೇ ಮೃತಿಃ	–	122
34 ಪುನರಾಧೇಯ ಕಾಲಾಃ	–	124
35 ಪ್ರತಿವಸಂತ ಸೋಮಯಾಗ ಪಕ್ಷಃ	–	130
36 ದೇಶಾಂತರ ಮರಣೇ	–	134

3. ಶ್ರೀವೇಂಕಟರಾಮಾವಧಾನೀಯ ಪ್ರಯೋಗರತ್ನಾಕರಃ (ಅಪರಕಾಂಡ) –

1	ಮರಣಕಾಲೇಯಾ ತಿಥಿಃ	–	138
2	ಪ್ರಾಕ್ ಶಾಂತಿಕರ್ಮಣಃ	–	139
3	ಕರ್ಮಕರ್ತುರಾದ್ಯಂತಯೋಃ	–	141
4	ಪ್ರಾಚೀನಾವೀತತ್ವಂ	–	142
5	ಪ್ರಾಣಾಯಾಮ ಪ್ರಕಾರಃ	–	143
6	ಸಂಕಲ್ಪ ಪ್ರಕಾರಃ	–	144
7	ನಿಯಮಾಂತರಮಾಹ	–	145
8	ಜ್ಞಾತಿಬಾಹುಳ್ಯೇ ಧೂನನಾದಿ ಅನುಷ್ಠಾನ ಕ್ರಮಮಾಹ	–	145
9	ಅಪತ್ಕಾಲೇ ಮುಮೂರ್ಷುಭಿಃ ಶಾಸ್ತ್ರ ಪ್ರತ್ಯಯೈರನುಷ್ಠೇಯಾನಿ	–	147
10	ಯಥಾಸಂಭವ ದಾನಾನಿ	–	148
11	ಅಥ ಮರಣಸಂಶಯೇ	–	149
12	ಅಥ ಸರ್ವಪ್ರಾಯಶ್ಚಿತ್ತಂ	–	151
13	ಅಗ್ನ್ಯಾದಿ ಹೀನಯಜ್ಞಸ್ಯ ರಿಪುತ್ವಮಾಹ	–	154

ಗುರುವಂದನೆ

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ॥
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಭಯಾ ॥

॥ ಅವಧೂತ ಶ್ರೀ ಚಂದ್ರಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

॥ ಶ್ರೀ ವಿಧುಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ॥

ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯನಿಧಿ ಅವಧೂತ ಶ್ರೀವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನು ಇಲ್ಲವಯ್ಯಾ ಗುರುನಾಥ)

॥ ಮೈ ಫಕೀರ್ ಹೂಂ ತೂ ಹೆ ಮಾಲಿಕ್, ಜೋಲೀ ಮೇರಿ ಭರ್‌ದಿ ॥

ಕೃತಜ್ಞತೆಗಳು

ಪವಿತ್ರವಾದ ಈ ಜ್ಞಾನಮಾರ್ಗದ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1) ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್, ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್, ಶೃಂಗೇರಿ

2) ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು, ಬೃಹಸ್ಪತ್ಯಾಚಾರ್ಯರು, ಮತ್ತೂರು

3) ಶ್ರೀಯುತ ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್, ಮೀಮಾಂಸಾ ಶಾಸ್ತ್ರ ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ

4) ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು, ಶ್ರೀರಂಗಪಟ್ಟಣ.

5) ವೇದಬ್ರಹ್ಮ ಶ್ರೀ ಕೃಷ್ಣಭಟ್ಟರು, ಶೃಂಗೇರಿ

6) ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು, ಎಸ್.ಎಲ್.ಎನ್. ರೇಡಿಯೋಸ್, ಶಿವಮೊಗ್ಗ

7) ಶ್ರೀಯುತ ಗಣೇಶ್‌ರವರು, ಉದ್ಯಮಿಗಳು, ಬೆಂಗಳೂರು

8) ಶ್ರೀಯುತ ಕೆ. ಅನಂತರಾಮುರವರು, ಸಾಹಿತಿಗಳು, ಬೆಂಗಳೂರು

9) ಶ್ರೀಮತಿ ಶಾಂತಲಕ್ಷ್ಮಿ ಶರ್ಮಾ, ಅಗ್ರಹಾರ

10) ಶ್ರೀಯುತ ಮಂಜುನಾಥ್‌ರವರು, S/o ಶ್ರೀಮತಿ ಭಾಗೀರಥಿಯವರು, ಬೆಂಗಳೂರು

ಈ ಗ್ರಂಥವು ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಸಂಪಾದಕೀಯ

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು
ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ, ದೂ : 9686497982

ಸಂಚಾಲಕರು :
ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ಪ್ರಧಾನ ಮಾರ್ಗದರ್ಶಕರು :

ವೇ॥ ಬ್ರ॥ ಶ್ರೀ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.
ವೇದವೇದಾಂಗ ವಿದ್ವಾನ್ ವೇ॥ ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು, ಮತ್ತೂರು.
ವೇ॥ ಬ್ರ॥ ಶ್ರೀ ವಿದ್ವಾನ್ ಮೀನಾಕ್ಷೀಸುಂದರ ಘನಪಾಠಿಗಳು, ಶ್ರೀಮಠ, ಶೃಂಗೇರಿ
ವೇ॥ ಬ್ರ॥ ಶ್ರೀ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.
ವೇ॥ ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಅಕ್ಷರಜೋಡಣೆ	: ವೇ॥ ಬ್ರ॥ ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ. ಮತ್ತು ಶ್ರೀಮತಿ ಭಾರತೀ ಶರ್ಮಾ. ವೇ॥ ಬ್ರ॥ ಶ್ರೀ ಶಕ್ತಿಧರ ಶರ್ಮಾ
ವರ್ಷ	: ಜುಲೈ 2016 (ದುರ್ಮುಖ ಸಂವತ್ಸರ, ಆಷಾಢಮಾಸ)
ಪ್ರತಿಗಳು	: 1000
ಪುಟಗಳು	: 155 + 20 = 175
ಪುಸ್ತಕದ ಅಳತೆ	: ಡೆಮ್ಮಿ 1/8
ಪೇಪರ್	: 80 ಜಿ.ಎಸ್.ಎಂ. ಮ್ಯಾಪ್ಲಿತೊ
ಹಕ್ಕುಗಳು	: ಸಂಪೂರ್ಣ ಲೇಖಕರದ್ದು©
ಮೌಲ್ಯ	: ಅಮೂಲ್ಯ
ಪ್ರೋತ್ಸಾಹಯುತ ಕಾಣಿಕೆ	: ರೂ. 160/–
ಮುದ್ರಕರು	: ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು ಇಮೇಲ್ : omkaroffset@gmail.com ಫೋನ್: 080 2670 9026 / 2670 8186

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 ಅನುಷ್ಠಾನ ತರಂಗಿಣೀ
(ನಿತ್ಯ ಪೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)

2. ಸಂಸ್ಕಾರ ತರಂಗಿಣೀ ಪುಷ್ಪ–1
(ಪುಂಸವನ ಮತ್ತು ಸೀಮಂತೋನ್ನಯನ)

3. ಸಂಸ್ಕಾರ ತರಂಗಿಣೀ ಪುಷ್ಪ–2
(ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. ಸಂಸ್ಕಾರ ತರಂಗಿಣೀ ಪುಷ್ಪ–3
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. ಸಂಸ್ಕಾರ ತರಂಗಿಣೀ ಪುಷ್ಪ–4
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5
ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. ವೇದನಾದ ಸಂಗಮ DVD–1 (ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.)

8. ಸಂಸ್ಕಾರ ತರಂಗಿಣೀ ಪುಷ್ಪ–6
(ಅನುಜ್ಞೆ, ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})

9. ಸಂಸ್ಕಾರ ತರಂಗಿಣೀ ಪುಷ್ಪ–7
(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಮನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)

10. ಸಂಸ್ಕಾರ ತರಂಗಿಣೀ ಪುಷ್ಪ–1, 2 ದ್ವಿತೀಯ ಮುದ್ರಣ
(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

11. ಸಂಸ್ಕಾರ ತರಂಗಿಣೀ ಪುಷ್ಪ–3 ದ್ವಿತೀಯ ಮುದ್ರಣ
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

12. ಸಂಸ್ಕಾರ ತರಂಗಿಣೀ ಪುಷ್ಪ – 8 (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)

13. ವೇದನಾದ ಸಂಗಮ DVD 2
(ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)

14. ಸಂಸ್ಕಾರ ತರಂಗಿಣೀ ಪುಷ್ಪ – 9 (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ)

15. ಸಂಸ್ಕಾರ ತರಂಗಿಣೀ ಪುಷ್ಪ – 10 (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)

16. ಸಂಸ್ಕಾರ ತರಂಗಿಣೀ ಪುಷ್ಪ – 11 (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ)

17. ಸಂಸ್ಕಾರ ತರಂಗಿಣೀ ಪುಷ್ಪ – 10 – ದ್ವಿತೀಯ ಮುದ್ರಣ (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)

ಮುಂದಿನ ಪ್ರಕಟಣೆಗಳು

1. ಸಂಸ್ಕಾರ ತರಂಗಿಣೀ ಪುಷ್ಪ – 13 (ಭಾರದ್ವಾಜೀಯ / ಆಪಸ್ತಂಬೀಯ ಅಪರಸೂತ್ರ – ಗೋಪಾಲಮುನಿಗಳ ಮತ್ತು ಕಪರ್ದಿಸ್ವಾಮಿಗಳ ವ್ಯಾಖ್ಯಾನ ಮತ್ತು ಕಾರಿಕಾವಳಿ ಮತ್ತು ಪ್ರಯೋಗ ಹಾಗೂ ಮಂತ್ರಗಳಿಗೆ ಸಾಯಣರ ಮತ್ತು ಹರದತ್ತರ ಭಾಷ್ಯಾರ್ಥ)

2. ಸಂಸ್ಕಾರ ತರಂಗಿಣೀ ಪುಷ್ಪ – 4 – ದ್ವಿತೀಯ ಮುದ್ರಣ (ವ್ರತಚತುಷ್ಟಯ – ಸಮಾವರ್ತನ – ವಿವಾಹ – ಗರ್ಭಾಧಾನ ಮತ್ತು ಮಂತ್ರಗಳಿಗೆ ಶ್ರೀ ಹರದತ್ತರ ಭಾಷ್ಯಾರ್ಥ ಮತ್ತು ಸೂತ್ರ – ಕಾರಿಕೆ – ಪ್ರಯೋಗ)

3. ಸಂಸ್ಕಾರ ತರಂಗಿಣೀ ಪುಷ್ಪ – 14 (ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮ ಶಾಸ್ತ್ರ ಹಾಗೂ ವೆಂಕಟರಾಮಾವಧಾನಿಯ ಪ್ರಯೋಗ ರತ್ನಾಕರ ಭಾಗ–2)

4. ಸಂಸ್ಕಾರ ತರಂಗಿಣೀ ಪುಷ್ಪ – 15 (ಶ್ರಾದ್ಧ ಪ್ರಕರಣ)

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮಾ
   ಶಿವಮೊಗ್ಗ ಮೊ. : 9686497982
   Karnataka Bank A/c. No. : 7322500102385001
   ಸವಳಂಗ ರಸ್ತೆ ಶಾಖೆ, ಶಿವಮೊಗ್ಗ
   IFSC Code : KARB0000732

2. ಶ್ರೀಮಠ ಪುಸ್ತಕಾಲಯ
   ಶಾರದಾಪೀಠಮ್, ಶೃಂಗೇರಿ

3. ವೇದಾಂತ ಬುಕ್ ಹೌಸ್
   ಉಮಾ ಟಾಕೀಸ್ ಹತ್ತಿರ, ಬೆಂಗಳೂರು

4. ಪ್ರಚೇತಾ ಬುಕ್ ಹೌಸ್
   ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು

5. ಶೃಂಗೇರಿ ಶಂಕರ ಮಠ
   ಉಮಾ ಟಾಕೀಸ್ ಹತ್ತಿರ, ಶಂಕರಪುರಂ, ಬೆಂಗಳೂರು

6. ಸಪ್ನಾ ಬುಕ್ ಹೌಸ್
   ಬೆಂಗಳೂರು, ಮೈಸೂರು ಮತ್ತು ಮಂಗಳೂರು

7. ರಾಜಾರಾಮ್ ಬುಕ್ ಹೌಸ್
   ಶಿವಮೊಗ್ಗ

8. ಉಡುಪಿ ಸ್ಟೋರ್ಸ್
   ಗಾಂಧಿನಗರ, ಶಿವಮೊಗ್ಗ

9. ಕರ್ನಾಟಕ ಪುಸ್ತಕ ಪ್ರದರ್ಶನ
   ಸಹ್ಯಾದ್ರಿ ಥಿಯೇಟರ್ ಪಕ್ಕ, ಹಾಸನ

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು? ಋಷಿ ವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ. ಸೂತ್ರಕಾರರ ವಾಕ್ಯ ಬೇಕೇ, ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ . ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ. ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ...., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ...., ಪ್ರಯೋಗ ಅದರ ತಿಳಿ ಕನ್ನಡ ಅರ್ಥ . ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ .

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಹನ್ನೊಂದು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ಎಂಟು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು

ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – 7 ಕಾಂಡಗಳಿಂದ 102 ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – 100 ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ – ಶರ್ಮರ ಮಡದಿಯಾದ ಚಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ 150 ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯ ಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ' , 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ 2004ರಲ್ಲಿ

ಶ್ರೀಯುತ ಶರ್ಮರು 'ವೇದಭೂಷಣ' ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ 2012ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಹಾಗೂ 2013ರಲ್ಲಿ ರೋಟರಿ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ–ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, 32ರ ವಯೋಮಾನದ ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆ–ಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶಮ್–

ವೇ॥ ಬ್ರ॥ ಶ್ರೀ ಮಾರ್ಕಂಡೇಯಾವಧಾನಿ, ಮತ್ತೂರು, ಶಿವಮೊಗ್ಗ

ಸಂಪಾದಕರ ಮಾತು...

ಈ ಜಗತ್ತಿನಲ್ಲಿರುವ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರು. ಹಾಗೂ ಈ ಎಲ್ಲಾ ಕೃತಜ್ಞತೆ – ಉನ್ನತಗೌರವ – ಆದರಗಳು ಅವರುಗಳಿಗೆ ಸಿಗಲೇಬೇಕು, ಮತ್ತೂ ಕಿರಿಯರಾದವರು ಕೊಡಲೇಬೇಕು, ಸಂದೇಹವೇ ಇಲ್ಲ!.

ಆದರೆ, ಅವರೆಂದಿಗೂ(ದೇಹಭಾವದ ಪಿತೃಗಳು) ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವೇಇಲ್ಲ!!. ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!. ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನಭಿನ್ನ ನಡವಳಿಕೆಗಳನ್ನು 'ಇದೇ ನಮ್ಮ ಸಂಪ್ರದಾಯ – ಆಚಾರ' ಎಂಬ ಬ್ರಹ್ಮಾಸ್ತ್ರದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರ ಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು, ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ

ವ್ಯವಸ್ಥಿತವಾದ ನಡವಳಿಕೆಗೇ ಸಂಪ್ರದಾಯ – ಆಚಾರ ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ – ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!.

ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರಗ್ರಂಥಗಳೂ ಕೂಡ ಕೇವಲ ಆಯಾ ವೇದಗಳು – ಆ ವೇದಗಳ ಶಾಖೆಗಳು – ವೇದದ ಅರ್ಥ ಹಾಗೂ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು, ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡಗಳನ್ನು, ಉದಾಹರಣೆಗೆ : ಸಂಕೇತಿಗಳನ್ನು – ಹವ್ಯಕರನ್ನು – ಕಮ್ಮೆಗಳನ್ನು – ಮಾಧ್ವರನ್ನು – ಸ್ಮಾರ್ತರನ್ನು – ಐಯ್ಯಂಗಾರರನ್ನು – ದ್ರಾವಿಡರನ್ನು – ಆಂಧ್ರದವರನ್ನು – ನಮ್ಮೂರಿನ ಪುರೋಹಿತರನ್ನು – ನಿಮ್ಮೂರಿನ ಪುರೋಹಿತರನ್ನು – ಅವರೂರಿನ ಪುರೋಹಿತರನ್ನು – ವೇದಶಾಸ್ತ್ರಗಳ ಬಗ್ಗೆ ಏನೂ ಗೊತ್ತಿಲ್ಲದ, ಆದರೆ ವಯಸ್ಸಿ(ದೇಹದಲ್ಲಿ)ನಲ್ಲಿ ಹಿರಿಯರಾದ ಹೆಂಗಸರು ಅಥವಾ ಗಂಡಸರನ್ನು.....!!!, ಹೀಗೆ ಇಂತಹ ಯಾವ ಮಾನದಂಡಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಒಂದೇಒಂದು ಶಾಸ್ತ್ರಗ್ರಂಥವೂ ಸಹ ರಚನೆಯಾಗಿಲ್ಲ ಎಂಬುದನ್ನು ನಾವು ಮೊದಲು ಅರಿತುಕೊಳ್ಳಬೇಕು.

ಅಲ್ಲದೇ, ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು–ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ಮತ್ತೂ

ಶ್ರುತಿಃಸ್ಮೃತಿ ವಿರೋಧೇ ಶ್ರುತಿಃ ಗರೀಯಸಿ ।
ಸ್ಮೃತಿಸ್ಸಂಪ್ರದಾಯ ವಿರೋಧೇ ಸ್ಮೃತಿಃ ಗರೀಯಸಿ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ 2ನೇ ಆದ್ಯತೆ । ಶಿಷ್ಟಾಚಾರಕ್ಕೆ 3ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ (ವಿರೋಧವಲ್ಲದ) ಅಥವಾ ತತ್ಕಾಲದಲ್ಲಿ ಯಾವುದೇ ಶಾಸ್ತ್ರದ(ಋಷಿವಾಕ್ಯ) ಆಧಾರವಾಕ್ಯಗಳು ಸಿಗದಿದ್ದಾಗ ಮಾತ್ರ 3 ನೇ ಆದ್ಯತೆಯಾಗಿ ಶಿಷ್ಟಾಚಾರವನ್ನು ಒಪ್ಪಿಕೊಳ್ಳಬಹುದು ॥ ಮತ್ತೂ ವೇದಕ್ಕೂ ಹಾಗೂ ಧರ್ಮಶಾಸ್ತ್ರಾದಿ ಸ್ಮೃತಿಗಳಿಗೂ ಪರಸ್ಪರವಿರೋಧ ಕಂಡುಬಂದಾಗ, ವೇದಕ್ಕೇ ಆದ್ಯತೆಯೆಂದೂ ಮತ್ತೂ ಸ್ಮೃತಿಗಳಿಗೂ ಹಾಗೂ ಲೋಕದ ನಡವಳಿಕೆಗಳಿಗೂ(ಆಚರಣೆ) ಪರಸ್ಪರವಿರೋಧ ಕಂಡುಬಂದರೆ, ಆಗ ಸ್ಮೃತಿವಾಕ್ಯಗಳಿಗೇ ಆದ್ಯತೆ ಇರಬೇಕು ॥

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವಾನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ, ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. 2 ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ

ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ –

'ಅವಶ್ಯಂ ಪಿತರಾಚಾರಂ!' ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, ಈ ಗ್ರಂಥವು ಮೊದಲ ಬಾರಿಗೆ ಕನ್ನಡ ಭಾಷೆಯಲ್ಲಿ ಪ್ರಕಟವಾಗುತ್ತಿದ್ದು, ಇಲ್ಲಿಯವರೆಗೆ ಕೇವಲ ಸಂಸ್ಕೃತ, ತೆಲುಗು, ಗ್ರಂಥಾಕ್ಷರಗಳಲ್ಲಿ ಮಾತ್ರವೇ ಮುದ್ರಣವಾಗಿರುತ್ತದೆ. ನೂರು ವರುಷಗಳ ಹಿಂದೆಯೇ ಆ ಮುದ್ರಣ ಕಾರ್ಯವನ್ನು ಮಾಡಿದಂತಹ ಆ ಎಲ್ಲ ಮಹನೀಯರಿಗೂ ನಮಸ್ಕರಿಸಿ ಹಾಗೆಯೇ ಇಂತಹ ಋಷಿಪ್ರಣೀತ ಜ್ಞಾನವನ್ನು ಸಮಸ್ತ ಮನುಷ್ಯರ ಒಳತಿಗಾಗಿ ಕೊಟ್ಟಂತಹ ಶ್ರೀ ವೈದ್ಯನಾಥ ದೀಕ್ಷಿತರಿಗೂ ಹಾಗೂ ಶ್ರೀ ಎಲ್ಲುಭಟ್ಟರಂತಹ ಮಹಾತ್ಮರುಗಳಿಗೂ ಸಾಷ್ಟಾಂಗ ನಮಸ್ಕಾರವನ್ನು ಸಲ್ಲಿಸುತ್ತೇವೆ. ಹಾಗೆಯೇ ಈ ಗ್ರಂಥವು ಈ ರೂಪಕ್ಕೆ ಬರಲು ಕಾರಣೀಭೂತರಾದಂತಹ ನಮ್ಮ ಮಾರ್ಗದರ್ಶಕ ವಿದ್ವಾಂಸರುಗಳಿಗೂ ವಿಶೇಷವಾಗಿ

ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತೂ ವಾತ್ಸಲ್ಯದಿಂದ ವಿಶೇಷ ಮಾರ್ಗದರ್ಶನವನ್ನು ನೀಡುತ್ತಿರುವ **ವಿದ್ವಾಂಸರಾದ, ಅಗ್ನಿಹೋತ್ರಿಗಳಾದ ಶ್ರೀಮಾನ್ ಕಿರಣಾವಧಾನಿಗಳಿಗೆ** ಈ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ **ಪೂಜ್ಯ ಅವಧೂತ ಮಹಾತ್ಮರಾದ ಶ್ರೀ ವೆಂಕಟಾಚಲ ಸದ್ಗುರುಗಳ** ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ಈ ಗ್ರಂಥದಲ್ಲಿರುವ ವಿಷಯವು ಬಹು ದೊಡ್ಡದಾಗಿರುವುದರಿಂದ ಅನೇಕ ಭಾಗಗಳಾಗಿ ವಿಂಗಡಿಸಿ ಕಾಲಕಾಲಕ್ಕೆ ಸಮಾಜಕ್ಕೆ ಕೊಡುವ ಉದ್ದೇಶವು ನಮ್ಮದು. ಇಂತಹ ಗ್ರಂಥವನ್ನು ಜ್ಞಾನಮಾರ್ಗದ ಜಿಜ್ಞಾಸುಗಳು, ಋಷಿವಾಕ್ಯದಲ್ಲಿ ಗೌರವವನ್ನು ಹೊಂದಿರುವವರು ಹಾಗೂ ಆಸಕ್ತರು ಸಂಗ್ರಹಿಸಿ ತನ್ಮೂಲಕ ಜ್ಞಾನಮಾರ್ಗದ ಈ ಕೆಲಸಕ್ಕೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮರು

ಶ್ರೀಃ

ಶ್ರೀವೈದ್ಯನಾಥೀಯ ಸ್ಮೃತಿಮುಕ್ತಾಫಲಂ

(ಅಪರ)ಶ್ರಾದ್ಧಕಾಂಡಂ

1. ಮುಮೂರ್ಷೋಃ ಆತುರಸ್ಯ ಸ್ನಾನ ವಿಧಿಃ

ಸ್ನಾತ್ವಾ ಕರ್ಮಾಣಿ ಕುರ್ವೀತ ಇತಿ ಸ್ಮರಣಾತ್ ।
ಸ್ನಾತಸ್ಯೈವ ಪ್ರಾಯಶ್ಚಿತ್ತಕರ್ಮಣ್ಯಧಿಕಾರಾತ್ ।
ವಾರುಣಸ್ನಾನೇ ಅಶಕ್ತೋ ಮುಮೂರ್ಷುಃ ಬ್ರಾಹ್ಮಾದಿ
ಸ್ನಾನಮಾಚರೇತ್ ॥

ಸ್ನಾನಮಾಡಿ, ಕರ್ಮಗಳನ್ನು ಮಾಡಬೇಕೆಂಬ ವಿಧಿಯಿಂದ। ಸ್ನಾನ ಮಾಡಿದವರಿಗೆ ಮಾತ್ರ ಪ್ರಾಯಶ್ಚಿತ್ತ ಕರ್ಮಗಳಲ್ಲಿ ಅಧಿಕಾರವಿರುವುದರಿಂದ । ನೀರಿನಿಂದ ಸ್ನಾನಮಾಡಲು ಅಶಕ್ತರಾದ, ಸಾವು ಸಮೀಪಿಸಿರುವ ಮನುಷ್ಯರು ಬ್ರಾಹ್ಮಾದಿ ಸ್ನಾನಗಳನ್ನು ಮಾಡಬಹುದು ॥

ತದಾಹ ಯೋಗ ಯಾಜ್ಞವಲ್ಕ್ಯಃ –

ಅಸಾಮರ್ಥ್ಯಾತ್ ಶರೀರಸ್ಯ ವೈಶಮ್ಯಾದ್ದೇಶಕಾಲಯೋಃ ।
ಸ್ನಾನಾನ್ಯೇತಾನಿ ತುಲ್ಯಾನಿ ಮಂತ್ರಾದೀನಿ ಯಥಾಬಲಮ್ ॥

ಶರೀರದ ದೌರ್ಬಲ್ಯತೆಯಿಂದ, ಕಾಲ ಮತ್ತು ದೇಶಗಳ ವೈಪರಿತ್ಯದಿಂದ ಈ ಮಂತ್ರಸ್ನಾನಾದಿಗಳೂ ಕೂಡ ನೀರಿನಿಂದ ಮಾಡುವ ಸ್ನಾನಕ್ಕೆ ಸಮಾನತೆಯನ್ನು ಹೊಂದಿವೆ ॥

ಸ ಏವ –

ಮಾಂತ್ರಂ ಭೌಮಂ ತಥಾಗ್ನೇಯಂ ವಾಯವ್ಯಂ ದಿವ್ಯಮೇವ ಚ ।
ಮಾನಸಂ ಯೌಗಿಕಂ ಚೇತಿ ಸಪ್ತಸ್ನಾನಾನ್ಯನುಕ್ರಮಾತ್ ॥
ಆಪೋಹಿಷ್ಠಾದಿಭಿರ್ಮಾಂತ್ರಂ ಮೃದಾಲಂಭಸ್ತು ಪಾರ್ಥಿವಂ ।
ಆಗ್ನೇಯಂ ಭಸ್ಮನಾಸ್ನಾನಂ ವಾಯವ್ಯಂ ಗೋರಜಸ್ಸ್ಮೃತಂ ॥
ಯತ್ತು ಸಾತಪವರ್ಷೇಣ ದಿವ್ಯಂ ತತ್ ಸ್ನಾನಮುಚ್ಚರೇತ್ ।
ಮಾನಸಂ ಹ್ಯಾತ್ಮಚಿಂತಾತು ಯೌಗಿಕಂ ವಿಷ್ಣುಚಿಂತನಮ್ ॥

ಮಾಂತ್ರಾದಿ ಸ್ನಾನಗಳು 7 ರೀತಿ, ಅವು ಯಾವುವೆಂದರೆ,

1 ಮಾಂತ್ರಸ್ನಾನ. 2 ಭೌಮಸ್ನಾನ. 3 ಆಗ್ನೇಯಸ್ನಾನ. 4 ವಾಯವ್ಯಸ್ನಾನ. 5 ದಿವ್ಯಸ್ನಾನ. 6 ಮಾನಸಸ್ನಾನ. 7 ಯೌಗಿಕಸ್ನಾನ.

1 ಮಾಂತ್ರಸ್ನಾನ = ಆಪೋಹಿಷ್ಠಾದಿ ಅಬ್ದೇವತಾ(ನೀರಿನದೇವತಾ ಸಂಬಂಧಿ) ಮಂತ್ರಗಳಿಂದ ಮಾಡುವಸ್ನಾನ ।

2 ಭೌಮಸ್ನಾನ(ಪಾರ್ಥಿವಸ್ನಾನ) = ಮಣ್ಣನ್ನು ಆಧರಿಸಿ ಮಾಡುವ ಸ್ನಾನ (ಮೃತ್ತಿಕಾಸ್ನಾನ) ।

3 ಆಗ್ನೇಯಸ್ನಾನ(ಭಸ್ಮಸ್ನಾನ) = ಭಸ್ಮದಿಂದ ಮಾಡುವಸ್ನಾನ ।

4 ವಾಯವ್ಯಸ್ನಾನ = ಗೋರಜಸ್ನಾನ(ಗೋವಿನ ಪಾದಗಳಿಂದ ಉಂಟಾಗುವ ಧೂಳು ಸಹಿತ ಗಾಳಿಯ ಸ್ನಾನ) ।

5 ದಿವ್ಯಸ್ನಾನ = ಸೂರ್ಯನ ಕಿರಣಗಳಿಂದ ಮಾಡುವಸ್ನಾನ ।

6 ಮಾನಸಸ್ನಾನ = ಆತ್ಮಚಿಂತನೆಯ(ಜ್ಞಾನಮಾರ್ಗದಿಂದ) ಸ್ನಾನ ।

7 ಯೌಗಿಕಸ್ನಾನ = (ಯೋಗಮಾರ್ಗದಿಂದ ಮಾಡುವ) ವಿಷ್ಣುಚಿಂತನೆಯೇ ಯೌಗಿಕಸ್ನಾನ ।

2. ಪುಂಡ್ರ, ಭಸ್ಮ, ರುದ್ರಾಕ್ಷಾದಿ ವಿಧಿಃ

ತತ ಊರ್ಧ್ವಪುಂಡ್ರಂ ತ್ರಿಪುಂಡ್ರಂ ವಾ ಯಥಾಸ್ವಾಚಾರಂ ಬಿಭೃಯಾತ್ ॥

ನಂತರ, ಮೇಲ್ಮುಖವಾಗಿ ಹಾಕುವ ನಾಮಗಳನ್ನು ಅಥವಾ ಅಡ್ಡವಾಗಿ ಹಾಕುವ 3 ನಾಮಗಳನ್ನು, ಅವರವರ ಆಚಾರದಂತೆ ಧರಿಸಬೇಕು ॥

ಯಥಾಹ ಮರೀಚಿಃ –

ಸರ್ಪಂ ದೃಷ್ಟ್ವಾ ಯಥಾಲೋಕೇ ದರ್ದುರಾಭಯ ವಿಹ್ವಲಾಃ ।
ಊರ್ಧ್ವಪುಂಡ್ರಾಂಕಿತಂ ತದ್ವತ್ಕಂಪಂತೇ ಯಮಕಿಂಕರಾಃ ॥

ಲೋಕದಲ್ಲಿ ಕ್ರೂರಜಂತುಗಳಾದ ಸರ್ಪಾದಿಗಳನ್ನು ನೋಡಿ, ಹೇಗೆ ಅತ್ಯಂತ ಭಯಭೀತರಾಗುತ್ತಾರೋ । ಹಾಗೆಯೇ ಮೇಲ್ಮುಖ ನಾಮಧಾರಿಗಳನ್ನು ನೋಡಿ ಯಮಕಿಂಕರರೂ ಕೂಡ ಭಯಭೀತರಾಗುತ್ತಾರೆ ॥

ವಿಷ್ಣುರಪಿ –

ಊರ್ಧ್ವಪುಂಡ್ರಧರೋಮರ್ತ್ಯೋ ಮ್ರಿಯತೇ ಯತ್ರ ಕುತ್ರಚಿತ್ ।
ಶ್ವಪಾಕೋಪಿ ವಿಮಾನಸ್ಥೋ ಯಮಲೋಕೇ ಮಹೀಯತೇ ॥

ಮಹಾಪಾಪಿಯಾಗಿದ್ದರೂ ಮೇಲ್ಮುಖನಾಮಧಾರಿಯಾಗಿದ್ದು ಮೃತನಾದರೆ । ಅಂತಹವನೂ ಸಹ ವಿಮಾನದಲ್ಲಿ ಯಮಲೋಕಕ್ಕೆ ಹೋಗಿ ವಿರಾಜಮಾನನಾಗಿ ಗೌರವಕ್ಕೆ ಪಾತ್ರನಾಗುತ್ತಾನೆ ॥

ತಥಾ ಪಾದ್ಮೇ, ಬ್ರಹ್ಮಗರುಡ ಸಂವಾದೇ –

ಯಸ್ಯಾಂತಕಾಲೇ ಖಗ ಗೋಪಿಚಂದನಂ
ಬಾಹ್ವೋರ್ಲಲಾಟೇ ಹೃದಿ ಮಸ್ತಕೇ ವಾ ।
ಪ್ರಯಾತಿ ಲೋಕಂ ಕಮಲಾಸಖಸ್ಯ
ಗೋಬಾಲಘಾತೀ ಯದಿ ಬ್ರಹ್ಮಹಾ ಭವೇತ್ ॥

ಯಾವನು ಬಾಹು–ಹಣೆ–ಹೃದಯ ಮತ್ತು ತಲೆಯ ಭಾಗಗಳಲ್ಲಿ ಗೋಪಿಚಂದನವನ್ನು ಧರಿಸಿದ್ದು ಮೃತನಾಗುತ್ತಾನೋ । ಅವನು ಗೋ, ಬಾಲ ಮತ್ತು ಬ್ರಹ್ಮಹತ್ಯಾದಿಗಳನ್ನೇ ಮಾಡಿದ್ದರೂ ಸಹ ವಿಷ್ಣುಸಾಯುಜ್ಯವನ್ನೇ ಹೊಂದುತ್ತಾನೆ ॥

ಸ್ಕಾಂದೇ –

ಭಸ್ಮ ರುದ್ರಾಕ್ಷಧಾರೀ ತು ಪಶ್ವಪಿ ಮ್ರಿಯತೇ ಯದಿ ।
ಸೋಽಪಿ ರುದ್ರತ್ವಮಾಪ್ನೋತಿ ಕಂ ಪುನರ್ಮಾನುಷಾದಯಃ ।
ತುಳಸೀಧಾರಣಾನ್ಮರ್ತ್ಯೋ ವಿಷ್ಣುಲೋಕೇ ಮಹೀಯತೇ ॥

ಭಸ್ಮ, ರುದ್ರಾಕ್ಷಿಗಳನ್ನು ಧರಿಸಿರುವ ಪಶುವೂ ಸತ್ತರೆ, ಅದೂ ಸಹ ರುದ್ರತ್ವವನ್ನು ಹೊಂದುತ್ತದೆ । ಹಾಗಿರುವಾಗ ಮನುಷ್ಯನು ಖಂಡಿತವಾಗಿಯೂ ಭಸ್ಮರುದ್ರಾಕ್ಷಿಗಳನ್ನು ಧರಿಸಿದ್ದೇ ಆದಲ್ಲಿ ಅವನು ರುದ್ರತ್ವವನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ । ಹಾಗೆಯೇ ತುಳಸಿಯನ್ನು ಧರಿಸಿದ ಮನುಷ್ಯನು ವಿಷ್ಣುಲೋಕದಲ್ಲಿ ವಿರಾಜಮಾನನಾಗುತ್ತಾನೆ ॥

3. ಭಗವತ್ತೀರ್ಥ ನಿಷೇವಣಂ

ತುಲಸೀದಲ ಸಂಮಿಶ್ರ ತೀರ್ಥಪಾನಂ ಚ ಕುರ್ಯಾತ್ ॥

ಸಾಯುವ ಸಮಯದಲ್ಲಿ, ತುಳಸೀದಳಸಹಿತವಾದ ತೀರ್ಥವನ್ನು ಸೇವಿಸಬೇಕು ॥

ತಥಾ ಚ ಸ್ಮೃತಿಚಂದ್ರಿಕಾಯಾಂ –

ಅಂತ್ಯಕಾಲೇಪಿ ಯಸ್ಯಾಸ್ಯೇ ದೀಯತೇ ಪಾದಯೋರ್ಜಲಂ ।
ಸೋಽಪಿ ಸದ್ಗತಿಮಾಪ್ನೋತಿ ಯಶ್ಚಾಚಾರ ಬಹಿಷ್ಕೃತಃ ॥
ವಿಷ್ಣುಪಾದಯೋರಿತ್ಯರ್ಥಃ ॥

ಆಚಾರದಿಂದ ಬಹಿಷ್ಕೃತನಾದವನೂ ಕೂಡ ಅವನ ಅಂತ್ಯಕಾಲದಲ್ಲಿ ತುಳಸೀನೀರನ್ನು ಸೇವಿಸಿ ಹಾಗೂ ವಿಷ್ಣುಪಾದಗಳಿಗೆ ತುಳಸೀನೀರನ್ನು ಹಾಕಿದರೆ ಸದ್ಗತಿಯನ್ನೇ ಹೊಂದುತ್ತಾನೆ ॥

ನಾರದೀಯೇ –

ಹರಿಪಾದೋದಕಂ ಯಸ್ಮಾನ್ಮಯಿ ತ್ವಂ ಸಿಕ್ತವಾನ್ಮುನೇ ।
ಪ್ರಾಪಿತೋಸ್ಮಿ ತ್ವಯಾ ತಸ್ಮಾತ್ ತದ್ವಿಷ್ಣೋಃಪರಮಂ ಪದಮ್ ॥
ತುಲಸೀದಲಸಂಮಿಶ್ರಮಪಿ ಸರ್ಷಪಮಾತ್ರಕಂ ।
ಗಂಗಾಜಲಂ ಪುನಾತ್ಯೇವ ಕುಲಾನಾಂ ಏಕವಿಂಶತಿಮ್ ॥
ಏಕವಿಂಶತಿಮಿತಿ ವಚನಾಚ್ಛರೀರೇ ತೀರ್ಥಸೇಚನಮಪಿ
ಪಾವನಮಿತ್ಯವಗಮ್ಯತೇ ॥

ತುಳಸೀಸಹಿತ ಹರಿಪಾದೋದಕ ಸೇವನೆಯಿಂದ ವಿಷ್ಣುಸಾಯುಜ್ಯವೇ ಪ್ರಾಪ್ತಿಯಾಗುತ್ತದೆ । ಸಾಸುವೆಯಷ್ಟು ತುಳಸೀದಳಮಿಶ್ರಿತವಾದ ಗಂಗಾಜಲದ ಸ್ನಾನ, ಪಾನಗಳಿಂದ ದೇಹ, ಮನಸ್ಸು ಶುದ್ಧವಾಗುವುದಲ್ಲದೇ, 21 ಕುಲಗಳು(ತಲೆಮಾರುಗಳು) ಪಾವನಗೊಳ್ಳುತ್ತವೆ! ॥

4. ಸರ್ವಪ್ರಾಯಶ್ಚಿತ್ತಮ್

ತತಃ ಪರಿಷತ್ ಅನುಜ್ಞಾಪೂರ್ವಕಂ ದ್ವಾದಶಾಬ್ದ ಕೃಚ್ಛ್ರರೂಪಂ ಷಡಬ್ದಕೃಚ್ಛ್ರರೂಪಂ ದ್ವ್ಯೇಕಾಬ್ದಕೃಚ್ಛ್ರರೂಪಂ ವಾ ಸರ್ವಪ್ರಾಯಶ್ಚಿತ್ತಂ ಯಥಾಶಕ್ತಿ ಸ್ವಪಾಪಾನುಸಾರೇಣ ಕುರ್ಯಾತ್ ॥

ಬ್ರಾಹ್ಮಣ ಸಭೆಯ ಅನುಜ್ಞೆಯನ್ನು ಪಡೆದು, ದ್ವಾದಶಾಬ್ದ(12 ವರ್ಷ) ಮತ್ತು ಷಡಬ್ದ(6 ವರ್ಷ) ಮತ್ತು ದ್ವಿಏಕಾಬ್ದ(2 ಮತ್ತು 1 ವರ್ಷ)ಗಳ ಕೃಚ್ಛ್ರಗಳನ್ನು ಸರ್ವಪ್ರಾಯಶ್ಚಿತ್ತಕ್ಕಾಗಿ, ತನ್ನ ಶಕ್ತಿಗನುಗುಣವಾಗಿ ಮಾಡಿಕೊಂಡು ॥

ಸರ್ವಜನ್ಮಾರ್ಜಿತಾನೀಹ ಭ್ರೂಣಹತ್ಯಾದಿಕಾನ್ಯಪಿ ।
ಸರ್ವಪಾಪಾನಿ ನಶ್ಯಂತೀ ಕೃಚ್ಛ್ರೈರ್ದ್ವಾದಶವಾರ್ಷಿಕೈಃ ॥
ಜನ್ಮಪ್ರಭೃತಿ ಯತ್ಕಿಂಚಿತ್ಪಾತಕಂಚೋಪಪಾತಕಂ ।
ಅರ್ವಾಕ್ತು ಭ್ರೂಣಹತ್ಯಾಯಾಃ ಷಡಬ್ದಾನ್ನಶ್ಯತಿ ಧ್ರುವಮ್ ॥
ಅದ್ಯಾಪಿ ಅಸಕೃತ್ ಅಭ್ಯಸ್ತಂ ಬುದ್ಧಿಪೂರ್ವಮಘಂ ಮಹತ್ ।
ತಚ್ಚುಧ್ಯತಿ ಅಬ್ದಕೃಚ್ಛ್ರೇಣ ಮಹದಹ ಪಾತಕಾದೃತೇ ॥
ಇತಿ ತ್ರಿಂಶತ್ ಕೃಚ್ಛ್ರಾ ಅಬ್ದಕೃಚ್ಛ್ರಾಃ ।

ದ್ವಾದಶಾಬ್ದ(12 ವರ್ಷ) ಕೃಚ್ಛ್ರಗಳಿಂದ ಎಲ್ಲಾ ಜನ್ಮಗಳಲ್ಲೂ ಮಾಡಿದ ಭ್ರೂಣಹತ್ಯಾದಿ ಎಲ್ಲಾ ಪಾಪಗಳೂ ನಾಶವಾಗುತ್ತವೆ । ಷಡಬ್ದ(6 ವರ್ಷ) ಕೃಚ್ಛ್ರದಿಂದ ಈ ಜನ್ಮದಲ್ಲಿ ಯಾವ ಪಾತಕ, ಉಪಪಾತಕ ಮೊದಲಾದ ಭ್ರೂಣಹತ್ಯೆಗಿಂತ ಕೆಳಗಿನ ಪಾಪಗಳು ನಾಶವಾಗುತ್ತವೆ । 30 ವರ್ಷಗಳ(ಅಬ್ದ) ಕೃಚ್ಛ್ರದಿಂದ ಈವರೆಗಿನ ಅನೇಕಸಲ ಬುದ್ಧಿಪೂರ್ವಕವಾಗಿ ಮಾಡಿದಂತಹ ದೊಡ್ಡಪಾಪಗಳೂ(ಮಹಾಪಾತಕಗಳನ್ನು ಬಿಟ್ಟು) ನಾಶವಾಗುತ್ತವೆ ॥

5. ಕೃಚ್ಛ್ರ ತತ್ಪ್ರತಿನಿಧಿ ಸ್ವರೂಪಮ್

ಕೃಚ್ಛ್ರೋಽತ್ರ ಪ್ರಾಜಾಪತ್ಯಃ । ತತ್ಸ್ವರೂಪಂ ಮನುನೋಕ್ತಂ (11. 211) –

ತ್ರ್ಯಹಂ ಪ್ರಾತಸ್ತ್ರ್ಯಹಂ ಸಾಯಂ ತ್ರ್ಯಹಮದ್ಯಾದಯಾಚಿತಮ್ ।
ತ್ರ್ಯಹಂ ನ ಕಿಂಚಿದಶ್ನೀಯಾತ್ ಪ್ರಾಜಾಪತ್ಯಂ ಚರಂ ದ್ವಿಜಃ ॥

ತಸ್ಯ ಸ್ವರೂಪತೋಽನುಷ್ಠಾನಾಶಕ್ತೌ ಪ್ರಾತಿನಿಧಿರೇವಾನುಷ್ಠೇಯಃ ।
ಕೃಚ್ಛ್ರಪ್ರತಿನಿಧಿಂ ಕುರ್ಯಾತ್ ಗೋಭಿರೇವ ಸವತ್ಸಕೈಃ ॥
ಗವಾಮಭಾವೇ ನಿಷ್ಕಂ ಸ್ಯಾತ್ತದರ್ಧಂ ಪಾದಮೇವ ವಾ ॥
ಪಾದಹೀನಂ ನ ಕರ್ತವ್ಯಮಿತಿ ಶಾತಾತಪೋಽಬ್ರವೀತ ಇತಿ ಸ್ಮರಣಾತ್॥

ಕೃಚ್ಛ್ರವು ಇಲ್ಲಿ, ಪ್ರಾಜಾಪತ್ಯವೆಂದು ಕರೆಯಲ್ಪಡುತ್ತದೆ । ಅದರ ಸ್ವರೂಪವನ್ನು ಮನುವು ಹೀಗೆ ಹೇಳಿದ್ದಾರೆ । 3 ದಿನ ಬೆಳಗ್ಗಿನ ಹೊತ್ತು ಮಾತ್ರ, ನಂತರದ 3 ದಿನಗಳು ಸಂಜೆಮಾತ್ರ, ನಂತರದ 3 ದಿನಗಳು ಬೇಡದೇ ತಾನಾಗಿಯೇ ಲಭಿಸಿದರೆ ಮಾತ್ರ, ನಂತರದ 3 ದಿನಗಳು ಉಪವಾಸ, ಈ ರೀತಿಯಾಗಿ ಒಟ್ಟು 12 ದಿನಗಳು ಅನ್ನವನ್ನು ಸೇವಿಸಿದರೆ ಅದು 1 ಪ್ರಾಜಾಪತ್ಯ ಕೃಚ್ಛ್ರವು। ಅದನ್ನು ಅನುಷ್ಠಾನಮಾಡಲು ಅಶಕ್ತನಾದರೆ, ಅದಕ್ಕೆ ಪ್ರತಿನಿಧಿಯಾಗಿ, ಈ ಕೆಳಗೆಹೇಳುವ ವಸ್ತುಗಳನ್ನಿಟ್ಟುಕೊಂಡು ಅನುಷ್ಠಾನ ಮಾಡಬೇಕು । ಹೇಗೆಂದರೆ – ಪ್ರಾಜಾಪತ್ಯಕೃಚ್ಛ್ರ ಪ್ರತಿನಿಧಿಯಾಗಿ ಕರು ಸಹಿತವಾದ 1 ಹಸುವನ್ನು ದಾನವಾಗಿ ಕೊಡಬೇಕು । ಅದರ ಅಭಾವದಲ್ಲಿ, 1 ತೊಲ (11 ಗ್ರಾಂ) ಚಿನ್ನವನ್ನು ಕೊಡಬೇಕು । ಅದರ ಅಭಾವದಲ್ಲಿ, ಅದರ ಅರ್ಧದಷ್ಟನ್ನಾದರೂ ಅಥವಾ ಅದರ ಕಾಲುಭಾಗದಷ್ಟನ್ನಾದರೂ ದಾನ ಕೊಡಬೇಕು । ಕಾಲುಭಾಗಕ್ಕಿಂತ ಕಡಿಮೆ ಕೊಡಬಾರದೆಂದು ಶಾತಾತಪರು ಹೇಳುತ್ತಾರೆ ॥

ವಿಜ್ಞಾನೇಶ್ವರೋಽಪಿ (ಪುಟ 342. 5) –

ಪ್ರಾಜಾಪತ್ಯ ಕ್ರಿಯಾಶಕ್ತೌ ಧೇನುಂ ದದ್ಯಾದ್ವಿಚಕ್ಷಣಃ ।
ಧೇನೋರಭಾವೇ ದಾತವ್ಯಂ ತನ್ಮೂಲ್ಯಂ ನಾತ್ರ ಸಂಶಯಃ ॥
ಧೇನೋರಭಾವೇ ನಿಷ್ಕಂಸ್ಯಾತ್ ತದರ್ಧಂ ಪಾದಮೇವ ವಾ ।
ಪಾದಹೀನಂ ನ ಕರ್ತವ್ಯಮಿತಿ ವೇದವಿದೋವಿದುಃ ॥

ಪ್ರಾಜಾಪತ್ಯಕೃಚ್ಛ್ರವನ್ನು ಮಾಡಲು ಅಶಕ್ತನಾದರೆ, ಕರುವಿನೊಂದಿಗೆ ಹಸುವನ್ನು ಕೊಡಬೇಕು। ಅದಿಲ್ಲದಿದ್ದರೆ, ಅದಕ್ಕೆ ಸಮಬೆಲೆಯ ಚಿನ್ನ ಅಥವಾ ಹಣವನ್ನಾದರೂ ಕೊಡಬೇಕು । ಅದರ ಅಭಾವದಲ್ಲಿ, ಅದರ ಅರ್ಧದಷ್ಟನ್ನಾದರೂ ಅಥವಾ ಅದರ. ಕಾಲುಭಾಗದಷ್ಟನ್ನಾದರೂ ದಾನ ಕೊಡಬೇಕು। ಕಾಲುಭಾಗಕ್ಕಿಂತ ಕಡಿಮೆ ಕೊಡಬಾರದೆಂದು ವೇದವಿದರು ಹೇಳುತ್ತಾರೆ ॥

ಪ್ರತಿನಿಧ್ಯಂತರಮುಕ್ತಂ ಹೇಮಾದ್ರೌ –

ಕೃಚ್ಛ್ರೋಽಯುತಂ ತು ಗಾಯತ್ರ್ಯಾ ವಿಪ್ರದ್ವಾದಶ ಭೋಜನಂ ।
ತಿಲಹೋಮ ಸಹಸ್ರಂ ವಾ ಸಮಮೇತಚ್ಚತುಷ್ಟಯಮ್ ॥

1 ಪ್ರಾಜಾಪತ್ಯ ಕೃಚ್ಛ್ರ ಅಥವಾ 10000 ಗಾಯತ್ರೀ ಜಪ ಅಥವಾ 12 ಬ್ರಾಹ್ಮಣರ ಭೋಜನ । ಅಥವಾ 1000 ಗಾಯತ್ರೀಮಂತ್ರದಿಂದ ತಿಲಹೋಮ ಇವಿಷ್ಟೂ ಸಮನಾದಂತಹ ಪ್ರಾಯಶ್ಚಿತ್ತಗಳು ॥

ಸ್ಮೃತ್ಯಂತರೇ ಚ –

ಕೃಚ್ಛ್ರೋದೇವ್ಯಯುತಂ ಚೈವ ಪ್ರಾಣಾಯಾಮಶತದ್ವಯಂ ।
ತಿಲಹೋಮ ಸಹಸ್ರಂ ಚ ವೇದಪಾರಾಯಣಂ ತಥಾ ॥
ಷಷ್ಟಿಶ್ಚತುರ್ವಿಂಶತಿರ್ವಾ ಭೋಜ್ಯಾ ದ್ವಾದಶ ವಾ ದ್ವಿಜಾಃ ।
ತಾವದ್ಭೋಜನ ಪರ್ಯಾಪ್ತಂ ಧಾನ್ಯಂ ತನ್ಮೂಲ್ಯಮೇವ ವಾ ॥
ತತ್ಸಮೃದ್ಧ್ಯ ಸಮೃದ್ಧಿಭ್ಯಾಂ ಸಂಖ್ಯಾ ವೈಷಮ್ಯಭಾಷಣಮ್ ॥

1 ಪ್ರಾಜಾಪತ್ಯಕೃಚ್ಛ್ರಕ್ಕೆ ಸಮನಾಗಿ, ಅಯುತಚಂಡೀ ಆರಾಧನೆ । ಅಥವಾ 200 ಪ್ರಾಣಾಯಾಮ । ಅಥವಾ ಸಾವಿರಸಂಖ್ಯೆಯಲ್ಲಿ ಗಾಯತ್ರೀಮಂತ್ರದಿಂದ

ತಿಲಹೋಮ । ಅಥವಾ 1 ಸಲ ಸ್ವಶಾಖಾ ವೇದಪಾರಾಯಣ । 60 ಅಥವಾ 24 ಅಥವಾ 12 ಬ್ರಾಹ್ಮಣರ ಭೋಜನ । ಅಥವಾ ಅಷ್ಟಜನ ಭೋಜನ ಮಾಡಲು ಬೇಕಾದ ಧಾನ್ಯ । ಅಥವಾ ಅಷ್ಟ ಮೌಲ್ಯದ ಹಣವನ್ನು ಕೊಡುವುದು । ಆ ಕೃಚ್ಛ್ರಾಚರಣೆಯಿಂದ ಪಾಪವು ಪರಿಹಾರವಾಗಿ, ಸಮೃದ್ಧಿಯುಂಟಾಗಲು ಅಥವಾ ಉಂಟಾಗದೇ ಇರಲು, ಸಂಖ್ಯೆಯಲ್ಲಿ ವ್ಯತ್ಯಾಸ ಮಾಡುವುದೇ ಕಾರಣವಾಗುತ್ತದೆ ॥

ಸ್ಮೃತ್ಯಂತರೇ –

ಕೃಚ್ಛ್ರಾದಿಕರಣಾಶಕ್ತೌ ಪ್ರತ್ಯಾಮ್ನಾಯಾನ್ ಸಮಾಚರೇತ್ ।
ಪ್ರಾಜಾಪತ್ಯೇತು ಗಾಮೇಕಾಂ ದದ್ಯಾತ್ ಸಾಂತಪನೇ ದ್ವಯಮ್ ॥
ಕೃಚ್ಛ್ರೋಽಯುತಂ ತು ಗಾಯತ್ರ್ಯಾ ಉಪವಾಸಸ್ತಥೈವ ಚ ।
ಸಮುದ್ರಗಾ ನದೀಸ್ನಾನಂ ಸಮಮೇತಚ್ಚತುಷ್ಟಯಮ್ ।
ನದೀಸ್ನಾನಂ ಮೃತ್ತಿಕಾಸ್ನಾನಂ ವಿಧಿಪೂರ್ವಕಂ ॥

ಕೃಚ್ಛ್ರ ಮುಂತಾದವುಗಳನ್ನು ಮಾಡಲು ಅಶಕ್ತನಾದರೆ, ಅದಕ್ಕೆ ಪ್ರತಿನಿಧಿಯಾಗಿ ಹೇಳಿದ್ದನ್ನು ಮಾಡಬೇಕು । ಪ್ರಾಜಾಪತ್ಯಕ್ಕೆ ಪ್ರತಿನಿಧಿಯಾಗಿ 1 ಸವತ್ಸ ಗೋವನ್ನು ದಾನ ಮಾಡಬೇಕು । ಸಾಂತಪನಕೃಚ್ಛ್ರಕ್ಕೆ 2 ಸವತ್ಸ ಗೋವನ್ನು ದಾನಮಾಡಬೇಕು । ಕೇವಲ ಕೃಚ್ಛ್ರ ಅಥವಾ ಉಪವಾಸ ಅಥವಾ 10000 ಗಾಯತ್ರಿಯಿಂದ ಜಪ ಅಥವಾ ಹೋಮ । ಅಥವಾ ಸಮುದ್ರವನ್ನು ನದಿಯು ಸೇರುವಜಾಗದಲ್ಲಿ ಸ್ನಾನ । ಇವಿಷ್ಟೂ ಸಮವಾದವುಗಳು ॥ ನದೀಸ್ನಾನ ಮತ್ತು ಮೃತ್ತಿಕಾಸ್ನಾನಗಳ ವಿಧಿಯನ್ನು ಈ ಮುಂದೆ ಪರಾಶರರು ಹೇಳುತ್ತಾರೆ ॥

ಪರಾಶರಃ –

ಪುಣ್ಯತೀರ್ಥೇನ ಆರ್ದ್ರಶಿರಃ ಸ್ನಾನಂ ದ್ವಾದಶಸಂಖ್ಯಯಾ ।
ದ್ವಿಯೋಜನಂ ತೀರ್ಥಯಾತ್ರಾ ಪ್ರಾಜಾಪತ್ಯಸಮಂ ಸ್ಮೃತಮ್ ॥

ಪುಣ್ಯತೀರ್ಥಗಳಲ್ಲಿ 12 ಸಲ ಮುಳುಗುಸ್ನಾನ ಮಾಡುವುದು । 2 ಯೋಜನ (9 ಕಿಲೋಮೀಟರ್ = 6 ಮೈಲಿ = 1 ಯೋಜನ) ತೀರ್ಥಯಾತ್ರೆಯನ್ನು ಮಾಡುವುದು 1 ಪ್ರಾಜಾಪತ್ಯ ಕೃಚ್ಛ್ರಕ್ಕೆ ಸಮಾನವೆಂದು ಸ್ಮೃತಿಯಲ್ಲಿದೆ ॥

6. ಆಪದಿ ಕರ್ತ್ರಂತರ ವರಣಾದಿ

ಪರಾಶರಃ(6/50) –

ದುರ್ಬಲಸ್ಯಾಪತ್ಕಾಲೇ ಸ್ವಯಂ ವ್ರತಂ ಕರ್ತುಮಶಕ್ತಶ್ಚೇತ್
ಬ್ರಾಹ್ಮಣೈಃ ಕಾರಯೇದಿತಿ ॥

ದುರ್ಬಲನಾದವನಿಗೆ ಆಪತ್ಕಾಲದಲ್ಲಿ ತಾನು ವ್ರತವನ್ನು ಮಾಡಲು ಅಶಕ್ತನಾದರೆ, ಬ್ರಾಹ್ಮಣರಿಂದ ಮಾಡಿಸಬೇಕೆಂದು ಪರಾಶರರು ಹೇಳಿದ್ದಾರೆ ।

ವ್ಯಾಧಿ ವ್ಯಸನಿ ನಿಶ್ರಾಂತೇ ದುರ್ಭಿಕ್ಷೇ ಡಾಮರೇ ತಥಾ ।
ಉಪವಾಸೋ ವ್ರತಂ ಹೋಮೋ ದ್ವಿಜೈಃ ಸಂಪಾದಿತಾನಿ ವೈ ॥

ರೋಗದಿಂದ ಬಳಲಿದ್ದರೆ ಅಥವಾ ದುಶ್ಚಟಗಳಿಗೆ ಬಲಿಯಾಗಿದ್ದರೆ ಅಥವಾ ಅತಿಯಾದ ನಿಶ್ಶಕ್ತಿಯಿಂದ ಕೂಡಿದ್ದರೆ, ಕ್ಷಾಮಾದಿಗಳಿಂದ ಕೂಡಿದ್ದರೆ, ಶತ್ರುಗಳ

ಪೀಡೆಯಿದ್ದರೆ । ಉಪವಾಸ ಮತ್ತು ಕೃಚ್ಛ್ರವ್ರತಾದಿಗಳು ಮತ್ತು ಹೋಮಾದಿಗಳನ್ನು ಬ್ರಾಹ್ಮಣರಿಂದ ಮಾಡಿಸಿ, ಅದರ ಫಲವನ್ನು ಪಡೆಯಬೇಕು ॥

ಅಥವಾ ಬ್ರಾಹ್ಮಣಾಸ್ತುಷ್ಟಾಃ ಸರ್ವಂ ಕುರ್ವಂತ್ಯನುಗ್ರಹಂ ।
ಸರ್ವಾನ್ಕಾಮಾನವಾಪ್ನೋತಿ ದ್ವಿಜಸಂಪಾದಿತೈರಿಹ ॥

ಅಥವಾ ಇನ್ನೂ ಆಪತ್ತಿದ್ದರೆ, ಸಂತುಷ್ಟರಾದ ಬ್ರಾಹ್ಮಣರು ಇವನಪರವಾಗಿ ಎಲ್ಲಾ ಕರ್ಮಗಳನ್ನು ಮಾಡಿ ಅನುಗ್ರಹಿಸುತ್ತಾರೆ । ಆ ಎಲ್ಲಾ ಕಾಮನೆಗಳನ್ನೂ ಈ ಬ್ರಾಹ್ಮಣರಿಂದ ಅವನು ಪಡೆದುಕೊಳ್ಳುತ್ತಾನೆ ॥

ಮುಂಡಕೋಪನಿಷತ್ (3–1–10) –

ಮಹಾಪುರುಷ ವಚನಮಾತ್ರ ಸಂಪಾದಿತೈಃ ಆಶೀರ್ವಿಶೇಷೈರಶೇಷ ಕಾಮ ಪ್ರಾಪ್ತಿರ್ಭವತಿ । ಅತ್ರ ಪಾಪಕ್ಷಯೋ ಭವತೀತಿ ಕೋऽಯಂ ವಿಸ್ಮಯಃ । ಮಹಾಪುರುಷ ಸಂಕಲ್ಪಮಾತ್ರಾದೇವ ಕಾಮಪ್ರಾಪ್ತಿರಥ ಶ್ರಯತೇ ॥

ಸತ್ಪುರುಷರ ಅನುಗ್ರಹ ಮಾತಿನಿಂದಲೇ ಆಶೀರ್ವಾದವನ್ನು ಪಡೆದವನಾಗಿ, ಎಲ್ಲಾ ವಿಶೇಷಕಾಮನೆಗಳನ್ನು ಪಡೆದುಕೊಳ್ಳುತ್ತಾನೆ । ಈ ಮಹಾಪುರುಷರ ಮಾತಿನಿಂದ ಪಾಪವು ನಾಶವಾಗುತ್ತದೆಂಬುದರಲ್ಲಿ ಏನಾಶ್ಚರ್ಯ ? । ಮುಂಡಕೋಪನಿಷತ್ತಿನಲ್ಲಿ, ಮಹಾಪುರುಷರ ಸಂಕಲ್ಪದಿಂದಲೇ ಎಲ್ಲಾ ಕಾಮನೆಗಳೂ ಪ್ರಾಪ್ತವಾಗುತ್ತವೆಂದು ಹೇಳಿದೆ ॥

ಯಂ ಯಂ ಲೋಕಂ ಮನಸಾ ಸಂ ವಿಭಾತಿ ವಿಶುದ್ಧಸತ್ವಃ ಕಾಮಯತೇ ಯಾಂಶ್ಚ ಕಾಮಾನ್ । ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾನ್ ತಸ್ಮಾದಾರ್ತ ಏವಮಭ್ಯುಚ್ಚರೇತ್ ಭೂತಿಕಾಮಃ ॥

ಚಿತ್ತಶುದ್ಧಿಯನ್ನು ಹೊಂದಿದ ಸತ್ಪುರುಷನು ಯಾವಯಾವ ಲೋಕಗಳನ್ನು ಮನಸ್ಸಿನಲ್ಲಿ ಸಂಕಲ್ಪಿಸುತ್ತಾರೋ, ಹಾಗೆಯೇ ಯಾವಯಾವ ಕಾಮನೆಗಳನ್ನು ಸಂಕಲ್ಪಿಸುತ್ತಾರೋ । ಆಯಾಯಾ ಲೋಕಗಳನ್ನು ಹಾಗೂ ಆಯಾಯಾ ಕಾಮನೆಗಳನ್ನು ಪಡೆಯುವುದರ ಮೂಲಕ ಜಯಿಸುತ್ತಾರೆ । ಆದ್ದರಿಂದ ದೀನನಾದವನು ತನ್ನ ಏಳಿಗೆಯನ್ನು ಬಯಸುವುದಕ್ಕಾಗಿ ಆ ಸತ್ಪುರುಷರ ಸಹವಾಸವನ್ನು ಮಾಡುವುದರ ಮೂಲಕ ಅವರನ್ನು ಪೂಜಿಸಬೇಕು ॥

ಮಹದನುಗ್ರಹ ವಿಶೇಷಂ ದರ್ಶಯತಿ ದೇವಲಃ –

ಪ್ರಾಯಶ್ಚಿತ್ತಂ ಯಥೋದ್ದಿಷ್ಟಮಶಕ್ಯಂ ದುರ್ಬಲಾದಿಷು ।
ಇಷ್ಯತೇऽನುಗ್ರಹಸ್ತೇಷಾಂ ಲೋಕಸಂಗ್ರಹ ಕಾರಣಾತ್ ॥

ಶಾಸ್ತ್ರೋಕ್ತರೀತಿಯಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು, ಅಶಕ್ತರಾದ, ದುರ್ಬಲರೇ ಮೊದಲಾದವರು । ಸತ್ಪುರುಷರ ಅನುಗ್ರಹವನ್ನು ಲೋಕಕಲ್ಯಾಣದ ನಿಮಿತ್ತದಿಂದ ಪಡೆದುಕೊಳ್ಳುತ್ತಾರೆ ॥

ಪರಾಶರೋऽಪಿ(6/52) –

ದುರ್ಬಲೇऽನುಗ್ರಹಃ ಪ್ರೋಕ್ತಸ್ತಥಾ ವೈ ಬಾಲವೃದ್ಧಯೋಃ ।
ತತೋऽನ್ಯಥಾ ಭವೇದ್ದೋಷಸ್ತಸ್ಮಾನ್ನಾನುಗ್ರಹಃ ಸ್ಮೃತಃ ॥

ದುರ್ಬಲರಿಗೆ ಹಾಗೂ ಬಾಲ ಮತ್ತು ವೃದ್ಧರಿಗೆ ಸತ್ಪುರುಷರ ಅನುಗ್ರಹವನ್ನು ಹೇಳಿದೆ । ಕರ್ಮಗಳನ್ನು ಮಾಡಲು ಶಕ್ತರಾಗಿಯೂ ಉದಾಸೀನದಿಂದ, ಕೇವಲ ಇವರ ಅನುಗ್ರಹವನ್ನು ಅಪೇಕ್ಷೆಪಟ್ಟಲ್ಲಿ, ಆಗ ಅನುಗ್ರಹ ಪದದ ಅರ್ಥವು ದೋಷಯುಕ್ತವಾಗುತ್ತದೆ. ಅದರಿಂದ ಅವರೂ ದೋಷಿಗಳಾಗುತ್ತಾರೆ (ಅನುಗ್ರಹವೆಂಬ ಪದದ ಅರ್ಥವು ದೋಷಯುಕ್ತವಾಗುತ್ತದೆಂದು ಅರ್ಥ) ॥

ತತೋಽನ್ಯಥಾ ಪ್ರಬಲಾನುಗ್ರಹ ಇತ್ಯರ್ಥಃ । ದುರ್ಬಲಸ್ಯ ಮಹದನುಗ್ರಹಾತ್ ಶುದ್ಧಿಂ ದರ್ಶಯತಿ ಸ ಏವ (6/60–61) ॥

ಆದ್ದರಿಂದ ಅನುಗ್ರಹವು ಅತ್ಯಂತ ಶಕ್ತಿಶಾಲಿಯಾಗಿದೆ ಎಂದರ್ಥ । ಹೇಗೆಂದರೆ – ದುರ್ಬಲರ ಮೇಲೆ ಸತ್ಪುರುಷರ ಅನುಗ್ರಹವು ಅವರ ಶುದ್ಧಿಗೆ ಕಾರಣವಾಗುತ್ತದೆಂಬ ಕಾರಣಕ್ಕಾಗಿ ॥

ಬ್ರಾಹ್ಮಣಾ ಜಂಗಮಂ ತೀರ್ಥಂ ತೀರ್ಥಭೂತಾಹಿ ಸಾಧವಃ ।
ತೇಷಾಂ ವಾಕ್ಯೋದಕೇನೈವ ಶುದ್ಧ್ಯಂತಿ ಮಲಿನಾಜನಾಃ ॥
ಬ್ರಾಹ್ಮಣಾ ಯಾನಿ ಭಾಷಂತೇ ಮನ್ಯಂತೇ ತಾನಿ ದೇವತಾಃ ।
ಸರ್ವದೇವಮಯೋ ವಿಪ್ರೋ ನ ತದ್ವಚನಮನ್ಯಥಾ ॥

ಬ್ರಾಹ್ಮಣರು ಓಡಾಡುವ ತೀರ್ಥಕ್ಕೆ ಸಮರು. ಅದರಲ್ಲೂ ಸತ್ಪುರುಷರು, ಸಾಧುಗಳು ಶ್ರೇಷ್ಠ ತೀರ್ಥಸ್ಥಾನ ಸಮಾನರು । ಅವರ ಮಾತೆಂಬ ಅನುಗ್ರಹದಿಂದಲೇ ದುರ್ಬಲ ಮುಂತಾದ ಜನರು ಶುದ್ಧವಾಗುತ್ತಾರೆ । ಬ್ರಾಹ್ಮಣರು ಯಾವ ಅನುಗ್ರಹವನ್ನು ಮಾಡುತ್ತಾರೋ ಅದನ್ನು ದೇವತೆಗಳು ಒಪ್ಪುತ್ತಾರೆ । ಆದ್ದರಿಂದ ಬ್ರಾಹ್ಮಣರು ಎಲ್ಲಾ ದೇವತಾ ಸ್ವರೂಪರು, ಅವರ ಮಾತು ಎಂದೂ ಸುಳ್ಳಾಗುವುದಿಲ್ಲ ॥

ಅನುಗ್ರಹ ಯೋಗ್ಯಸ್ಯ ದುರ್ಬಲಸ್ಯ ನಿಯಮ ವಿಧಾನೇಽಪಿ ಪ್ರತ್ಯವಾಯ ಇತ್ಯಾಹ ಸ ಏವ(6/64) ॥

ಅನುಗ್ರಹಕ್ಕೆ ಯೋಗ್ಯನಾದ ದುರ್ಬಲನಿಗೆ ನಿಯಮವನ್ನು ವಿಧಿಸಿದರೆ, ಅದು ದೋಷಯುಕ್ತವಾಗುತ್ತದೆಂದು ಆ ಪರಾಶರರೇ ಹೇಳಿದ್ದಾರೆ ॥

ಶರೀರಸ್ಯಾತ್ಯಯೇ ಪ್ರಾಪ್ತೇ ವದಂತಿ ನಿಯಮಾಂಸ್ತು ಯೇ ।
ಮಹತ್ಕಾರ್ಯಾಪರಾಧೇನ ತತ್ಪಾಪಂ ತೇಷು ಗಚ್ಛತಿ ॥

ಪ್ರಾಣಾಪಾಯದ ಸಮಯದಲ್ಲಿ, ಯಾರು ಆ ಅಪಾಯದಲ್ಲಿರುವ ವ್ಯಕ್ತಿಗೆ ನಿಯಮವನ್ನು ಹೇಳುತ್ತಾರೋ। ಅವರು, ಆ ವ್ಯಕ್ತಿಯ ಅಂತ್ಯಕಾಲದ ಭಗವನ್ನಾಮ ಸಂಕೀರ್ತನ ಕೆಲಸಕ್ಕೆ ಅಡ್ಡಿಮಾಡಿದಂತಾಗಿ ಅದರ ಪಾಪವನ್ನು ಮತ್ತು ಆ ಅಪಾಯದಲ್ಲಿರುವ ವ್ಯಕ್ತಿಯ ಪಾಪಗಳನ್ನು ಹೊರುತ್ತಾರೆ ॥

ಶರೀರಸ್ಯಾತ್ಯಯೋ ಮುಮೂರ್ಷೋರ್ಭೂಮ್ಯಾಂ ಶಯನಂ ತಸ್ಮಿನ್ ಪ್ರಾಪ್ತೇಸತಿ ತೇನ ಕರ್ತುಮಶಕ್ಯಂ ಪ್ರಾಜಾಪತ್ಯಾದಿ ನಿಯಮಂ ಕರ್ತವ್ಯತ್ವೇನ ಯೇ ವದಂತಿ ತೇಷು ತತ್ಪಾಪಂ ಗಚ್ಛತಿ । ತತ್ರ ಹೇತುಃ – 'ಮಹತ್ಕಾರ್ಯಾಪರಾಧೇನ' ಇತಿ ಮಹತಾಂ ದೇವತೋಪಾಸಕಾನಾಂ ಕಾರ್ಯಂ ಮಹತ್ಕಾರ್ಯಂ । ಅಂತಕಾಲೇ ದೇವತಾಸ್ಮರಣ ಕೀರ್ತಾನಾದಿ । ತಸ್ಯೋಪರೋಧಃ ಪ್ರತಿಬಂಧಃ । ಮುಮೂರ್ಷುರ್ಹಿ ಪರಸರವರ್ತಿಭಿ– ರಾಪ್ತೈರ್ಬೋಧಿತೋ ದೇವತಾಂ ಸ್ಮರ್ತುಮುದ್ಯುಂಕ್ತೇ ಪರಿತ್ಯಜತಿ ಸೋಽಯಂ ಪುರುಷಾರ್ಥ ಪ್ರತಿಬಂಧಃ । ಸ್ವಸ್ಥ ಶರೀರಸ್ಯ ಪೂರ್ವೋಕ್ತಃ ಕಾರ್ಯೋಪರೋಧಃ ಕದಾಚಿದಪಿ ನಾಸ್ತಿ । ಸ್ವಸ್ಥಸ್ಯ ಮೂಢಾಃ ಕುರ್ವಂತಿ ವದಂತ್ಯ ನಿಯಮಂ ತು ಯೇ । ತೇ ತಸ್ಯ ವಿಘ್ನಕರ್ತಾರಃ ಪತಂತಿ ನರಕೇಽಶುಚೌ । ಇತಿ ಸ್ಮರಣಾತ್ ॥

ಮರಣಹೊಂದಲು ಹೊರಟಿರುವ ಮನುಷ್ಯನನ್ನು ಭೂಮಿಯಮೇಲೆ ಮಲಗಿಸಿದ ನಂತರ, ಅವನಿಗೆ ಮಾಡಲು ಆಗದೇ ಇರುವ ಪ್ರಾಜಾಪತ್ಯಾದಿ ನಿಯಮಗಳನ್ನು ಯಾರಾದರೂ ಉಪದೇಶಿಸಿದರೆ, ಅಂತಹವರಿಗೆ ಸಾಯಲುಹೊರಟ ವ್ಯಕ್ತಿಯ

ಎಲ್ಲಾ ಪಾಪಗಳೂ ಬರುತ್ತವೆ । ಏಕೆಂದರೆ, ಅಂತ್ಯಕಾಲದ ದೇವತಾಸ್ಮರಣ, ಕೀರ್ತನಾದಿಗಳಿಗೆ ಅಡ್ಡಿಮಾಡಿದಂತಾಗುತ್ತದೆ । ಸಾಯಲು ಹೊರಟವನು ತನ್ನ ಸುತ್ತಲಿನಲ್ಲಿರುವ ಬಂಧುಗಳಿಂದ ಎಚ್ಚರಗೊಳಿಸಲ್ಪಟ್ಟು, ದೇವತಾ ಸ್ಮರಣೆಗಳನ್ನು ಮಾಡಲು ತೊಡಗಿದವನಾಗಲಾಗಿ, ಆಗ ಪ್ರಾಜಾಪತ್ಯಾದಿ ನಿಯಮಗಳನ್ನು ಕೇಳಿ, ಅದನ್ನು ಮಾಡಲಾಗದೇ ವ್ಯಾಕುಲ ಮನಸ್ಸುಳ್ಳವನಾಗಿ ಹಿಂದಿನ ಭಗವನ್ನಾಮಸ್ಮರಣೆಯನ್ನೂ ಬಿಡುತ್ತಾನೆ. ಇದು ಮೋಕ್ಷಕ್ಕೆ ಅಡ್ಡಿಯು । ಆರೋಗ್ಯವಾದ ದೇಹವುಳ್ಳವರಿಗೆ ಹಿಂದಿನ ಅಡ್ಡಿಯು ಯಾವಾಗಲೂ ಬರುವುದಿಲ್ಲ। ಆದ್ದರಿಂದ ಅವರಿಗೆ ಪ್ರಾಜಾಪತ್ಯಾದಿ ನಿಯಮಗಳು ಉಂಟು । ಆರೋಗ್ಯವಂತರಿಗೆ ಪ್ರಾಜಾಪತ್ಯಾದಿ ನಿಯಮವಿಲ್ಲವೆಂದು ಯಾವ ಮೂಢರು ಹೇಳುತ್ತಾರೋ । ಅವರು ಆ ಆರೋಗ್ಯವಂತ ಮನುಷ್ಯನನ್ನು ಪುರುಷಾರ್ಥದಿಂದ(ಮೋಕ್ಷದಿಂದ) ಜಾರಿಬೀಳಿಸಿದವರಾಗಿ(ತಪ್ಪಿಸಿ), ಈ ಅಪರಾಧಕ್ಕೆ ಘೋರನರಕದಲ್ಲಿ ಬೀಳುತ್ತಾರೆ । ಎಂದು ಸ್ಮೃತಿಗಳು ಹೇಳುತ್ತಿವೆ ॥

7. ಅಂತ್ಯಕಾಲೇ ಭಗವನ್ನಾಮ ಕೀರ್ತನಂ

ಅಂತ್ಯಕಾಲೇ ಹರಿಹರ ನಾಮ ಕೀರ್ತನಾದಿ ಫಲಂ ಸ್ಮರ್ಯತೇ –

ಯಥಾಕಥಂ ಚಿದ್ಗೋವಿಂದೇ ಕೀರ್ತಿತೇ ವಾ ಶ್ರುತೇಽಪಿ ವಾ ।
ಪಾಪಿನೋಽಪಿ ವಿಶುದ್ಧಾಃ ಸ್ಯುಃ ಶುದ್ಧಾಮೋಕ್ಷಮವಾಪ್ನುಯುಃ ॥

ಶಿವಶಿವಶಿವ ಚೇತಿ ವ್ಯಾಹರನ್ವಯಿ ತ್ರಿವಾರಂ ತ್ಯಜತಿ ನಿಜತನುಂ ಯಃ
ಸ್ವಾಯುಷೋಽಂತ್ಯಕ್ಷಣೇಽಸ್ಮಿನ್ । ಭವತಿ ಭವಭಯಾನಾಂ ಛೇದಕಃ
ಪೂರ್ವಶಬ್ದೋ ನ ಭವತ ಇತರೌ ತೌ ಕಲ್ಪಿತಾತ್ಮೋಪಕಾರೌ ॥

ಯಂಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಂ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವ ಭಾವಿತಃ ॥
ಇತಿ, ಮಹದವಲೋಕನಂ ಚ ಕಾರ್ಯಂ ।
ಮಹಾಪಾತಕಯುಕ್ತೋ ವಾ ಯುಕ್ತೋ ವಾ ಸರ್ವಪಾತಕೈಃ ।
ಪರಂಪದಂ ಪ್ರಯಾತ್ಯೇವ ಮಹದ್ಭಿರವಲೋಕಿತಃ ॥ ಇತಿ ಸ್ಮರಣಾತ್ ।

ಅಂತ್ಯಕಾಲದಲ್ಲಿ, ಹರಿಹರ ನಾಮಸಂಕೀರ್ತನೆಯ ಫಲಗಳನ್ನು ಸ್ಮೃತಿಗಳಲ್ಲಿ ಈ ರೀತಿಯಾಗಿ ಹೇಳಿದೆ । ಹೇಗಾದರೂ, ಅಂತ್ಯಕಾಲದಲ್ಲಿ ಗೋವಿಂದನ ನಾಮ ಉಚ್ಚಾರಣೆಯನ್ನು ಮಾಡಿದರೆ ಅಥವಾ ಕೇಳಿದರೆ । ಪಾಪಿಗಳೂ ಕೂಡ ಪಾಪಗಳಿಂದ ಬಿಡುಗಡೆ ಹೊಂದಿದವರಾಗಿ, ಶುದ್ಧರಾಗುತ್ತಾರೆ, ಶುದ್ಧರಾದವರಾದರೋ ಮೋಕ್ಷವನ್ನು ಪಡೆಯುತ್ತಾರೆ ॥ ತನ್ನ ಆಯಸ್ಸಿನ ಕೊನೆಯ ಕಾಲದಲ್ಲಿ, 3 ಬಾರಿ ಶಿವನಾಮ ಸ್ಮರಣೆಯನ್ನು ಮಾಡುತ್ತಾ ದೇಹವನ್ನು ಬಿಟ್ಟರೆ । ಸಂಸಾರದ ಭಯದಿಂದ ಬಿಡುಗಡೆ ಹೊಂದುತ್ತಾನೆ, ಮೊದಲನೆ ಶಿವನಾಮದಿಂದ, ಇನ್ನುಳಿದ 2 ಶಿವನಾಮಗಳು ಇಲ್ಲದಿದ್ದರೆ ಮೊದಲನೆ ಶಿವನಾಮಕ್ಕೆ ಸಂಸಾರವನ್ನು ಹೋಗಲಾಡಿಸುವ ಶಕ್ತಿಯು ಬರುವುದಿಲ್ಲ ॥ ಎಲೈ ಅರ್ಜುನನೇ, ಮನುಷ್ಯನು ಯಾವಯಾವ ಭಾವನೆಯನ್ನು ಮಾಡುತ್ತಾ, ದೇಹವನ್ನು ಬಿಡುತ್ತಾನೋ । ಆಯಾ ಭಾವನೆಗೆ ಅನುರೂಪವಾದ ಜನ್ಮವನ್ನು ಪಡೆಯುತ್ತಾನೆ, ಏಕೆಂದರೆ ಅವನು ಸದಾ ಜೀವನದಲ್ಲಿ ಅದನ್ನೇ ಭಾವನೆ ಮಾಡಿರುತ್ತಾನಾದ್ದರಿಂದ ॥ ಗೀತೆಯ ಈ ಶ್ಲೋಕವನ್ನು ನೆನಪಿಸಿಕೊಳ್ಳುವುದಕ್ಕೆ ಯೋಗ್ಯವಾಗಿದೆ । ಮಹಾಪಾಪಗಳಿಂದ ಕೂಡಿದ್ದರೂ, ಎಲ್ಲಾ ಪಾಪಕರ್ಮಗಳಿಂದ ಕೂಡಿದ್ದರೂ । ಮನುಷ್ಯನು, ಸತ್ಪುರುಷರಿಂದ ಅಥವಾ ಭಗವಂತನಿಂದ ಅನುಗ್ರಹಿಸಲ್ಪಟ್ಟರೆ, ಪರಮಪದವನ್ನು ಹೊಂದುತ್ತಾನೆ ॥

8. ದಾನವಿಧಿಃ

ಮುಮೂರ್ಷುಃ ಪರಲೋಕಾರ್ಥಂ ಯಥಾಶಕ್ತಿ ದಾನಂ ಕುರ್ಯಾತ್ । ಇತಃ ಪ್ರದಾನಂಹ್ಯಮುಷ್ಮಿನ್ ಲೋಕೇ ಪ್ರಜಾ ಉಪಜೀವಂತಿ ಇತಿ ಶ್ರುತೇಃ (ತೈತ್ತಿರೀಯ ಸಂಹಿತಾ 3–2–9) ॥

ಸಾಯಲು ಹೊರಟಿರುವ ಮನುಷ್ಯನು, ಉತ್ತಮ ಪರಲೋಕವನ್ನು ಹೊಂದಲು ಯಥಾಶಕ್ತಿ ದಾನವನ್ನು ಮಾಡಬೇಕು । ಭೂಲೋಕದಲ್ಲಿ ಕೊಟ್ಟಂತಹ ಹವಿಸ್ಸಿನಿಂದಲೇ ಹಾಗೂ ದಾನಾದಿಗಳಿಂದಲೇ ಪರಲೋಕದಲ್ಲಿ ಪ್ರಜೆಗಳು ಜೀವನ ನಡೆಸುತ್ತಾರೆ ಎಂದು ವೇದದಲ್ಲಿದೆ ॥

ತಥಾ ಮಹಾಭಾರತೇ –

ವಿದ್ಯಾ ಪ್ರವಸತೋ ಮಿತ್ರಂ ಭಾರ್ಯಾ ಮಿತ್ರಂ ಗೃಹೇ ಸತಃ ।
ಆತುರಸ್ಯ ಭಿಷಜ್ಞ್ಮಿತ್ರಂ ದಾನಂ ಮಿತ್ರಂ ಮರಿಷ್ಯತಃ ॥
ಷಡಶೀತಿ ಸಹಸ್ರಾಣಿ ಯೋಜನಾನಾಂ ಯುಧಿಷ್ಠಿರ ।
ಮಾನುಷ್ಯಸ್ಯ ಚ ಲೋಕಸ್ಯ ಯಮಲೋಕಸ್ಯ ಚಾಂತರಂ ॥
ನ ತತ್ರ ವೃಕ್ಷಛಾಯಾ ವಾ ನ ವಾಪ್ಯೋ ನ ಚ ದೀರ್ಘಿಕಾಃ ।
ನ ಗ್ರಾಮೋ ನಾಶ್ರಮೋ ವಾಪಿ ನೋದ್ಯಾನಂ ಕಾನನಾನಿ ವಾ ॥
ನ ಕಿಂಚಿದ್ವಿಶ್ರಮಸ್ಥಾನಂ ಪಥಿತಸ್ಮಿನ್ ಯುಧಿಷ್ಠಿರ ।
ಕಂಟಕಾಕೀರ್ಣಮಾರ್ಗೇಣ ತಪ್ತವಾಲುಕ ಪಾಂಸುನಾ ॥
ದಹ್ಯಮಾನಾಸ್ತು ಗಚ್ಛಂತಿ ನರಾ ದಾನ ವಿವರ್ಜಿತಾಃ ।
ತಸ್ಮಾದ್ದಾನಂ ತು ಕರ್ತವ್ಯಂ ಮೃತಿಕಾಲೇ ಕಥಂಚನ ॥

ಪ್ರವಾಸ ಮಾಡುವವನಿಗೆ ವಿದ್ಯೆಯೇ ಸ್ನೇಹಿತನು, ಮನೆಯಲ್ಲಿ ಗೃಹಸ್ಥನಾಗಿ ಕರ್ಮಾನುಷ್ಠಾನ ಮಾಡಿಕೊಂಡು ಧರ್ಮದಿಂದಿದ್ದರೆ ಅವನಿಗೆ ಹೆಂಡತಿಯೇ ಸ್ನೇಹಿತೆಯು । ರೋಗಿಷ್ಠನಿಗೆ ವೈದ್ಯನೇ ಸ್ನೇಹಿತನು, ಸಾಯುತ್ತಿರುವವನಿಗೆ ದಾನವೇ ಸ್ನೇಹಿತನು ॥

ಎಲೈ ಧರ್ಮರಾಜನೇ, 86 ಸಾವಿರ ಯೋಜನಗಳು (1 ಯೋಜನ = 61 ಮೈಲಿ), ಮನುಷ್ಯಲೋಕಕ್ಕೂ ಯಮಲೋಕಕ್ಕೂ ಇರುವ ದೂರವು ॥

ಆ ಯಮಲೋಕದಲ್ಲಿ ಮರದ ಛಾಯೆಯಾಗಲೀ ಬಾವಿ, ಕೆರೆ, ನದಿಗಳಾಗಲೀ ಯಾವುದೂ ಇರುವುದಿಲ್ಲ । ಗ್ರಾಮವಾಗಲೀ, ಆಶ್ರಮಗಳಾಗಲೀ, ಉದ್ಯಾನಗಳಾಗಲೀ, ಕಾಡುಗಳಾಗಲೀ ಅಲ್ಲಿರುವುದಿಲ್ಲ ॥

ಆ ಯಮಲೋಕದ ದಾರಿಯಲ್ಲಿ ಎಲೈ ಧರ್ಮರಾಜನೇ, ಎಲ್ಲೂ ಕೂಡ ವಿಶ್ರಾಂತಿಸ್ಥಾನವು ಇರುವುದಿಲ್ಲ । ಮುಳ್ಳುಕಂಟಿಗಳಿಂದ ತುಂಬಿದ ಸುಡುತ್ತಿರುವ ಮತ್ತು ಅತಿಘೋರವಾದ ಧೂಳುಗಳುಳ್ಳ ದಾರಿಯಿಂದ ॥

ಸುಡಲ್ಪಟ್ಟವರಾಗುತ್ತಾ, ಜೀವಿತಕಾಲದಲ್ಲಿ ದಾನವನ್ನು ಮಾಡದೇ ಇರುವಂತಹ ಮನುಷ್ಯರು ಇಂತಹ ನರಕಲೋಕಕ್ಕೆ ಹೋಗುತ್ತಾರೆ । ಆದ್ದರಿಂದ ಮರಣಕಾಲದಲ್ಲಿಯಾದರೂ ಹೇಗಾದರೂ ಪ್ರಯತ್ನಪಟ್ಟು ದಾನವನ್ನು ಮಾಡಬೇಕು ॥

9. ದಾನ ವಿಶೇಷಾಃ

ಶಾತಾತಪಃ –

ಅನ್ನಪಾನಾಶ್ವ ಗೋ ವಸ್ತ್ರ ಭೂಮಿ ಶಯ್ಯಾಸನಾನಿ ಚ ।
ಪ್ರೇತಲೋಕೇ ಪ್ರಶಸ್ತಾನಿ ದಾನಾನ್ಯಷ್ಟೌ ವಿಶೇಷತಃ ॥
ತಿಲಾಃ ಪಾಪಹರಾನಿತ್ಯಂ ತದ್ದಾನಂ ತು ಪ್ರಶಸ್ಯತೇ ।
ಯೋ ಹಿರಣ್ಯಂ ದದಾತ್ಯಂತೇ ಹ್ಯಮೃತತ್ವಂ ಭಜತೇ ಸಹ ॥

ಅನ್ನ, ನೀರು, ಕುದುರೆ, ಹಸು, ಬಟ್ಟೆ, ಭೂಮಿ, ಹಾಸಿಗೆ, ಆಸನ । ಸಾಯುವ ಕಾಲದಲ್ಲಿ ಈ 8 ದಾನಗಳು ವಿಶೇಷವಾಗಿ ಶ್ರೇಷ್ಠವಾದವುಗಳು ॥ **ಎಳ್ಳು, ಎಲ್ಲಾ ಪಾಪಗಳನ್ನೂ ನಾಶಗೊಳಿಸುತ್ತದೆ** ಎಂಬ ಕಾರಣದಿಂದ ಅಂತ್ಯಕಾಲದಲ್ಲಿ ತಿಲದಾನ ಮಾಡುವುದು ಉತ್ತಮ । ಅಂತ್ಯಕಾಲದಲ್ಲಿ ಯಾವನು **ಚಿನ್ನದ** ದಾನವನ್ನು ಮಾಡುತ್ತಾನೋ ಅವನು **ಅಮೃತಸ್ವರೂಪವನ್ನು** ಪಡೆಯುತ್ತಾನೆ ॥

ವ್ಯಾಸಃ –

ಮುಮುಕ್ಷೂಣಾಂ ಬ್ರಹ್ಮವಿದಾಮಪಿ ಗೃಹಸ್ಥಾನಾಂ ಈಶ್ವರ ಪ್ರೀತ್ಯರ್ಥಂ ದೇಯಮೇವ । ದಾನಕ್ರಿಯಾಶ್ಚ ವಿವಿಧಾಃ ಕ್ರಿಯಂತೇ ಮೋಕ್ಷ ಕಾಂಕ್ಷಿಭಿಃ ಇತಿ ಸ್ಮರಣಾತ್ (ಗೀತಾ–ಅ, 17/25) । ಸಂಜ್ಞಾಜ್ಞಾನೌ ಮರಣೇऽಪಿ ವಾ ಹಿತೈಷಿ ಪುತ್ರಾದಿರ್ದದ್ಯಾತ್ 'ಆತುರೋ ವಾऽಥ ಪುತ್ರೋವಾ ದದ್ಯುರಾಸನ್ನ ಬಾಂಧವಾಃ' ಇತಿ ॥

ಗೃಹಸ್ಥರಾಗಿದ್ದು, ಮೋಕ್ಷವನ್ನು ಪಡೆಯಲು ಇಚ್ಛೆಯುಳ್ಳವರೂ ಮತ್ತು ಬ್ರಹ್ಮಜ್ಞಾನಿಗಳೂ ಕೂಡ, **ಈಶ್ವರಪ್ರೀತ್ಯರ್ಥವಾಗಿ** ಈ ದಾನಗಳನ್ನು ಮಾಡಲೇಬೇಕು।

ಏಕೆಂದರೆ – ಮೋಕ್ಷವನ್ನು ಪಡೆಯಲು ಇಚ್ಛೆಯುಳ್ಳವರು ದಾನ ಮುಂತಾದ ಕರ್ಮಗಳನ್ನು ಮಾಡಬೇಕು ಎಂದು ಭಗವದ್ಗೀತೆಯಲ್ಲಿರುವುದರಿಂದ । ಅಂತ್ಯಕಾಲದಲ್ಲಿ, ಎಚ್ಚರತಪ್ಪಿದರೆ, ಅಥವಾ ಮರಣವೇ ಸಂಭವಿಸಿದರೆ, ಆಗ ಆ ಮೃತನ ಹಿತೈಷಿಗಳಾದ ಪುತ್ರ, ಮೊದಲಾದವರು ಈ ದಾನಗಳನ್ನು ಮಾಡಬೇಕು। ಅಂತ್ಯಕಾಲದಲ್ಲಿ, ಸಾಯಲು ಹೊರಟವನು ಅಥವಾ ಅವನ ಮಗನು ಅಥವಾ ಬಂಧುಗಳು ಈ ದಾನಗಳನ್ನು ಮಾಡಬಹುದು ಎಂದು ವ್ಯಾಸಮಹರ್ಷಿಗಳು ಹೇಳಿದ್ದಾರೆ ॥

ಸ್ಮೃತಿರತ್ನೇऽಪಿ –

ಉತ್ಕ್ರಾಂತಿ ವೈತರಣ್ಯೌ ಚ ದಶದಾನಾನಿ ಚೈವ ಹಿ ।
ಪ್ರೇತೇऽಪಿ ಕೃತ್ವಾ ತಂ ಪ್ರೇತಂ ಶವಧರ್ಮೇ ನಿಯೋಜಯೇತ್ ॥

ಉತ್ಕ್ರಾಂತಿ ಗೋದಾನ, ವೈತರಣೀ ಗೋದಾನ, ಮತ್ತು ದಶದಾನಾದಿಗಳನ್ನು । ಮರಣಸಂಭವಿಸಿದ ಮೇಲೂ ಕೂಡ ಆ ಮೃತನಿಗಾಗಿ ಮಾಡಿ, ನಂತರ ಆ ಮೃತನನ್ನು ಔರ್ಧ್ವದೈಹಿಕ ಕರ್ಮದಲ್ಲಿ ವಿನಿಯೋಗಿಸಬೇಕು ॥

ಪ್ರಚೇತಾಃ –

ಗೋ ಭೂ ತಿಲ ಹಿರಣ್ಯ ಆಜ್ಯ ವಸ್ತ್ರ ಧಾನ್ಯ ಗುಡಾನಿ ಚ ।
ರೌಪ್ಯಂ ಲವಣಂ ಇತ್ಯಾಹುಃ ದಶದಾನಾನಿ ಪಂಡಿತಾಃ ॥
ಏತಾನಿ ದಶದಾನಾನಿ ನರಾಣಾಂ ಮೃತ ಜನ್ಮನೋಃ ।
ಕುರ್ಯಾತ್ ಅಭ್ಯುದಯಾರ್ಥಂ ಚ ಪ್ರೇತೇऽಪಿ ಹಿ ಪರತ್ರ ಚ ॥
ಭೂಮಿಭೋಜನ ಪರ್ಯಾಪ್ತ ದ್ರೋಣದ್ವಯಮಿತಾಸ್ತಿಲಾಃ ।

ನಿಷ್ಕತ್ರಯಂ ಸುವರ್ಣಂ ಸ್ಯಾದಾಜ್ಯಂ ಪ್ರಸ್ಥ ಚತುಷ್ಟಯಮ್ ॥
ಸೂಕ್ಷ್ಮವಸ್ತ್ರ ದ್ವಯಂ ಧಾನ್ಯಂ ಸಾರ್ಧಖಾರೀಕಮುಚ್ಯತೇ ।
ಗುಡಂ ಷಷ್ಟಿಪಲಂ ಚೈವ ರೌಪ್ಯಂ ನಿಷ್ಕ ಚತುಷ್ಟಯಮ್ ॥
ಲವಣಂ ಸಾರ್ಧಖಾರೀಕಂ ದಶದಾನಂ ಪ್ರಮಾಣತಃ ॥

ಹಸು, ಭೂಮಿ, ಎಳ್ಳು, ಚಿನ್ನ, ತುಪ್ಪ, ಬಟ್ಟೆ, ಧಾನ್ಯಗಳು ಮತ್ತು ಬೆಲ್ಲ । ಬೆಳ್ಳಿ, ಉಪ್ಪು, ಇವುಗಳ ದಾನವನ್ನು ತಿಳಿದವರು ದಶದಾನವೆಂದು ಕರೆಯುತ್ತಾರೆ ॥ ಮನುಷ್ಯನು ಹುಟ್ಟಿದಾಗಲೂ, ಸತ್ತಾಗಲೂ ಈ ದಶದಾನಗಳನ್ನು । ತನ್ನ ಶ್ರೇಯಸ್ಸಿಗಾಗಿಯೂ ಹಾಗೂ ಸತ್ತನಂತರವೂ ಸಹ ಮಾಡಬೇಕು ॥ ಭೂದಾನವನ್ನು ಅವನ ಜೀವನಕ್ಕೆ ಬೇಕಾಗುವಷ್ಟು ಮಾಡಬೇಕು, 2 ದ್ರೋಣ(ಬಕೇಟು) ಎಳ್ಳನ್ನು ದಾನಮಾಡಬೇಕು । 3 ತೊಲ (36ಗ್ರಾಂ) ಚಿನ್ನವನ್ನು ದಾನ ಮಾಡಬೇಕು, ತುಪ್ಪವನ್ನು 4 ಪ್ರಸ್ಥ (8 ಸೇರು=2 ಕೆ.ಜಿ) ಪ್ರಮಾಣದಲ್ಲಿ ದಾನ ಮಾಡಬೇಕು ॥ 2 ಜೊತೆ ಬಟ್ಟೆಗಳನ್ನು ದಾನಮಾಡಬೇಕು, ಧಾನ್ಯವನ್ನು 1.5 ಖಾರಿ (ಸುಮಾರು 5 ಕೇಜಿ) ಪ್ರಮಾಣದಲ್ಲಿ ದಾನಮಾಡಬೇಕು । ಬೆಲ್ಲವನ್ನು 60 ಪಲ (ಸುಮಾರು 8 ಕೇಜಿ) ಪ್ರಮಾಣದಲ್ಲಿ ದಾನಮಾಡಬೇಕು, ಬೆಳ್ಳಿಯನ್ನು 4 ತೊಲೆ(48 ಗ್ರಾಂ)ಪ್ರಮಾಣದಲ್ಲಿ ಮಾಡಬೇಕು ॥ ಉಪ್ಪನ್ನು 1.5 ಖಾರಿ (ಸುಮಾರು 5 ಕೇಜಿ) ಪ್ರಮಾಣದಲ್ಲಿ ದಾನಮಾಡಬೇಕು, ಹೀಗೆ ಈ ಪ್ರಮಾಣಗಳಲ್ಲಿ ದಾನಮಾಡಬೇಕು ॥

ಭಾರತೇ –

ಯೋ ಮೃತ್ಯುಕಾಲೇ ಸಂಪ್ರಾಪ್ತೇ ಗಾಂ ದದಾತಿ ಪಯಸ್ವಿನೀಮ್ ।
ಗವಾದರ್ಶಿತ ಮಾರ್ಗಸ್ತು ಬ್ರಹ್ಮಲೋಕೇ ಮಹೀಯತೇ ॥
ಚತುಸ್ಸಾಗರ ಪರ್ಯಂತಂ ಸಶೈಲ ವನಕಾನನಾಂ ।
ದತ್ವಾ ಯತ್ಫಲಮಾಪ್ನೋತಿ ಸಾಲಗ್ರಾಮಾತ್ತದಶ್ನುತೇ ॥

ಬ್ರಹ್ಮಾಂಡಕೋಟಿ ದಾನೇನ ಯತ್ಫಲಂ ಭವತಿ ಪ್ರಭೋ ।
ತತ್ಫಲಂ ಸಮವಾಪ್ನೋತಿ ಶಿವಲಿಂಗ ಪ್ರದಾನತಃ ॥
ಹಿರಣ್ಯಂ ಭೂಮಿದಾನಂ ಚ ತಿಲಾನ್ ಶಕ್ತ್ಯಾ ಚ ದಾಪಯೇತ್ ।
ಕುಟುಂಬಿನೇ ದರಿದ್ರಾಯ ಶ್ರೋತ್ರಿಯಾಯ ತಪಸ್ವಿನೇ ॥
ಯದ್ದಾನಂ ದೀಯತೇ ತಸ್ಮೈ ತದ್ದಾನಂ ಸ್ವರ್ಗಸಾಧನಂ ।
ಗೃಹೀತ ದಾನಪಾಥೇಯಾಃ ಪ್ರಾಯಾಂತಿ ತ್ರಿದಿವಂ ನರಾಃ ॥
ಭ್ರಾತರೋ ವಾऽಥ ಪುತ್ರೋ ವಾ ದದ್ಯುರಾಸನ್ನ ಬಾಂಧವಾಃ ॥

ಯಾವನು, ತನಗೆ ಮರಣಕಾಲವು ಬಂದೊದಗಿದಾಗ, ಹಾಲುಕೊಡುವ ಕರುಸಹಿತ ಹಸುವನ್ನು ದಾನ ಮಾಡುತ್ತಾನೋ । ಅವನು ಹಸುಗಳಿಂದ ತೋರಿಸಲ್ಪಟ್ಟಂತಹ ದಾರಿಯಾದ ಬ್ರಹ್ಮಲೋಕವನ್ನು ಪಡೆಯುತ್ತಾನೆ ॥ ಅಂತ್ಯಕಾಲದಲ್ಲಿ, 4 ಸಾಗರದವರೆಗಿನ ಭೂಮಿ ಹಾಗೂ ಪರ್ವತ, ಕಾಡು, ಅರಣ್ಯಗಳ ಸಹಿತವಾಗಿ । ದಾನ ಮಾಡಿದರೆ ಯಾವ ಫಲವನ್ನು ಪಡೆಯುತ್ತಾನೋ, 1 ಸಾಲಿಗ್ರಾಮದ ದಾನದಿಂದ ಆ ಫಲಗಳನ್ನು ಪಡೆಯುತ್ತಾನೆ ॥ ಹಾಗೆಯೇ ಬ್ರಹ್ಮಾಂಡಕೋಟಿಯ ದಾನದಿಂದ ಯಾವಫಲವು ಲಭಿಸುತ್ತದೋ । ಆ ಫಲವನ್ನು 1 ಶಿವಲಿಂಗದ ದಾನದಿಂದ ಪಡೆಯುತ್ತಾನೆ ॥ ಚಿನ್ನ, ಭೂ, ಎಳ್ಳಿನ ದಾನಗಳನ್ನು ಯಥಾಶಕ್ತಿಯಾಗಿ ದಾನಮಾಡಿಸಬೇಕು । ಈ ದಾನಗಳನ್ನು ಗೃಹಸ್ಥನಾದ, ಬಡವನಾದ, ಶ್ರೋತ್ರಿಯಬ್ರಹ್ಮನಿಷ್ಠನಾದ, ತಪಸ್ವಿಯಾದವನಿಗೆ ಕೊಡಿಸಬೇಕು ॥ ಇಂತಹ ಮನುಷ್ಯನಿಗೆ ಯಾರು ದಾನವನ್ನು ಕೊಡುತ್ತಾರೋ ಹಾಗೂ ಇಂತಹಾ ಯೋಗ್ಯತೆಯುಳ್ಳವರು ಈ ದಾನಗಳನ್ನು ಸ್ವೀಕರಿಸುತ್ತಾರೋ, ಅವರಿಬ್ಬರಿಗೂ ಆ ದಾನವು ಸ್ವರ್ಗಕ್ಕೆ ಸಾಧನವಾಗುತ್ತದೆ । ಆ ದಾನವನ್ನು ಕೊಟ್ಟವನು ಮತ್ತು ಪಡೆದವನು ಇಬ್ಬರೂಸಹ ಅದರಫಲವಾಗಿ ಸ್ವರ್ಗವನ್ನು ಪಡೆಯುತ್ತಾರೆ ॥ ಮರಣವನ್ನು ಹೊಂದುತ್ತಿರುವವನು ಈ ದಾನಗಳನ್ನು ಮಾಡಲು ಅಶಕ್ತನಾದರೆ, ಆಗ ಅವನ ಅಣ್ಣ–ತಮ್ಮಂದಿರೋ ಅಥವಾ ಮಗನೋ ಅಥವಾ ಬಂಧುಗಳೋ ಮಾಡಬೇಕು ॥

ಉತ್ಕ್ರಾಂತಿ ಗೋದಾನ ಮಂತ್ರಃ –

ಅತ್ಯುತ್ಕ್ರಾಂತೌ ಪ್ರವೃತ್ತಸ್ಯ ಸುಖೋತ್ಕ್ರಮಣ ಸಿದ್ಧಯೇ ।
ತುಭ್ಯಂ ಸಂಪ್ರದದೇ ಧೇನುಮಿಮಾಂ ಉತ್ಕ್ರಾಂತಿ ಸಂಜ್ಞಿಕಾಮ್ ॥

ದಶದಾನ ಮಂತ್ರಗಳನ್ನು ದಾನಪ್ರಕರಣದಲ್ಲಿ ಹೇಳಿದೆ । ಉತ್ಕ್ರಾಂತಿ ಗೋದಾನ ಮಂತ್ರವನ್ನು ಈಗ ಹೇಳುತ್ತೇವೆ । ಪ್ರಾಣೋತ್ಕ್ರಮಣ ಸಮಯದಲ್ಲಿ, ಸುಖವಾಗಿ ಪ್ರಾಣವು ಹೋಗುವುದಕ್ಕಾಗಿ । ಬ್ರಾಹ್ಮಣನಾದ ನಿನಗೆ ಉತ್ಕ್ರಾಂತಿ ನಿಮಿತ್ತದಿಂದ ಕೊಡುವ ಹಸುವನ್ನು ಕೊಡುತ್ತೇನೆ ॥

10. ಅಂತ್ಯಕಾಲೇ ಜಪ್ಯಮಂತ್ರಾಃ

ಶೌನಕಃ –

ನಾನಾನಮಿತಿ ಸೂಕ್ತಂ ತು ಹ್ಯಂತ್ಯಕಾಲೇ ಜಪೇತ್ಸಕೃತ್ ।
ಲಬ್ಧ್ವಾ ಚೈವ ಪರಂ ಸ್ಥಾನಮಮೃತತ್ವಂ ಚ ಗಚ್ಛತಿ ॥

ನಾನಾನಂ ವಾ ಉನೋಧಿಯಃ..... (ಅಷ್ಟಕ 7 ಅಧ್ಯಾಯ 5) ಎಂಬ ಋಗ್ವೇದಮಂತ್ರಸೂಕ್ತವನ್ನು ಅಂತ್ಯಕಾಲದಲ್ಲಿ ಒಮ್ಮೆ ಜಪಿಸಬೇಕು । ಇದರಿಂದ ಹೆಚ್ಚಿನ ಪುಣ್ಯಲೋಕವನ್ನು ಪಡೆಯುತ್ತಾನೆ ॥

ವಿಷ್ಣುಃ –

ಶ್ರಾವಯೇತ್ಪುಣ್ಯ ಸೂಕ್ತಾನಿ ಪುಣ್ಯಮಂತ್ರಾಕ್ಷರಾಣಿ ಚ ।
ದ್ವಿಜಸ್ಯ ದಕ್ಷಿಣೇಕರ್ಣೇ ಪುತ್ರಾದಿಃ ಪ್ರಾಣಸಂಶಯೇ ॥

ಪ್ರಾಣಹೋಗುವ ಸಮಯದಲ್ಲಿ, ಸಾಯುತ್ತಿರುವವನಿಗೆ ಪುಣ್ಯಮಂತ್ರಗಳನ್ನೂ, ಪುಣ್ಯಶಬ್ದಗಳನ್ನೂ ಕೇಳಿಸಬೇಕು। ಸಾಯುತ್ತಿರುವವನ ಮಗನು ಸಾಯುತ್ತಿರುವವನ ಬಲಕಿವಿಯಲ್ಲಿ ಈ ಮಂತ್ರಗಳನ್ನು ಹೇಳಬೇಕು ॥

ಸ್ಮೃತ್ಯಂತರೇ –

ಕರ್ಣೇ ಜಪೇದೀಶವಾಕ್ಯಂ ಶಾಸ್ತ್ರಾದಿಭಿರುದೀರಿತಮ್ ॥

ಸಾಯುತ್ತಿರುವವನ ಕಿವಿಯಲ್ಲಿ ಶಾಸ್ತ್ರಾದಿಗಳಿಂದ ಹೇಳಲ್ಪಟ್ಟಂತಹ ಈಶ್ವರನ ನಾಮಾಕ್ಷರಗಳನ್ನು ಹೇಳಬೇಕು ॥

ಶುದ್ಧಿ ನಿರ್ಣಯೇ –

ಶುದ್ಧಿನಿರ್ಣಯೇ ಚ ತದ್ವ್ಯಾಖ್ಯಾತಂ ಈಶವಾಕ್ಯಂ ಪಂಚಾಕ್ಷರೀ, ಅಷ್ಟಾಕ್ಷರೀ, ರಾಮಷಡಕ್ಷರೀ, ಪ್ರಣವ, ಉಪನಿಷದ್ವಾಕ್ಯಾನಿ ಚ ॥

ಶುದ್ಧಿನಿರ್ಣಯವೆಂಬ ಗ್ರಂಥದಲ್ಲಿ, ಸಾಯುವ ಸಮಯದಲ್ಲಿ – ಈಶವಾಕ್ಯವೆಂಬ ಪಂಚಾಕ್ಷರಿಯನ್ನೋ (ಓಂ ನಮಶ್ಶಿವಾಯ), ಅಷ್ಟಾಕ್ಷರಿಯನ್ನೋ (ಓಂ ನಮೋ ನಾರಾಯಣಾಯ), ರಾಮಷಡಕ್ಷರಿಯನ್ನೋ (ಓಂ ರಾಮಾಯನಮಃ), ಪ್ರಣವವನ್ನೋ(ಓಂಕಾರ), ಉಪನಿಷದ್ವಾಕ್ಯಗಳನ್ನೋ ಕಿವಿಯಲ್ಲಿ ಹೇಳಬೇಕು ॥

ಆಪಸ್ತಂಬಃ –

ಬ್ರಹ್ಮವಿದಾಪ್ನೋತಿ ಪರಂ, ಭೃಗುರ್ವೈ ವಾರುಣಿಃ ಇತ್ಯೇತಾವನುವಾಕೌ ಬ್ರಹ್ಮವಿದೋ ದಕ್ಷಿಣೇಕರ್ಣೇ ಜಪತಿ । ಇತರೇಷಾಂ ಆಯುಷಃ ಪ್ರಾಣಂ, ಇತಿ । ಮರಣ ಸಮೀಪಕಾಲೇ ಶುದ್ಧಭೂಮೌ ದಕ್ಷಿಣಾಗ್ರೇಷು ದರ್ಭೇಷು ದಕ್ಷಿಣಾಶಿರಸಂ ಸಂವೇಶ್ಯ, ಮುಮೂಷೋರ್ಃ ಬ್ರಹ್ಮವಿದೋ ದಕ್ಷಿಣೇಕರ್ಣೇ ಬ್ರಹ್ಮವಿದಾಪ್ನೋತಿ, ಭೃಗುರ್ವೈ ವಾರುಣಿಃ ಇತ್ಯನುವಾಕದ್ವಯಂ ಇತರಸ್ಯ ಕರ್ಣೇ ಆಯುಷಃಪ್ರಾಣಂ ಇತ್ಯನುವಾಕಂ ಸನ್ನಿಹಿತಃ ಪುತ್ರಾದಿಃ ಕಶ್ಚಿಜ್ಜಪೇದಿತ್ಯರ್ಥಃ ॥

ಉಪನಿಷತ್ತಿನ ಬ್ರಹ್ಮಾನಂದವಲ್ಲಿ ಮತ್ತು ಭೃಗುವಲ್ಲಿಗಳ ಮೊದಲನೇ ಅನುವಾಕವನ್ನು ದೇಹಬಿಡುತ್ತಿರುವ ಅಥವಾ ಬಿಟ್ಟಿರುವ ಬ್ರಹ್ಮಜ್ಞಾನಿಯ ಬಲಕಿವಿಯಲ್ಲಿ ಹೇಳಬೇಕು। ಬೇರೆಯವರಿಗೆ, ಆಯುಷಃ ಪ್ರಾಣಗ್ಂ..., ಎಂಬ ಮಂತ್ರವನ್ನು ಅವನ ಮಕ್ಕಳು ಹೇಳಬೇಕು । ಮರಣ ಸಮೀಪಿಸಿದಾಗ, ಶುದ್ಧವಾದ ನೆಲದಲ್ಲಿ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹಾಕಿ, ದಕ್ಷಿಣಕ್ಕೆ ತಲೆಮಾಡಿ, ಸಾಯುತ್ತಿರುವವನನ್ನು ಮಲಗಿಸಿ, ಅವನ ಬಲಕಿವಿಯಲ್ಲಿ ಅವನು ಬ್ರಹ್ಮಜ್ಞಾನಿಯಾಗಿದ್ದರೆ(ವೇದ, ಶಾಸ್ತ್ರಗಳ ಜ್ಞಾನವನ್ನು ಚೆನ್ನಾಗಿ ತಿಳಿದು, ಅನುಸರಿಸುತ್ತಿದ್ದರೆ), ಮೇಲೆತಿಳಿಸಿದ 2 ಅನುವಾಕಗಳನ್ನು ಅವನ ಮಕ್ಕಳು ಹೇಳಬೇಕು, ಬೇರೆಯವರಿಗೆ ಆಯುಷಃ..., ಮಂತ್ರವನ್ನು ಅವನ ಮಕ್ಕಳು ಹೇಳಬೇಕು ॥

ತಥಾ ಬೋಧಾಯನೀಯೇ –

ಭೂಮೌ ದರ್ಭಾಸ್ತೃತಾಯಾಂ ತಂ ಶಾಯಯೇನ್ಮೃತಿ ಸಂಶಯೇ ।
ಜಪೇತ್ತದ್ದಕ್ಷಿಣೇ ಕರ್ಣೇ ಆಯುಷಃ ಪ್ರಾಣಮಿತ್ಯಪಿ ॥

ಭೂಮಿಯಲ್ಲಿ ದರ್ಭೆಗಳನ್ನು ಹರಡಿ ಅದರಮೇಲೆ, ಸಾಯಲು ಹೊರಟವನನ್ನು ಮಲಗಿಸಬೇಕು । ಅವನ ಬಲಕಿವಿಯಲ್ಲಿ ಆಯುಷಃ..., ಮಂತ್ರವನ್ನು ಅವನ ಮಕ್ಕಳು ಜಪಿಸಬೇಕು ॥

ಕಾತ್ಯಾಯನಃ –

ದುರ್ಬಲಂ ಸ್ನಾಪಯಿತ್ವಾ ಚ ಶುದ್ಧಚೇಲಾಭಿ ಸಂವೃತಂ ।
ದಕ್ಷಿಣಾಶಿರಸಂ ಭೂಮೌ ಬರ್ಹಿಶ್ಮತ್ಯಾಂ ನಿವೇಶಯೇತ್ ॥
ಮುಮೂಷೋರ್ದಕ್ಷಿಣೇ ಕರ್ಣೇ ಬ್ರಹ್ಮಮಂತ್ರಾನ್ ಜಪೇತ್ ಸುತಃ ॥

ತುಂಬಾ ಅಶಕ್ತನಾದ, ಸಾಯಲು ಹೊರಟ ಮನುಷ್ಯನನ್ನು ಸ್ನಾನಮಾಡಿಸಿ, ಶುದ್ಧವಾದ ಬಟ್ಟೆಯನ್ನು ಉಡಿಸಿ । ಅವನನ್ನು ದಕ್ಷಿಣಕ್ಕೆ ತಲೆಇರುವಂತೆ ಮಾಡಿ ದರ್ಭೆಗಳ ಮೇಲೆ ಮಲಗಿಸಬೇಕು ॥ ಅವನ ಬಲಕಿವಿಯಲ್ಲಿ ಮಗನು ಬ್ರಹ್ಮಮಂತ್ರಗಳನ್ನು ಜಪಿಸಬೇಕು ॥

ವಸಿಷ್ಠೋ ವಿಶೇಷಮಾಹ –

ಪಿತುರ್ಮರಣ ಕಾಲೇತು ಪುತ್ರಸ್ತು ಋಣಮೋಚನಾತ್ ।
ಮಸ್ತಕಂ ತು ಸಮಾಧಾಯ ದಕ್ಷಿಣೇऽಸ್ಯ ತು ಜಾನುನೀ ॥
ಶ್ರಾವಯೇತ್ಪುಣ್ಯ ಸೂಕ್ತಾನಿ ಪುಣ್ಯಮಂತ್ರಾಕ್ಷರಾಣಿ ಚ ।
ತತಸ್ತು ನಿರ್ಗತೇ ವಾಯೌ ಕುಶಾಗ್ರೇಷು ವಿನಿಕ್ಷಿಪೇತ್ ॥

ತಂದೆಯ ಮರಣಕಾಲದಲ್ಲಿ, ಮಗನು ತಂದೆಯ ಋಣವನ್ನು ತೀರಿಸಲು । ತಂದೆಯ ತಲೆಯನ್ನು ತನ್ನ ಬಲತೊಡೆಯಮೇಲೆ ಇರಿಸಿಕೊಂಡು ॥

ಪುಣ್ಯಸೂಕ್ತಗಳನ್ನು ಮತ್ತು ಮಂತ್ರಗಳನ್ನು ಬಲಕಿವಿಯಲ್ಲಿ ಹೇಳಬೇಕು । ಪ್ರಾಣಹೋದಮೇಲೆ ದರ್ಭೆಗಳ ಮೇಲೆ ಮಲಗಿಸಬೇಕು ॥

11. ಮರಣದಿನ ಗುಣದೋಷ

ಗೌತಮಃ –

ದಿವೋತ್ತರಾಯಣೇ ಶುಕ್ಲಪಕ್ಷೇ ಚ ಮರಣಂ ಶುಭಂ ।
ಭದ್ರೇ ತ್ರಿಪದ ನಕ್ಷತ್ರೇ ಭೃಗ್ವಂಗಾರ ಬೃಹಸ್ಪತೌ ॥
ಮರಣಂ ದಹನಂ ಚಾಸ್ಥಿಸಂಚಯಂ ತ್ರಿಗುಣಂ ಭವೇತ್ ।
ಭದ್ರೇ ತು ಭೂಮಿ ದಾನಂಸ್ಯಾತ್ ತ್ರಿಪದಕ್ಷೇ ಹಿರಣ್ಯಕಂ ॥
ವಾರೇ ವಾರಾಧಿ ದೇವಾನಾಂ ಪೂಜನಂ ಮೃತ್ಯುನಾಶನಂ ।
ತಿಲೈಃ ಪ್ರತಿಕೃತಿಂ ಕೃತ್ವಾ ದಹೇದ್ದೋಷೋಪಶಾಂತಯೇ ॥

ಹಗಲು – ಉತ್ತರಾಯಣ – ಶುಕ್ಲಪಕ್ಷ – ಇದು ಮರಣಕ್ಕೆ ಶುಭದಿನವು । ಭದ್ರಾಕರಣ – ತ್ರಿಪಾದ ನಕ್ಷತ್ರಗಳು(ಕೃತ್ತಿಕಾ, ಪುನರ್ವಸು, ಉತ್ತರ, ವಿಶಾಖಿ, ಉತ್ತರಾಷಾಢ, ಪೂರ್ವಾಭಾದ್ರಾ) – ಶುಕ್ರವಾರ – ಮಂಗಳವಾರ – ಗುರುವಾರ ॥ ಈ ದಿನಗಳಲ್ಲಿ ಮರಣವು ಅಥವಾ ದಹನ ಅಥವಾ ಅಸ್ಥಿಸಂಚಯನಗಳು ಆದರೆ । ಕ್ರಮವಾಗಿ – ಭದ್ರಾಕರಣಕ್ಕೆ ಪ್ರಾಯಶ್ಚಿತ್ತವಾಗಿ ಭೂಮಿದಾನ, ತ್ರಿಪಾದ ನಕ್ಷತ್ರಗಳಿಗೆ ಪ್ರಾಯಶ್ಚಿತ್ತವಾಗಿ ಹಿರಣ್ಯದಾನ ॥ ವಾರಗಳಿಗೆ ಆಯಾವಾರದ ಗ್ರಹಕ್ಕೆ ಪೂಜೆ ಈ ಪ್ರಾಯಶ್ಚಿತ್ತಗಳು ದೋಷವನ್ನು ಪರಿಹರಿಸುತ್ತವೆ । ಮತ್ತೂ ಎಳ್ಳಿನಿಂದ ಅವನ ಆಕಾರವನ್ನು ಮಾಡಿ, ದಹನವನ್ನೂ ಮಾಡಬೇಕು, ಹೀಗೆ ಮಾಡಿದರೆ ಕರ್ತೃವಿನ ಸಮಸ್ತಕಂಟಕಗಳೂ ನಿವಾರಣೆಯಾಗುತ್ತವೆ ॥

ಮಾರ್ಕಂಡೇಯಃ –

ಉತ್ತರಾಯಣಗೇ ಸೂರ್ಯೇ ಉತ್ತಮಾ ಮೃತಿರುಚ್ಯತೇ ।
ಶುಕ್ಲಪಕ್ಷೇ ಮೃತಿಸ್ತತ್ರ ಶ್ರೇಷ್ಠಾ ವಹ್ನಿಮೃತಿಃ ಶುಭಾ ॥
ಶ್ರೇಷ್ಠಾ ತತ್ರಾಪಿ ಮಧ್ಯಾಹ್ನೇ ಉಭಯೋಃ ಪಕ್ಷಯೋರಪಿ ।
ಏಕಾದಶ್ಯಾಂ ಮೃತಿಃ ಶ್ರೇಷ್ಠಾ ಮೋಕ್ಷದಾ ಸರ್ವಕಾಮದಾ ॥
ವಹ್ನಿಮೃತಿಃ ತೃತೀಯಾಯಾಂ ಮರಣಮ್ ॥

ಉತ್ತರಾಯಣದಲ್ಲಿ, ಮರಣವು ಅತ್ಯುತ್ತಮವೆಂದು ಹೇಳಲ್ಪಡುತ್ತದೆ । ಅದರಲ್ಲೂ ಶುಕ್ಲಪಕ್ಷದಲ್ಲಿಯೂ ಅತ್ಯುತ್ತಮವೇ, ಅದರಲ್ಲೂ ತದಿಗೆ ತಿಥಿಯಲ್ಲಿ ಮರಣವೂ ಶುಭವು ॥ ಅಲ್ಲೂ, ಮಧ್ಯಾಹ್ನದಲ್ಲಿ ಮರಣವು ಶುಕ್ಲಕೃಷ್ಣಪಕ್ಷಗಳಲ್ಲಿ ಶ್ರೇಷ್ಠವು । ಅದರಲ್ಲೂ ಏಕಾದಶಿಯಲ್ಲಿ ಮರಣವು ಎಲ್ಲ ಕಾಮನೆಗಳನ್ನೂ ಕೊಡುವ, ಮೋಕ್ಷವನ್ನೂ ಕೊಡತಕ್ಕದ್ದಾಗಿದೆ ॥ ವಹ್ನಿಮೃತಿ ಎಂದರೆ, ತದಿಗೆ ತಿಥಿಯಲ್ಲಿ ಮರಣವು ಎಂದರ್ಥವು ॥

ಭಾರತೇऽಪಿ –

ಸ್ಯಾದುತ್ತರಾಯಣೇ ಯಸ್ಯ ಮೃತಿಸ್ತತ್ರೋತ್ತಮಾ ಗತಿಃ ।
ಶುಕ್ಲಪಕ್ಷೇ ಹಿ ಮಧ್ಯಾಹ್ನೇ ಕೃಷ್ಣೇऽಪ್ಯೇಕಾದಶೀದಿನೇ ॥

ಯಾವನಿಗೆ ಉತ್ತರಾಯಣದಲ್ಲಿ ಸಾವುಂಟಾಗುತ್ತದೋ, ಅವನ ಸಾವು ಉತ್ತಮವು । ಶುಕ್ಲಪಕ್ಷದಲ್ಲಿ ಮಧ್ಯಾಹ್ನ, ಕೃಷ್ಣಪಕ್ಷದಲ್ಲಿ ಏಕಾದಶಿಯು ಮರಣಕ್ಕೆ ಉತ್ತಮವು ॥

ಗಾರ್ಗ್ಯಃ –

ಭದ್ರೇ ಭೂಮಿಪ್ರದಾನಂ ಸ್ಯಾತ್ ತ್ರಿಪದೇ ತು ಹಿರಣ್ಯಕಂ ।
ಅಂಗಾರಕೇ ತ್ವನಡ್ವಾಹೌ ಗುರೌ ವಸ್ತ್ರಂ ತು ದಕ್ಷಿಣಾ ॥
ಶುಕ್ರೇ ರಜತದಾನಂ ಸ್ಯಾತ್ತತ್ತದ್ದ್ರವ್ಯಪ್ರದಃ ಸುಖೀ ।
ವಾರೇವಾರಾಧಿ ದೈವತ್ಯಂ ದ್ರವ್ಯಂ ದತ್ವಾ ನ ದೋಷಭಾಕ್ ॥
ಇತಿ ಏವಂ ಸ್ಮೃತಿಷೂಕ್ತೋ ವಾರಾದಿನಿಷೇಧಃ ಕಾಲಾತಿಕ್ರಮ ವಿಷಯಃ॥

ಭದ್ರಾಕರಣದಲ್ಲಿ, ಮರಣಸಂಭವಿಸಿದರೆ, ಭೂದಾನವನ್ನು ಮಾಡಬೇಕು । ತ್ರಿಪಾದನಕ್ಷತ್ರಗಳಲ್ಲಿ ಸಂಭವಿಸಿದರೆ, ಹಿರಣ್ಯದಾನ ಮಾಡಬೇಕು । ಮಂಗಳವಾರ ಸಂಭವಿಸಿದರೆ, 2 ಎತ್ತುಗಳನ್ನು ದಾನ ಮಾಡಬೇಕು ಗುರುವಾರ ಸಂಭವಿಸಿದರೆ, ವಸ್ತ್ರವನ್ನು ದಕ್ಷಿಣೆಯಾಗಿ ಕೊಡಬೇಕು ॥ ಶುಕ್ರವಾರ ಸಂಭವಿಸಿದರೆ, ಬೆಳ್ಳಿದಾನ ಮಾಡಬೇಕು । ಹೀಗೆ ಆಯಾಯಾ ದೋಷಗಳಿಗೆ ಆಯಾಯಾ ದ್ರವ್ಯಗಳನ್ನು ದಾನಮಾಡುವವನು ಸುಖವನ್ನು ಪಡೆಯುತ್ತಾನೆ । ವಾರದೋಷದ ಪರಿಹಾರಕ್ಕಾಗಿ ಆಯಾಯಾ ವಾರಾಧಿದೇವತೆಗಳ ದ್ರವ್ಯವನ್ನು ದಾನಮಾಡುವುದರ ಮೂಲಕ ಆ ದೋಷಗಳನ್ನು ಕಳೆದುಕೊಳ್ಳಬಹುದು ॥ ಈ ರೀತಿಯಾಗಿ ಸ್ಮೃತಿಗಳಲ್ಲಿ ವಾರಾದಿಗಳ ನಿಷೇಧ ಮತ್ತು ಕಾಲಾತಿಕ್ರಮಗಳ ವಿಷಯಗಳು ಹೇಳಲ್ಪಟ್ಟಿದೆ ॥

ಲೋಕಾಕ್ಷಿಃ –

ಪ್ರತ್ಯಕ್ಷಮರಣೇ ತು ನ ದೋಷ ಇತ್ಯಾಹ ಲೋಕಾಕ್ಷಿಃ ।
ಪ್ರತ್ಯಕ್ಷೇತು ನ ಕಿಂಚಿತ್ ಪರೋಕ್ಷೇತು ಸೂಕ್ಷ್ಮಮತಃ ಪಶ್ಯೇತ್ ॥

ಪ್ರತ್ಯಕ್ಷಮರಣವಾದರೆ(ಕರ್ತೃಗಳ ಎದುರೇ ಅಥವಾ ಸ್ವಾಭಾವಿಕ ಮರಣ) ದೋಷವಿಲ್ಲವೆಂದು ಲೋಕಾಕ್ಷಿಯವರು ಅಭಿಪ್ರಾಯಪಡುತ್ತಾರೆ । ಪ್ರತ್ಯಕ್ಷದಲ್ಲಿ

ಮರಣವಾದರೆ ದೋಷವಿಲ್ಲ, ಪರೋಕ್ಷದಲ್ಲಿ ಮರಣವಾದರೆ ಈ ಎಲ್ಲಾ ನಿಯಮಗಳನ್ನು ಅತಿಸೂಕ್ಷ್ಮವಾಗಿ ಪರಿಶೀಲಿಸಿ ದೋಷವನ್ನು ಪರಿಹರಿಸಿಕೊಳ್ಳಬೇಕು॥

ಸ್ಮೃತ್ಯಂತರೇऽಪಿ –

ಪ್ರತ್ಯಕ್ಷಮರಣೇ ಪಿತ್ರೋರ್ನ ಪಶ್ಯೇತ್ ತಿಥಿವಾರಭಂ ।
ನೈವ ದೋಷಾವಹಂ ಪ್ರೋಕ್ತಮನ್ಯೇಷಾಮಪಿ ಸರ್ವದಾ ॥
ಪರೋಕ್ಷೇ ಸೂಕ್ಷ್ಮತಃ ಪಶ್ಯೇನ್ಮೃತೌ ತು ತಿಥಿವಾರಭಮ್ ॥

ಪ್ರತ್ಯಕ್ಷದಲ್ಲಿ, ತಂದೆ/ತಾಯಿಗಳ ಮರಣವಾದರೆ । ತಿಥಿ, ವಾರಾದಿ ಬೇರೆ ದೋಷಗಳನ್ನು ನೋಡಬೇಕಾಗಿಲ್ಲ ॥ ಪರೋಕ್ಷದಲ್ಲಿ ಮರಣವಾದರೆ, ತಿಥಿವಾರಾದಿಗಳನ್ನು ಸೂಕ್ಷ್ಮವಾಗಿ ನೋಡಿ, ಮುಂದುವರೆಯಬೇಕು ॥

ಬೃಹಸ್ಪತಿಃ –

ಮಾತಾಪಿತ್ರೋರ್ಮೃತಿ ಪ್ರಾಪ್ತೌ ಪುತ್ರೈರ್ದಾಹಾದಿ ಕರ್ಮ ಚ ।
ಪ್ರಾಪ್ತ ಕಾಲೇತು ಕರ್ತವ್ಯಂ ತಿಥ್ಯಾದಿರ್ನತು ದೋಷಕೃತ್ ॥

ತಂದೆ, ತಾಯಿಯರ ಮರಣವು ಸಂಭವಿಸಿದರೆ, ಮಕ್ಕಳು ದಾಹಾದಿ ಕರ್ಮಗಳನ್ನು ಮಾಡಬೇಕು । ಇದು ಮಕ್ಕಳ ಪ್ರಾಪ್ತಕಾಲದ ಕರ್ತವ್ಯವಾಗಿರುವುದರಿಂದ, ತಿಥ್ಯಾದಿಗಳು ದೋಷವನ್ನು ಉಂಟುಮಾಡುವುದಿಲ್ಲ ॥

ವಸಿಷ್ಠಃ –

ವೈಧೇ ಕರ್ಮಣಿ ತು ಪ್ರಾಪ್ತೇ ಕಾಲದೋಷಂ ನ ಚಿಂತಯೇತ್ ।
ಸದ್ಯಃ ಕ್ಷೌರಂ ಪ್ರಕುರ್ವೀತ ಸದ್ಯಃ ಶ್ರಾದ್ಧಾದಿ ಕರ್ಮ ಚ ॥

ವಿಧಿಕರ್ಮವು ಪ್ರಾಪ್ತವಾದಾಗ(ಕರ್ತವ್ಯಕರ್ಮವು), ಕಾಲಾದಿ ದೋಷಗಳನ್ನು ಚಿಂತಿಸಬಾರದು । ಪ್ರಾಪ್ತವಾದ ಕ್ಷಣದಲ್ಲಿ ಕ್ಷೌರವನ್ನು ಮಾಡಿಸಿಕೊಂಡು, ಶ್ರಾದ್ಧಾದಿಕರ್ಮಗಳನ್ನು ತಕ್ಷಣವೇ ಆರಂಭಿಸಬೇಕು ॥

ಏವಂ ಚ ಪ್ರತ್ಯಕ್ಷ ಮರಣೇ ಯದ್ಯಪಿ ವಾರಾದಿ ದೋಷೋ ನಾಸ್ತಿ ತಥಾಪಿ ಶಂಕಾಕಾಲೇ ಶಾಪಾಪನುತ್ತಯೇ ಮನಃಪ್ರೀತಯೇ ಚ ಬ್ರಾಹ್ಮಣೇಭ್ಯಃ ಶಕ್ತಿತಃ ಕಿಂಚಿತ್ ದತ್ವಾಽನುಜ್ಞಾಪ್ಯ ಶಂಕಿತದೋಷಾನ್ನಾಶಯೇತ್ ॥

ಈ ರೀತಿಯಾಗಿ, ಪ್ರತ್ಯಕ್ಷಮರಣದಲ್ಲಿ ವಾರಾದಿದೋಷಗಳು ಇಲ್ಲದಿದ್ದರೂ, ಮರಣದ ಕಾಲದ ವಿಷಯದಲ್ಲಿ ಸಂಶಯ ಉಂಟಾಗಲಾಗಿ ಆ ದೋಷಪರಿಹಾರಕ್ಕಾಗಿ ತಮ್ಮ ಮನಸ್ಸಿನ ಪ್ರೀತಿಗಾಗಿ ಬ್ರಾಹ್ಮಣರಿಗೆ ಯಥಾಶಕ್ತಿ ದಾನವನ್ನು ಮಾಡಿ, ಅವರ ಅನುಜ್ಞೆಯನ್ನು ಪಡೆದು, ಶಂಕಿತದೋಷಗಳನ್ನು ನಿವಾರಣೆ ಮಾಡಿಕೊಳ್ಳಬೇಕು ॥

ತದಾಹ ಹಾರೀತಃ –

ಕುರ್ವೀತ ಸರ್ವಕರ್ಮಾಣಿ ಬ್ರಾಹ್ಮಣಾನಾಮನುಜ್ಞಯಾ ।
ಬ್ರಾಹ್ಮಣೈರಪ್ಯನುಜ್ಞಾನಾದ್ದೋಷೋ ನಶ್ಯತ್ಯಸಂಶಯಃ ॥

ಹಾರೀತಮುನಿಗಳು, ಎಲ್ಲಾಕರ್ಮಗಳನ್ನು ಬ್ರಾಹ್ಮಣರ ಅನುಜ್ಞೆಯನ್ನು ಪಡೆದು ಮಾಡಬೇಕು। ಏಕೆಂದರೆ ಬ್ರಾಹ್ಮಣರ ಅನುಜ್ಞೆಯಿಂದಲೇ ನಿಸ್ಸಂಶಯವಾಗಿ ಎಲ್ಲಾ ದೋಷಗಳೂ ಪರಿಹಾರವಾಗುತ್ತವೆ, ಎಂದು ಹೇಳಿದ್ದಾರೆ ॥

ಸ್ಮೃತ್ಯಂತರೇऽಪಿ –

ಬ್ರಾಹ್ಮಣಾನಾಂ ವಿನಾ ವಾಕ್ಯೈಃ ಕ್ರಿಯಾಃಸ್ಯುರ್ನಿಷ್ಫಲಾಃ ಸ್ಮೃತಾಃ ।
ಕರ್ತವ್ಯಾ ಬ್ರಾಹ್ಮಣಾನುಜ್ಞಾ ಕರ್ಮಣಾಂ ಪರಿಪೂರ್ತಯೇ ॥

ಬ್ರಾಹ್ಮಣರ ಒಪ್ಪಿಗೆಯನ್ನು ಪಡೆಯದೇ, ಮಾಡುವ ಕರ್ಮಗಳು ನಿಷ್ಫಲವಾಗುತ್ತವೆ। ಆದ್ದರಿಂದ ಕರ್ಮದ ಪರಿಪೂರ್ತಿಗಾಗಿ ಬ್ರಾಹ್ಮಣರ ಒಪ್ಪಿಗೆಯನ್ನು ಪಡೆಯಬೇಕು ॥

ಮಹದನುಗ್ರಹಶ್ಚ ಯಥಾಶಕ್ತಿ ದ್ರವ್ಯದಾನೇನ ಕಾರಯಿತವ್ಯಃ 'ದಾನೇ ಸರ್ವಂ ಪ್ರತಿಷ್ಠಿತಮ್' ಇತಿ ಶ್ರುತೇಃ (ತೈತ್ತಿರೀಯಾರಣ್ಯಕೇ) । 'ದಾನೇನ ನಿರ್ದೋಷಾ ಭವಂತಿ' ಇತ್ಯಾಪಸ್ತಂಬ ಸ್ಮರಣಾತ್ (1/19/6) । 'ಬ್ರಾಹ್ಮಣಾನ್ ಸಮ್ಯಗಭ್ಯರ್ಚ್ಯ ಪೃಚ್ಛೇತ್ಕನಕಭೂಷಣೈಃ' ಇತಿ ಭರದ್ವಾಜ ಸ್ಮರಣಾಚ್ಚ । ಏತಚ್ಚ ಸ್ನಾತ್ವಾರ್ದ್ರವಾಸಾಃ ಕುರ್ಯಾತ್ । ಸ್ನಾತ್ವಾ ಸ್ವಶಕ್ತ್ಯಾ ದ್ರವಿಣಂ ದತ್ವಾ ಸಭ್ಯಾನ್ ಪ್ರದಕ್ಷಿಣಂ । ಪರೀತ್ಯೈತೈರನುಜ್ಞಾತಃ ಕರ್ಮಸಂಕಲ್ಪ ಏತತಃ ಇತಿ ಸ್ಮರಣಾತ್ ॥

ಬ್ರಾಹ್ಮಣರ ಸಂಪೂರ್ಣ ಅನುಗ್ರಹಕ್ಕಾಗಿ, ಯಥಾಶಕ್ತಿ ದ್ರವ್ಯಾದಿದಾನಗಳನ್ನು ಮಾಡಬೇಕು, 'ದಾನವನ್ನೇ ಎಲ್ಲವೂ ಆಶ್ರಯಿಸಿಕೊಂಡಿದೆ', ಎಂದು ಶ್ರುತಿಯಿರುವುದರಿಂದ। 'ದಾನದಿಂದ ಎಲ್ಲಾ ದೋಷಗಳನ್ನೂ ಪರಿಹರಿಸಿಕೊಳ್ಳಬಹುದು', ಎಂದು ಆಪಸ್ತಂಬರು ಹೇಳಿರುವುದರಿಂದ । 'ಬ್ರಾಹ್ಮಣರನ್ನು ಚೆನ್ನಾಗಿ ಚಿನ್ನ,

ಆಭರಣಾದಿಗಳಿಂದ ಪೂಜಿಸಿ, ಅವರ ಅನುಜ್ಞೆಯನ್ನು ಕೇಳಬೇಕು', ಎಂದು ಭರದ್ವಾಜಮುನಿಗಳು ಹೇಳಿರುವುದರಿಂದ । ಇದನ್ನು ಸ್ನಾನಮಾಡಿ, ಒದ್ದೆಬಟ್ಟೆಯಿಂದ ಮಾಡಬೇಕು । ಸ್ನಾನಮಾಡಿ, ತನ್ನ ಶಕ್ತಿಗನುಸಾರವಾಗಿ ದಾನಮಾಡಿ, ಸಭ್ಯರಾದ ಬ್ರಾಹ್ಮಣರನ್ನು ಪ್ರದಕ್ಷಿಣೆಮಾಡಿ । ಅವರ ಅನುಜ್ಞೆಯನ್ನು ಪಡೆದುಕೊಂಡು, ಕರ್ಮಸಂಕಲ್ಪವನ್ನು ಮಾಡಬೇಕು ಎಂದು ಸ್ಮೃತಿ ಇರುವುದರಿಂದ ॥

ಸ್ಮೃತ್ಯಂತರೇ –

ಆರ್ದ್ರವಸ್ತ್ರೋ ಬಹಿಃ ಸ್ನಾತೋ ನಿಯತೋ ವಾಗ್ಯತಃ ಶುಚಿಃ ।
ಶಕ್ತ್ಯಾ ದತ್ತ್ವಾಽಭ್ಯನುಜ್ಞಾತಃ ಕಾರ್ಯಾತ್ಸಂಕಲ್ಪಮಾದಿತಃ ॥

ಒದ್ದೆಬಟ್ಟೆಯನ್ನು ಉಟ್ಟವನಾಗಿ, ಹೊರಗೆ ಸ್ನಾನ ಮಾಡಿದವನಾಗಿ, ನಿಯಮದಿಂದ ಮೌನವಾಗಿದ್ದು, ಶುಚಿಯಾಗಿ । ಯಥಾಶಕ್ತಿದಾನಮಾಡಿ, ಬ್ರಾಹ್ಮಣರ ಅನುಜ್ಞೆಯನ್ನು ಪಡೆದು, ಮೊದಲಿಗೆ ಸಂಕಲ್ಪ ಮಾಡಬೇಕೆಂದು ಸ್ಮೃತಿಯಿರುವುದರಿಂದ ॥

12. ಕರ್ತುಃ ಸಂಸ್ಕಾರಯೋಗ್ಯತಾ ಸಿದ್ಧ್ಯರ್ಥಂ ಪ್ರಾಯಶ್ಚಿತ್ತಂ ಉಕ್ತಮ್

ಚಂದ್ರಿಕಾಯಾಂ –

ಕರ್ತಾಧಿಕಾರ ಸಿದ್ಧ್ಯರ್ಥಂ ತ್ರೀನ್ ಕೃಚ್ಛ್ರಾನ್ ಪಂಚ ಸಪ್ತ ವಾ ।
ಚರೇದ್ದತ್ತ್ವಾತು ದಾನಾದ್ಯೈಃ ಪೈತೃಮೇಧಿಕಮಾಚರೇತ್ ॥
ಅತ್ರ ಕೃಚ್ಛ್ರಪ್ರತಿನಿಧಿರ್ಗವಾದಿ ದಾನಮ್ ॥

ಕರ್ತೃವಿನ ಅಧಿಕಾರಸಿದ್ಧಿಗಾಗಿ, 3 ಅಥವಾ 5 ಅಥವಾ 7 ಕೃಚ್ಛ್ರಗಳನ್ನು ಮಾಡಿಕೊಂಡು। ನಂತರ ದಾನಾದಿಗಳನ್ನು ಮಾಡಿ, ಆಮೇಲೆ ಪಿತೃಮೇಧಕರ್ಮವನ್ನು ಮಾಡಬೇಕು । ಇಲ್ಲಿ, ಕೃಚ್ಛ್ರಪ್ರತಿನಿಧಿಯಾಗಿ ಗೋದಾನಾದಿಗಳನ್ನು ಹೇಳಿದೆ ॥

ಸ್ಮೃತ್ಯಂತರೇ –

ಗವಾಮಭಾವೇ ನಿಷ್ಕಂ ಸ್ಯಾತ್ ತದರ್ಧಂ ಪಾದಮೇವ ವಾ ।
ಪಾದಹೀನಂ ನ ಕರ್ತವ್ಯಂ ಬ್ರಹ್ಮದಂಡಂ ಮನೀಷಿಭಿಃ ॥

ಗೋವುಗಳ ಅಭಾವದಲ್ಲಿ, 1 ತೊಲ(12 ಗ್ರಾಂ) ಚಿನ್ನವನ್ನು ಕೊಡಬೇಕು ಅಥವಾ ಅದರ ಅರ್ಧ ಅಥವಾ ಅದರ ಕಾಲುಭಾಗದಷ್ಟನ್ನು ದಾನಮಾಡಬೇಕು। ಕಾಲುಭಾಗಕ್ಕಿಂತ ಕಡಿಮೆ ಬ್ರಹ್ಮದಂಡವನ್ನು(ಕೃಚ್ಛ್ರ) ಮಾಡಬಾರದೆಂದು ಜ್ಞಾನಿಗಳು ಹೇಳುತ್ತಾರೆ ॥

13. ಮೃತಾಹ ದಾನೇ ವೈಶಿಷ್ಟ್ಯಂ ಉಕ್ತಮ್

ಚಂದ್ರಿಕಾಯಾಂ –

ಉಪರಾಗಸಹಸ್ರಾಣಿ ವ್ಯತೀಪಾತಾಯುತಾನಿ ಚ ।
ಅಮಾಲಕ್ಷಂತು ದ್ವಾದಶ್ಯಾಃ ಕಲಾಂ ನಾರ್ಹಂತಿ ಷೋಡಶೀಮ್ ॥
ಏವಂ ವಿಧಾಯಾ ದ್ವಾದಶ್ಯಾಃ ತಿಸ್ರಃ ಕೋಟ್ಯರ್ಧಕೋಟಯಃ ।
ಮಾತಾಪಿತ್ರೋರ್ಮೃತಾಹಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

ಗ್ರಹಣದದಿನ ಮಾಡುವ ದಾನದ ಸಾವಿರಪಟ್ಟು, ವ್ಯತೀಪಾತದ ದಿನ ಮಾಡುವ ದಾನದ 10 ಸಾವಿರಪಟ್ಟು । ಅಮಾವಾಸ್ಯೆಯದಿನ ಮಾಡುವ ದಾನದ

ಲಕ್ಷಪಟ್ಟುದಾನಗಳು, ದ್ವಾದಶೀದಿನ ಮಾಡುವ ದಾನದ 16 ನೇ 1 ಭಾಗಕ್ಕೂ ಸಮವಾಗುವುದಿಲ್ಲ ॥ ಈ ರೀತಿಯಾಗಿರುವಂತಹ ದ್ವಾದಶೀದಿನ ಮಾಡುವ ದಾನದ 1.5 ಕೋಟಿಯ 3 ಪಟ್ಟು ದಾನವು । ತಾಯಿತಂದೆಯರ ಮರಣದ ದಿನದಲ್ಲಿ ಮಾಡುವ ದಾನದ 16 ನೇ 1 ಭಾಗಕ್ಕೂ ಸಮವಾಗುವುದಿಲ್ಲ (ಅಂದರೆ – ಇಷ್ಟು ವಿಶೇಷ(ಶ್ರೇಷ್ಠ)ವಾದದ್ದಾಗಿದೆ, ತಂದೆತಾಯಿಯರ ಮರಣದಲ್ಲಿ ಮಾಡುವ ದಾನಗಳ ಫಲವು) ॥

14. ಊರ್ಧ್ವೋಚ್ಛಿಷ್ಟಾದಿ ಪ್ರಾಯಶ್ಚಿತ್ತಮ್

ಪರಾಶರಃ(12/55) –

ಊರ್ಧ್ವೋಚ್ಛಿಷ್ಟಮಧೋಚ್ಛಿಷ್ಟಂ ಅಂತರಿಕ್ಷಮೃತೌ ತಥಾ ।
ಕೃಚ್ಛ್ರತ್ರಯಂ ಪ್ರಕುರ್ವೀತ ಸ್ವಾಶೌಚಮರಣೇ ತಥಾ ॥

ಮೇಲ್ಮುಖ ಅಶುಚಿಯಾಗಿ ಮತ್ತು ಕೆಳಮುಖ ಅಶುಚಿಯಾಗಿ ಹಾಗೂ ಅಂತರಿಕ್ಷದಲ್ಲಿ (ಭೂಸ್ಪರ್ಶವಿಲ್ಲದೇ/ಮಂಚ..) ಮರಣಹೊಂದಿದರೆ । ಹಾಗೂ ಆಶೌಚದಲ್ಲಿ ಮರಣಹೊಂದಿದರೆ, ಕೃಚ್ಛ್ರತ್ರಯವನ್ನು ಮಾಡಿಕೊಳ್ಳಬೇಕು ॥

ಮರಣಕಾಲೇ ವಾಂತಾದಿಕಂ ಊರ್ಧ್ವೋಚ್ಛಿಷ್ಟಂ ಮೂತ್ರಾದಿ ಕಮಧಸ್ತನೋಚ್ಛಿಷ್ಟಂ ತಯೋರನ್ಯತರತ್ ಯದಾ ಸಂಪದ್ಯತೇ ತದಾ ಸಂಸ್ಕರ್ತಾ ಪುತ್ರಾದಿಃ ದಾನಾದಿನಾ ಪ್ರತ್ಯಾಮ್ನಾಯೇನ ಪ್ರಾಜಾಪತ್ಯತ್ರಯಂ ಕುರ್ಯಾತ್ । ಮಂಚಕಾದಿಮರಣಂ ಅಂತರಿಕ್ಷಮೃತಿಃ । ರಜಸ್ವಲಾ ಸೂತಿಕಾದಿ ಮರಣಂ ಆಶೌಚಮರಣಮ್ ॥

ಮರಣಕಾಲದಲ್ಲಿ, ವಾಂತಿ ಮುಂತಾದ ದೇಹದ ಮೇಲ್ಮುಖದಿಂದ ಅಶುಚಿಯುಂಟಾದರೆ, ಹಾಗೂ ಮೂತ್ರಾದಿ ದೇಹದ ಕೆಳಮುಖದಿಂದ ಅಶುಚಿಯುಂಟಾದರೆ, ಇವೆರಡರಲ್ಲಿ ಯಾವುದಾದರೂ ಉಂಟಾದರೆ, ಸಂಸ್ಕಾರ ಮಾಡುವಂತಹ ಮಗ ಮುಂತಾದವರು ಪ್ರಾಜಾಪತ್ಯತ್ರಯಕ್ಕೆ ಪ್ರತ್ಯಾಮ್ನಾಯವಾಗಿ ದಾನಾದಿಗಳನ್ನು ಮಾಡಬೇಕು। ಮಂಚಾದಿಗಳ ಮೇಲಿನ ಮರಣವು ಅಂತರಿಕ್ಷಮರಣವು। ರಜಸ್ವಲೆ ಹಾಗು 10 ದಿನಗಳ ಒಳಗಿನ ಬಾಣಂತಿ, ಮೃತ/ಜಾತ ಅಶೌಚಗಳಿದ್ದಾಗ ಮರಣವು ಆಶೌಚಮರಣವು ॥

ಗೌತಮಃ –

ಸೂತ್ವಾನಾರೀಮೃತಾ ಪಶ್ಚಾದ್ದಶಾಹಾಭ್ಯಂತರೇ ಯದಿ ।
ನ ತಸ್ಯಾ ಯಮಲೋಕಾದ್ವೈ ನಿಷ್ಕೃತಿರ್ಬಹುವತ್ಸರೇ ॥
ತದ್ದೋಷ ಪರಿಹಾರಾರ್ಥಂ ಚತ್ವಾರ ಋತ್ವಿಜಃ ಪೃಥಕ್ ।
ಏಕ ಏವ ದ್ವಿಜೋವಾಪಿ ವಾರುಣಾನ್ ಕಲಶಾನ್ ನಿಕ್ಷಿಪೇತ್ ॥
ಪೂರ್ವಾದಿದಿಕ್ಷು ಸರ್ವತ್ರ ಜಲೇನಾಪೂರ್ಯ ಯತ್ನತಃ ।
ವರುಣಂ ಪೂಜಯೇತ್ತತ್ರ ಋತ್ವಿಗೇಕಶ್ಚತುರ್ಷ್ವಪಿ ॥
ಕಲಶಾನ್ ಪಾಣಿಭಿಃ ಸ್ಪೃಷ್ಟ್ವಾ ಮಂತ್ರಾನೇತಾನುದೀರಯೇತ್ ।
ನಮಕಂ ಚಮಕಂ ಚೈವ ಪೂರುಷಸೂಕ್ತಂ ಚ ವೈಷ್ಣವಂ ॥
ಪವಮಾನಾನುವಾಕಶ್ಚ ಹಿರಣ್ಯಶೃಂಗಮಿತಿ ಕ್ರಮಾತ್ ।
ಶಾಂತಿಭಿರ್ದಶಭಿಶ್ಚೈವ ಕಲಶಾನಭಿಮಂತ್ರಯೇತ್ ॥
ಅನ್ಯೇನ ವಾಸಸಾಚ್ಛಾದ್ಯ ಸೂತಿಕಾಂ ಕೃತಶೌಚಿಕಾಮ್ ।
ಮಾರ್ಜಯೇತ್ ಋತ್ವಿಜಸ್ತೋಯೈಃ ಕಲಶಸ್ಥೈಃ ಪವಿತ್ರಜೈಃ ॥

ಆಪೋಹಿಷ್ಠಾದಿಭಿಃ ಮಂತ್ರೈಃ ದೇವಸ್ಯತ್ವೇತಿ ಮಾರ್ಜಯೇತ್ ।
ತತಃ ಶವಂ ಬಹಿರ್ದೇಶೇ ಸ್ಥಾಪಯಿತ್ವಾಽಥ ದೇಶಿಕಃ ॥
ಶಾತಕುಂಭೋದಕೈಃ ಪ್ರೋಕ್ಷ್ಯ ನೂತನೇನೈವ ವಾಸಸಾ ।
ಆಚ್ಛಾದ್ಯ ಕುಣಪಂ ಪಶ್ಚಾದ್ದಹೇತ್ ಔಪಾಸನಾಗ್ನಿನಾ ॥

ಮಗುವನ್ನು ಹಡೆದು, 10 ದಿನಗಳ ಒಳಗೆ ತಾಯಿಯು ಮೃತಳಾದರೆ । ಅವಳಿಗೆ ಬಹಳ ವರ್ಷಗಳವರೆಗೆ ಯಮಲೋಕದಿಂದ ಬಿಡುಗಡೆ ಇಲ್ಲ । ಈ ದೋಷ ಪರಿಹಾರಕ್ಕೆ ನಾಲ್ಕು ಋತ್ವಿಜರನ್ನು ಬೇರೆಬೇರೆಯಾಗಿ । ಅಥವಾ ಒಬ್ಬ ಬ್ರಾಹ್ಮಣನನ್ನು ಕರೆದು ವರುಣದೇವತೆಯ ಕಲಶವನ್ನು ಆವಾಹನೆಮಾಡಿ ಸ್ಥಾಪಿಸಬೇಕು । ಹೇಗೆಂದರೆ – ಪೂರ್ವ ಮುಂತಾದ ಎಲ್ಲ ದಿಕ್ಕುಗಳಲ್ಲಿ ಕಲಶವನ್ನು ನೀರಿನಿಂದ ತುಂಬಿಸಿ । ವರುಣ ದೇವತೆಯನ್ನು ಒಬ್ಬ ಅಥವಾ ನಾಲ್ಕು ಜನ ಋತ್ವಿಜರಿಂದಲೋ ಪೂಜಿಸಬೇಕು । ಕಲಶಗಳನ್ನು ಕೈಗಳಿಂದ ಮುಟ್ಟಿ, ಈ ಮುಂದೆ ಹೇಳುವ ಮಂತ್ರಗಳನ್ನು ಹೇಳಬೇಕು । ಅವುಗಳು ಯಾವುವೆಂದರೆ – ರುದ್ರ, ಚಮಕ, ಪುರುಷಸೂಕ್ತ, ವಿಷ್ಣುಸೂಕ್ತಗಳು । ಪವಮಾನ ಅನುವಾಕ, ಹಿರಣ್ಯಶೃಂಗಂ ಮುಂತಾದ ಮಂತ್ರಗಳು । ದಶಶಾಂತಿ, ಇವುಗಳಿಂದ ಕಲಶಗಳ ಅಭಿಮಂತ್ರಣ ಮಾಡಬೇಕು । ಆ ಮೃತ ಬಾಣಂತಿಗೆ ಸ್ನಾನ ಮಾಡಿಸಿ, ಬೇರೆ ಬಟ್ಟೆಯನ್ನು ತೊಡಿಸಿ । ಋತ್ವಿಜರು ಅಭಿಮಂತ್ರಣ ಮಾಡಿದ, ಪವಿತ್ರವನ್ನಾಗಿ ಮಾಡುವ ಆ ಕಲಶಗಳ ನೀರಿನಿಂದ ಅವಳನ್ನು ಚೆನ್ನಾಗಿ ಮಾರ್ಜನ(ಸ್ನಾನ) ಮಾಡಬೇಕು, ಆಪೋಹಿಷ್ಠಾ..., ದೇವಸ್ಯತ್ವಾ..., ಮುಂತಾದ ಮಂತ್ರಗಳಿಂದ । ನಂತರ ಶವವನ್ನು ಮನೆಯಿಂದ ಹೊರಗಿಟ್ಟು, ಶತಕುಂಭದ(ಚಿನ್ನದ ಸ್ಪರ್ಶವಿರುವ) ನೀರಿನಿಂದ ಪ್ರೋಕ್ಷಣೆ ಮಾಡಿ, ಹೊಸಬಟ್ಟೆಯಿಂದ ಮುಚ್ಚಿ । ನಂತರ ಔಪಾಸನಾಗ್ನಿಯಿಂದ ಶವವನ್ನು ದಹನ ಮಾಡಬೇಕು ॥

ರಜಸ್ವಲಾ ಮರಣೇऽಪಿ ಏವಮಿತಿ ಹೇಮಾದ್ರೌ –

ಯಥಾ ಪುಷ್ಪವತೀ ನಾರೀ ದೈವಾದ್ಯದಿ ವಿಪದ್ಯತೇ ।
ತಸ್ಯಾಸ್ತು ನಿಷ್ಕೃತಿರ್ನಾಸ್ತಿ ರಕ್ತಕುಂಡಾದ್ಭಯಂಕರಾತ್ ॥

ಇದೇ ರೀತಿಯಾಗಿ, ರಜಸ್ವಲೆಯಾದಾಗ ಮರಣಹೊಂದಿದಾಗಲೂ ಮಾಡಬೇಕೆಂದು ಹೇಮಾದ್ರಿಗಳ ವಚನವು । ರಜಸ್ವಲೆಯಾದಾಗ ನಾರಿಯು ಮರಣಹೊಂದಿದರೆ । ಅವಳಿಗೆ ಭಯಂಕರ ನರಕದಿಂದ ಬಿಡುಗಡೆ ಇಲ್ಲ ॥

ತಥಾ ತ್ರಿಕಾಂಡೀ ಚಂದ್ರಿಕಾಯಾಂ –

ಪ್ರತ್ಯಕ್ಷೇ ಚಾಪ್ರತಿಹತೌ ಸಂಸ್ಕಾರೇಣ ಚ ಶೋಧನಂ ।
ಕುರ್ಯಾತ್ ತತ್ರಾಧರೋಚ್ಛಿಷ್ಟೇತ್ ಪ್ರಾಜಾಪತ್ಯತ್ರಯಂ ಚರೇತ್ ॥
ಊರ್ಧ್ವೋಚ್ಛಿಷ್ಟೇऽಪಿ ಚ ತಥಾ ಪ್ರಾಜಾಪತ್ಯ ತ್ರಯಂ ಚರೇತ್ ।

ಪ್ರತ್ಯಕ್ಷವಾಗಿ ಅಶುಚಿಯಾಗದೇ ಇದ್ದಾಗ ಹಾಗೂ ಅಂಗಾಂಗಗಳು ಊನವಾಗದೇ ಇದ್ದಾಗ ಮೃತನಿಗೆ ಸಂಸ್ಕಾರದಿಂದ ಶುದ್ಧಿಯು । ಇಲ್ಲಿ ಮೃತನ ದೇಹದ ಅರ್ಧದಿಂದ ಕೆಳಗೆ ಅಶುಚಿಯಾಗಿದ್ದರೆ, 3 ಪ್ರಾಜಾಪತ್ಯ ಕೃಚ್ಛ್ರವನ್ನು ಮಾಡಬೇಕು । ಹಾಗೆಯೇ ದೇಹದ ಮೇಲ್ಭಾಗವು ಅಶುಚಿಯಾಗಿದ್ದರೂ 3 ಪ್ರಾಜಾಪತ್ಯಕೃಚ್ಛ್ರವನ್ನು ಮಾಡಬೇಕು ॥

ಚಂದ್ರಿಕಾಯಾಂ –

ಅಸ್ಪೃಶ್ಯಸ್ಪೃಷ್ಟ ಮರಣೇ ಕೃಚ್ಛ್ರಾನ್ ಶಂಗೌತಮೋಽಬ್ರವೀತ್ ॥
ಪರಾಶರಸ್ತು ತ್ರೀನ್ ಪ್ರಾಹ ಭೃಗುಃ ಪಂಚ ಷಡಂಗಿರಾಃ ।
ಅಸ್ಪೃಶ್ಯಾಶ್ಚಂಡಾಲ ಸೂತಿಕೋದಕ್ಯಾದಯಃ ॥
ತೈಃ ಸ್ಪೃಷ್ಟಸ್ಯಾಸ್ನಾತಸ್ಯ ಮರಣೇ ಶಕ್ತ್ಯನುಸಾರೇಣ ಷಟ್
ಕೃಚ್ಛ್ರಾದಿಕಮಿತ್ಯರ್ಥಃ ॥

ಅಸ್ಪೃಶ್ಯನ ಸ್ಪರ್ಶವಾಗಿ ಮರಣ ಹೊಂದಿದರೆ, 1 ಕೃಚ್ಛ್ರದಿಂದ ಶುದ್ಧಿಯೆಂದು ಗೌತಮರು ಹೇಳುತ್ತಾರೆ । ಪರಾಶರರು 3 ಕೃಚ್ಛ್ರದಿಂದ ಹಾಗೂ ಭೃಗುಗಳು 5 ಕೃಚ್ಛ್ರದಿಂದ ಹಾಗೂ ಅಂಗಿರರು 6 ಕೃಚ್ಛ್ರದಿಂದ ಶುದ್ಧಿಯೆಂದು ಹೇಳುತ್ತಾರೆ । ಅಸ್ಪೃಶ್ಯರು ಯಾರೆಂದರೆ – ಚಂಡಾಲ(ಬ್ರಾಹ್ಮಣ ಹೆಂಗಸಿನಲ್ಲಿ ಶೂದ್ರನಿಂದ ಜನಿಸಿದವನು), ಹತ್ತುದಿನಗಳ ಒಳಗಿನ ಬಾಣಂತಿ ಹಾಗೂ ರಜಸ್ವಲೆ, ಜಾತ–ಮೃತಾಶೌಚಗಳಿರುವವರು । ಅವರಿಂದ ಸ್ಪರ್ಶಮಾಡಲ್ಪಟ್ಟು ಸ್ನಾನ ಮಾಡದೇ ಮರಣ ಹೊಂದಿದರೆ, ಶಕ್ತಿಗನುಸಾರವಾಗಿ 6 ಕೃಚ್ಛ್ರಾದಿಗಳನ್ನು ಮಾಡಿಕೊಳ್ಳಬೇಕು ಎಂದರ್ಥ ॥

15. ದೇವಾಲಯಾದಿ ಮರಣೇ ಪ್ರಾಯಶ್ಚಿತ್ತಮ್

ವಿಷ್ಣುಃ –

ಮಂಟಪೇ ಗೋಪುರೇ ಖಿಟ್ವಾ ಪ್ರಾಸಾದೇ ಹರ್ಮ್ಯಭಿತ್ತಿಷು ।
ಅಕಾಮತೋ ಮೃತಾನಾಂ ತು ದಾಪಯೇದೈಂದವದ್ವಯಂ ॥
ಪ್ರಾಜಾಪತ್ಯಂ ಚರೇತ್ ಕೃಚ್ಛ್ರಂ ಪರಾಕೇಣ ವಿಶುದ್ಧ್ಯತಿ ॥

ಖಟ್ವಾದಕಾಮ ಮರಣೇ ಚಾಂದ್ರಾಯಣದ್ವಯಂ ಕಾಮತಸ್ತು ಪ್ರಾಜಾಪತ್ಯಂ ಪರಾಕಂ ಚ ಕುರ್ಯಾದಿತ್ಯರ್ಥಃ ॥

ದೇವಸ್ಥಾನದಲ್ಲಿ ಅಥವಾ ಮಂಟಪದಲ್ಲಿ – ಗೋಪುರದಲ್ಲಿ – ಮಂಚದಮೇಲೆ – ಮಹಡಿ (ಅಂತಸ್ತು) – ಎತ್ತರದ ಜಾಗಗಳಲ್ಲಿ । ಆಕಸ್ಮಿಕವಾಗಿ ಮರಣ ಹೊಂದಿದಾಗ, ದೋಷಪರಿಹಾರಕ್ಕೆ ಕರ್ತೃವು ಎರಡು ಬೆಳ್ಳಿನಾಣ್ಯಗಳನ್ನು ಕೊಡಬೇಕು । ನಂತರ ಪ್ರಾಜಾಪತ್ಯ ಕೃಚ್ಛ್ರವನ್ನು ಮಾಡಿಕೊಳ್ಳಬೇಕು, ಪರಾಕಕೃಚ್ಛ್ರದಿಂದ ಶುದ್ಧಿಯನ್ನು ಹೊಂದುತ್ತಾರೆ । ಮಂಚ ಮುಂತಾದವುಗಳ ಮೇಲೆ ಆಕಸ್ಮಿಕವಾಗಿ ಮರಣವಾದರೆ, ಎರಡು ಚಾಂದ್ರಾಯಣ ಕೃಚ್ಛ್ರಗಳನ್ನು ಮಾಡಬೇಕು । ಇಷ್ಟಪಟ್ಟು ಈ ರೀತಿಯಲ್ಲಿ ಮರಣವಾದರೆ, ಚಾಂದ್ರಾಯಣದ ಜೊತೆ ಪ್ರಾಜಾಪತ್ಯ ಮತ್ತು ಪರಾಕಕೃಚ್ಛ್ರಗಳನ್ನೂ ಮಾಡಿಕೊಳ್ಳಬೇಕೆಂದು ಅರ್ಥ ॥

ತತ್ಪ್ರತಿನಿಧಿ ಚತುರ್ವಿಂಶತಿಮತೇ ದರ್ಶಿತಃ –

ಪ್ರಾಜಾಪತ್ಯೇ ತು ಗಾಮೇಕಾಂ ದದ್ಯಾತ್ ಸಾಂತಪನೇದ್ವಯಂ ।
ಪರಾಕ ತಪ್ತ ಕೃಚ್ಛ್ರಾತಿ ಕೃಚ್ಛ್ರೇ ತಿಸ್ರಸ್ತು ಗಾಸ್ಸ್ಮೃತಾಃ ॥
ಅಷ್ಟೌ ಚಾಂದ್ರಾಯಣೇ ದೇಯಾಃ ತಿಸ್ರೋ ವಾ ಶಕ್ತ್ಯಪೇಕ್ಷಯಾ ॥

ಪ್ರಾಜಾಪತ್ಯ ಕೃಚ್ಛ್ರದಲ್ಲಿ ಒಂದು ಹಸುವನ್ನು ದಾನ ಮಾಡಬೇಕು, ಸಾಂತಪನ ಕೃಚ್ಛ್ರದಲ್ಲಿ ಎರಡು ಹಸುಗಳನ್ನು ದಾನ ಕೊಡಬೇಕು । ಪರಾಕ, ತಪ್ತಕೃಚ್ಛ್ರ, ಅತಿಕೃಚ್ಛ್ರಗಳಲ್ಲಿ ಮೂರು ಹಸುಗಳನ್ನು ದಾನಕೊಡಬೇಕು । ಚಾಂದ್ರಾಯಣದಲ್ಲಿ ಎಂಟು ಹಸುಗಳನ್ನು ಕೊಡಬೇಕು ಆದರೆ ಶಕ್ತಿಯಿಲ್ಲದಿದ್ದರೆ ಮೂರಕ್ಕೆ ಕಮ್ಮಿಯಿಲ್ಲದಂತೆ ಕೊಡಬೇಕು ॥

ಚಂದ್ರಿಕಾಯಾಂ –

ಅಸ್ಪೃಶ್ಯಸ್ಪೃಷ್ಟ ಮರಣೇ ಕೃಚ್ಛ್ರಾನ್ ಶಂಗೌತಮೋಽಬ್ರವೀತ್ ॥
ಪರಾಶರಸ್ತು ತ್ರೀನ್ ಪ್ರಾಹ ಭೃಗುಃ ಪಂಚ ಷಡಂಗಿರಾಃ ।
ಅಸ್ಪೃಶ್ಯಾಶ್ಚಂಡಾಲ ಸೂತಿಕೋದಕ್ಯಾದಯಃ ॥
ತೈಃ ಸ್ಪೃಷ್ಟಸ್ಯಾಸ್ನಾತಸ್ಯ ಮರಣೇ ಶಕ್ತ್ಯನುಸಾರೇಣ ಷಟ್
ಕೃಚ್ಛ್ರಾದಿಕಮಿತ್ಯರ್ಥಃ ॥

ಅಸ್ಪೃಶ್ಯನ ಸ್ಪರ್ಶವಾಗಿ ಮರಣ ಹೊಂದಿದರೆ, 1 ಕೃಚ್ಛ್ರದಿಂದ ಶುದ್ಧಿಯೆಂದು ಗೌತಮರು ಹೇಳುತ್ತಾರೆ । ಪರಾಶರರು 3 ಕೃಚ್ಛ್ರದಿಂದ ಹಾಗೂ ಭೃಗುಗಳು 5 ಕೃಚ್ಛ್ರದಿಂದ ಹಾಗೂ ಅಂಗಿರರು 6 ಕೃಚ್ಛ್ರದಿಂದ ಶುದ್ಧಿಯೆಂದು ಹೇಳುತ್ತಾರೆ । ಅಸ್ಪೃಶ್ಯರು ಯಾರೆಂದರೆ – ಚಂಡಾಲ(ಬ್ರಾಹ್ಮಣ ಹೆಂಗಸಿನಲ್ಲಿ ಶೂದ್ರನಿಂದ ಜನಿಸಿದವನು), ಹತ್ತುದಿನಗಳ ಒಳಗಿನ ಬಾಣಂತಿ ಹಾಗೂ ರಜಸ್ವಲೆ, ಜಾತ–ಮೃತಾಶೌಚಗಳಿರುವವರು । ಅವರಿಂದ ಸ್ಪರ್ಶಮಾಡಲ್ಪಟ್ಟು ಸ್ನಾನ ಮಾಡದೇ ಮರಣ ಹೊಂದಿದರೆ, ಶಕ್ತಿಗನುಸಾರವಾಗಿ 6 ಕೃಚ್ಛ್ರಾದಿಗಳನ್ನು ಮಾಡಿಕೊಳ್ಳಬೇಕು ಎಂದರ್ಥ ॥

15. ದೇವಾಲಯಾದಿ ಮರಣೇ ಪ್ರಾಯಶ್ಚಿತ್ತಮ್

ವಿಷ್ಣುಃ –

ಮಂಟಪೇ ಗೋಪುರೇ ಖಟ್ವಾ ಪ್ರಾಸಾದೇ ಹರ್ಮ್ಯಭಿತ್ತಿಷು ।
ಅಕಾಮತೋ ಮೃತಾನಾಂ ತು ದಾಪಯೇದೈಂದವದ್ವಯಂ ॥
ಪ್ರಾಜಾಪತ್ಯಂ ಚರೇತ್ ಕೃಚ್ಛ್ರಂ ಪರಾಕೇಣ ವಿಶುದ್ಧ್ಯತಿ ॥

ಖಟ್ವಾದಕಾಮ ಮರಣೇ ಚಾಂದ್ರಾಯಣದ್ವಯಂ ಕಾಮತಸ್ತು ಪ್ರಾಜಾಪತ್ಯಂ ಪರಾಕಂ ಚ ಕುರ್ಯಾದಿತ್ಯರ್ಥಃ ॥

ದೇವಸ್ಥಾನದಲ್ಲಿ ಅಥವಾ ಮಂಟಪದಲ್ಲಿ – ಗೋಪುರದಲ್ಲಿ – ಮಂಚದಮೇಲೆ – ಮಹಡಿ (ಅಂತಸ್ತು) – ಎತ್ತರದ ಜಾಗಗಳಲ್ಲಿ । ಆಕಸ್ಮಿಕವಾಗಿ ಮರಣ ಹೊಂದಿದಾಗ, ದೋಷಪರಿಹಾರಕ್ಕೆ ಕರ್ತೃವು ಎರಡು ಬೆಳ್ಳಿನಾಣ್ಯಗಳನ್ನು ಕೊಡಬೇಕು । ನಂತರ ಪ್ರಾಜಾಪತ್ಯ ಕೃಚ್ಛ್ರವನ್ನು ಮಾಡಿಕೊಳ್ಳಬೇಕು, ಪರಾಕಕೃಚ್ಛ್ರದಿಂದ ಶುದ್ಧಿಯನ್ನು ಹೊಂದುತ್ತಾರೆ । ಮಂಚ ಮುಂತಾದವುಗಳ ಮೇಲೆ ಆಕಸ್ಮಿಕವಾಗಿ ಮರಣವಾದರೆ, ಎರಡು ಚಾಂದ್ರಾಯಣ ಕೃಚ್ಛ್ರಗಳನ್ನು ಮಾಡಬೇಕು । ಇಷ್ಟಪಟ್ಟು ಈ ರೀತಿಯಲ್ಲಿ ಮರಣವಾದರೆ, ಚಾಂದ್ರಾಯಣದ ಜೊತೆ ಪ್ರಾಜಾಪತ್ಯ ಮತ್ತು ಪರಾಕಕೃಚ್ಛ್ರಗಳನ್ನೂ ಮಾಡಿಕೊಳ್ಳಬೇಕೆಂದು ಅರ್ಥ ॥

ತತ್ಪ್ರತಿನಿಧಿ ಚತುರ್ವಿಂಶತಿಮತೇ ದರ್ಶಿತಃ –

ಪ್ರಾಜಾಪತ್ಯೇ ತು ಗಾಮೇಕಾಂ ದದ್ಯಾತ್ ಸಾಂತಪನೇದ್ವಯಂ ।
ಪರಾಕ ತಪ್ತ ಕೃಚ್ಛ್ರಾತಿ ಕೃಚ್ಛ್ರೇ ತಿಸ್ರಸ್ತು ಗಾಸ್ಸ್ಮೃತಾಃ ॥
ಅಷ್ಟೌ ಚಾಂದ್ರಾಯಣೇ ದೇಯಾಃ ತಿಸ್ರೋ ವಾ ಶಕ್ತ್ಯಪೇಕ್ಷಯಾ ॥

ಪ್ರಾಜಾಪತ್ಯ ಕೃಚ್ಛ್ರದಲ್ಲಿ ಒಂದು ಹಸುವನ್ನು ದಾನ ಮಾಡಬೇಕು, ಸಾಂತಪನ ಕೃಚ್ಛ್ರದಲ್ಲಿ ಎರಡು ಹಸುಗಳನ್ನು ದಾನ ಕೊಡಬೇಕು । ಪರಾಕ, ತಪ್ತಕೃಚ್ಛ್ರ, ಅತಿಕೃಚ್ಛ್ರಗಳಲ್ಲಿ ಮೂರು ಹಸುಗಳನ್ನು ದಾನಕೊಡಬೇಕು । ಚಾಂದ್ರಾಯಣದಲ್ಲಿ ಎಂಟು ಹಸುಗಳನ್ನು ಕೊಡಬೇಕು ಆದರೆ ಶಕ್ತಿಯಿಲ್ಲದಿದ್ದರೆ ಮೂರಕ್ಕೆ ಕಮ್ಮಿಯಿಲ್ಲದಂತೆ ಕೊಡಬೇಕು ॥

ಸ್ಮೃತ್ಯಂತರೇ –

ಚಾಂದ್ರಾಯಣಂತ್ರಯಃ ಕೃಚ್ಛ್ರಾ ಗಾಯತ್ರ್ಯಾ ಅಯುತತ್ರಯಂ ।
ಆಪ್ಲಾವನಂ ಮಹಾನದ್ಯಾಂ ಸಮಮೇತಚ್ಚತುಷ್ಟಯಮ್ ॥

3 ಚಾಂದ್ರಾಯಣ ಅಥವಾ ಅದಕ್ಕೆ ಸಮವಾದ ದಕ್ಷಿಣೆ(ಕೃಚ್ಛ್ರ) ಅಥವಾ ಮೂವತ್ತುಸಾವಿರ ಗಾಯತ್ರೀಜಪ । ಅಥವಾ ಮಹಾನದಿಗಳಲ್ಲಿ ಮುಳುಗುಸ್ನಾನ – ಈ ನಾಲ್ಕೂ ವಿಧಾನಗಳೂ ಸಹ ಸಮವಾದ ಪ್ರಾಯಶ್ಚಿತ್ತಗಳು ॥

ಚತುರ್ವಿಂಶತಿ ಮತೇ –

ಯಸ್ಯ ಧಾನ್ಯ ಸಮೃದ್ಧಿಃ ಸ ಕೃಚ್ಛ್ರಾಗ್ನಿ ವ್ರತಾನಿ ವಿಪ್ರಭೋಜನೇನ
ಸಂಪಾದಯೇತ್ ಇತಿ । ಬ್ರಾಹ್ಮಣಭೋಜನ ಸಂಖ್ಯಾ ಚೋಕ್ತಾ –
ಕೃಚ್ಛ್ರೇ ಪಂಚಾಗ್ನಿಕೃಚ್ಛ್ರೇ ತ್ರಿಗುಣಮಹರಹಃ ಇತಿ ।

ಯಾರಿಗೆ ಧಾನ್ಯದ ಸಮೃದ್ಧಿಯಾಗಬೇಕೆಂಬ ಇಚ್ಛೆಯು ಇದೆಯೋ ಅವರು – ಕೃಚ್ಛ್ರ, ಅಗ್ನಿಕೃಚ್ಛ್ರ ಮುಂತಾದ ವ್ರತಗಳನ್ನು ಹಾಗೂ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ಇಚ್ಛೆಯನ್ನು ಪೂರೈಸಿಕೊಳ್ಳಬೇಕು । (ಯಾರಿಗೆ ಧಾನ್ಯಸಂಪತ್ತು ಇದೆಯೋ, ಅವರು ಕೃಚ್ಛ್ರ, ಅಗ್ನಿಕೃಚ್ಛ್ರ, ಬ್ರಾಹ್ಮಣ ಭೋಜನ ಇವುಗಳಿಂದ (ನಿತ್ಯ–ನೈಮಿತ್ತಿಕ–ಕಾಮ್ಯಾದಿ)ವ್ರತಗಳನ್ನು ಮಾಡಬೇಕು । ಬ್ರಾಹ್ಮಣಭೋಜನದ ಸಂಖ್ಯೆಯನ್ನು ಹೀಗೆ ಹೇಳಿದೆ – ಕೃಚ್ಛ್ರದಲ್ಲಿ ಒಂದುಹಗಲಿಗೆ 5 ಜನ, ಅಗ್ನಿಕೃಚ್ಛ್ರದಲ್ಲಿ 15 ಜನ ॥

ಶುದ್ಧಿ ನಿರ್ಣಯೇ –

ಊರ್ಧ್ವೋಚ್ಛಿಷ್ಟಂ ಅಧೋಚ್ಛಿಷ್ಟಂ ಖಟ್ವಾದಿ ಮರಣಾಶುಚಿಸ್ಪರ್ಶ
ನಿಯಮಲೋಪಾಖ್ಯ ಪಂಚನಿಮಿತ್ತ ಪ್ರಾಯಶ್ಚಿತ್ತಾನ್ಯೇಕೈಕ ನಿಮಿತ್ತಸ್ಯ
ತ್ರೀಣಿ ಕೃಚ್ಛ್ರಾಣ್ಯೇಕೈಕಂ ವಾ ಕೃತ್ವಾ ಸಂಸ್ಕುರ್ಯಾತ್ ಇತಿ ॥

ಊರ್ಧ್ವೋಚ್ಛಿಷ್ಟ(ವಾಂತಿ–ಸಿಂಬಳ–ರಕ್ತ), ಅಧೋಚ್ಛಿಷ್ಟ(ಮಲ–ಮೂತ್ರ–ರಕ್ತ), ಮಂಚ ಮುಂತಾದವುಗಳ ಮೇಲೆ, ಅಶುಚಿ ಸ್ಪರ್ಶ, ನಿಯಮಲೋಪ, ಈ 5 ರೀತಿಯಲ್ಲಿ ಮರಣವು ಆದರೆ ಪ್ರಾಯಶ್ಚಿತ್ತವನ್ನು ಈ ಒಂದೊಂದು ರೀತಿಗೂ 3 ಕೃಚ್ಛ್ರ ಅಥವಾ 1 ಕೃಚ್ಛ್ರವನ್ನು ಮಾಡಿ, ಸಂಸ್ಕಾರವನ್ನು ಮಾಡಬೇಕು ॥

ಈ ಗ್ರಂಥದ ಉಳಿದ ವಿಷಯಗಳು ಮುಂದಿನ ಸಂಚಿಕೆಯಲ್ಲಿ ದೊರೆಯುತ್ತದೆ.

* * * * *

ಶ್ರೀ ಯಲ್ಲಾಜೀಯ ಅನುಧರ್ಮಶಾಸ್ತ್ರಮ್

(ಅಪರಕರ್ಮದ ವಿಷಯ)

ಪೀಠಿಕೆ

ಬ್ರಹ್ಮಜ್ಞೋ ವಿದುಷಾಮಿಷ್ಟೋ ಭಾರದ್ವಾಜ ಸಮುದ್ಭವಃ ।
ತಲಮುಡ್ಯನ್ವಯಭವೋ ಯಲ್ಲುಭಟ್ಟ ಸುತಸ್ಸುಧೀಃ ।
ಮಹಾವ್ರತಾತ್ವರಬ್ರಹ್ಮನಿಷ್ಠೋ ಯಲ್ಲಾಜಿ ನಾಮಕಃ ।
ಆಲೋಕ್ಯ ಧರ್ಮಶಾಸ್ತ್ರಾಣಿ ಸತಾಂ ಆಚಾರ ಪದ್ಧತಿಂ ।
ಭಾರದ್ವಾಜಕೃತಂ ಸೂತ್ರಂ ತದ್ಭಾಷ್ಯಂ ಚ ವಿಶೇಷತಃ ।
ಆಪಸ್ತಂಬಕೃತಂ ಸೂತ್ರಂ ಸೂತ್ರಾಣ್ಯಪಿ ಮಹರ್ಷಿಣಾಂ ।
ತತ್ತದ್ಭಾಷ್ಯಾಣಿ ಚಾಲೋಕ್ಯ ಮಂತ್ರಾರ್ಥಂ ಚ ಸಮಾಸತಃ ।
ಪೈತೃಮೇಧಂ ಬ್ರಹ್ಮಮೇಧಂ ಆಹಿತಾಗ್ನೇಃ ವಿಶೇಷತಃ ।
ಮನ್ವಾದಿಸ್ಮೃತಿ ಜಾಲೇಷು ಯದುಕ್ತಂ ಚ ಮಹರ್ಷಿಭಿಃ ।
ಏತತ್ ಸರ್ವಂ ಸಮಾಲೋಕ್ಯ ಸತಾಂ ಹಿ ವಿದುಷಾಂಮುದೇ ।
ಪಿತೃಮೇಧಂ ಸಪ್ರಯೋಗಂ ಪ್ರಾಯಶ್ಚಿತ್ತಾನ್ಯಶೇಷತಃ ।
ಇದಂ ಲೋಕೋಪಕಾರಾಯ ಮಯಾ ಸರ್ವಂ ಸಮೀರಿತಮ್
ಭಗವಂತಂ ಭರದ್ವಾಜಂ ಪ್ರಣಮ್ಯ ಚ ಕಪರ್ದಿನಮ್ ।

ಬ್ರಹ್ಮಜ್ಞೋ ವಿದುಷಾಮಿಷ್ಟೋ ಭಾರದ್ವಾಜ ಸಮುದ್ಭವಃ ।
ಮಹಾವ್ರತಾತ್ಪರಬ್ರಹ್ಮನಿಷ್ಠೋ ಯಲ್ಲಾಜಿ ನಾಮಕಃ ।
ವಕ್ಷ್ಯಾಮ್ಯಹಂ ಪರೇತಸ್ಯ ಚಾಹಿತಾಗ್ನೇಃ ದ್ವಿಜನ್ಮನಃ ।
ಭಾರದ್ವಾಜೀಯ ಸೂತ್ರಸ್ಯ ಪೈತೃಮೇಧಿಕಮಂಜಸಾ ।
ತತ್ಸೂತ್ರಮನ್ಯಸೂತ್ರಾಣಿ ತತ್ತದ್ಭಾಷ್ಯಾಣ್ಯಶೇಷತಃ ।
ಸದ್ಭಿಃ ಆಚರಿತಂ ಪೂರ್ವಂ ಆಚಾರಂ ಚ ಸಮಾಸತಃ ।
ವಿಲೋಕ್ಯ ವಿವಿಧಾನ್ ಗ್ರಂಥಾನ್ ಪ್ರಯೋಗ ಪ್ರತಿಪತ್ತಯೇ ॥

ಭಾರದ್ವಾಜಗೋತ್ರದಲ್ಲಿ ಹುಟ್ಟಿದಂತಹ, ವೇದಜ್ಞನಾದ, ವಿದ್ವಜ್ಜನರಿಗೆ ಪ್ರಿಯನಾದ। ತಲಮುಡಿವಂಶದಲ್ಲಿ ಹುಟ್ಟಿದ, ಎಲ್ಲುಭಟ್ಟನ ಮಗನಾದ, ವಿವೇಕಿಯಾದ ಮಹಾವ್ರತಗಳಿಂದ ಪರಬ್ರಹ್ಮನಲ್ಲಿಯೇ ನಿಷ್ಠನಾದ ಎಲ್ಲಾಜಿ ಎಂಬ ಹೆಸರಿನವನು ನಾನು । ಎಲ್ಲಾ ಧರ್ಮಶಾಸ್ತ್ರಗಳನ್ನೂ ಆಲೋಕನ ಮಾಡಿ, ಹಾಗೆಯೇ ಸತ್ಪುರುಷರ ಆಚಾರಪದ್ಧತಿಗಳನ್ನು ತಿಳಿದು । ವಿಶೇಷವಾಗಿ ಭಾರದ್ವಾಜ ಮುನಿಗಳು ಮಾಡಿದ ಸೂತ್ರ ಮತ್ತು ಅದರ ಭಾಷ್ಯವನ್ನು ತಿಳಿದು । ಆಪಸ್ತಂಬರು ಮಾಡಿದ ಸೂತ್ರಗಳನ್ನೂ ಹಾಗೆಯೇ ಬೇರೇ ಮಹರ್ಷಿಗಳ ಸೂತ್ರಗಳನ್ನೂ । ಅವುಗಳ ಭಾಷ್ಯಗಳನ್ನೂ ಆಲೋಕನಮಾಡಿ, ಹಾಗೆಯೇ ಮಂತ್ರಾರ್ಥವನ್ನೂ ಒಟ್ಟು ತಿಳಿದು । ವಿಶೇಷವಾಗಿ ಆಹಿತಾಗ್ನಿಯ ಪಿತೃಮೇಧ – ಬ್ರಹ್ಮಮೇಧ ಇವುಗಳ ವಿಷಯಗಳನ್ನು ತಿಳಿದು । ಹಾಗೆಯೇ ಮನ್ವಾದಿಸ್ಮೃತಿ ಸಮೂಹಗಳಲ್ಲಿ ಮಹರ್ಷಿಗಳಿಂದ ಹೇಳಲ್ಪಟ್ಟಂತಹ ವಿಷಯಗಳನ್ನೂ । ಈ ಎಲ್ಲವನ್ನೂ ಸರಿಯಾಗಿ ಅವಲೋಕನಮಾಡಿ, ವಿದ್ವಜ್ಜನರ ಮತ್ತು ಸತ್ಪುರುಷರ ಆನಂದಕ್ಕೋಸ್ಕರವಾಗಿ । ಪ್ರಯೋಗಸಹಿತ ಪಿತೃಮೇಧ ಮತ್ತು ಅದರ ಪ್ರಾಯಶ್ಚಿತ್ತಗಳನ್ನು ವಿಶೇಷವಾಗಿ ಲೋಕದ(ಸಮಾಜದ) ಉಪಕಾರಕ್ಕೋಸ್ಕರ ನನ್ನಿಂದ ಈ ಎಲ್ಲವೂ ಹೇಳಲ್ಪಟ್ಟಿದೆ । ಪೂಜ್ಯರಾದ ಭರದ್ವಾಜಮುನಿಗಳನ್ನೂ ಮತ್ತು ಕಪರ್ದಿಮುನಿಗಳನ್ನೂ ನಮಸ್ಕರಿಸಿ । ವೇದಜ್ಞನಾದ ಭರದ್ವಾಜಗೋತ್ರದಲ್ಲಿ ಹುಟ್ಟಿದ, ವಿದ್ವಜ್ಜನರಿಗೆ ಪ್ರಿಯನಾದ, ಮಹಾವ್ರತದಿಂದ ಪರಬ್ರಹ್ಮನಿಷ್ಠನಾದ ಎಲ್ಲಾಜಿ ಎಂಬ

ಹೆಸರಿನ ನಾನು । ಮರಣಹೊಂದಿದ ಆಹಿತಾಗ್ನಿಯಾದ ಬ್ರಾಹ್ಮಣನ ಪೈತೃಮೇಧಿಕ ಕರ್ಮವನ್ನು ಭಾರದ್ವಾಜಸೂತ್ರದಲ್ಲಿ ಇರುವಂತೆ ಹೇಳುತ್ತೇನೆ । ಅದರ ಸೂತ್ರ ಮತ್ತು ಬೇರೇಸೂತ್ರಗಳನ್ನೂ ಮತ್ತು ವಿಶೇಷವಾಗಿ । ಅದರದರ ಭಾಷ್ಯಗಳನ್ನೂ ಮತ್ತು ಸತ್ಪುರುಷರಿಂದ ಹಿಂದೆ ಆಚರಿಸಲ್ಪಟ್ಟಂತಹ ಆಚಾರ ಇವೆಲ್ಲವನ್ನೂ । ಮತ್ತು ಬೇರೆಬೇರೆ ಗ್ರಂಥಗಳನ್ನೂ ಚೆನ್ನಾಗಿ ಅವಲೋಕನ ಮಾಡಿ, ಸರಿಯಾದ ಪ್ರಯೋಗವನ್ನು ಪಡೆಯಲು ಹೇಳುತ್ತೇನೆ ॥

1. ಪೈತೃಮೇಧಿಕ ಪರಿಭಾಷಾ

(ಆಹಿತಾಗ್ನಿಗಳಿಗೆ = ಅಗ್ನಿ ಹೋತ್ರಿಗಳಿಗೆ ಮಾತ್ರ)

ಅಥಾತಃ ಪೈತೃಮೇಧಿಕಂ ದಹನಂ ಅಥೇದಾನೀಂ ಮೃತಕರ್ಮೋಚ್ಯತೇ । ಪೈತೃಮೇಧಿಕಮಿತಿ ಕರ್ಮನಾಮ ಅಶ್ವಮೇಧ ಪುರುಷಮೇಧಮಿತಿವತ್ । ಆಹಿತಾಗ್ನಿಮಗ್ನಿಭಿಃ ದಹಂತಿ ಯಜ್ಞಪಾತ್ರೈಶ್ಚೇತಿ ಶ್ರುತಿ ವಿಹಿತತ್ವಾತ್ ॥ ಆಹಿತಾಗ್ನೇಃ ಪ್ರೇತಸ್ಯ ಪೈತೃಮೇಧಿಕೇನ ಕರ್ಮಣಾ ದಹನಂ ಕರ್ತವ್ಯಂ 'ಪುರುಷಾಹುತಿರ್ಹ್ಯಸ್ಯ ಪ್ರಿಯತಮಾ ಇತಿ ವಿಜ್ಞಾಯತ' ಇತಿ ಶ್ರುತೇಶ್ಚ – ಮೃತಸ್ಯ ಪುರುಷಸ್ಯ ದಹನಮೇವ ಪುರುಷಾಹುತಿಃ । ಬ್ರಹ್ಮಿಷ್ಠಶ್ಚೇತ್ ಬ್ರಹ್ಮಮೇಧಃ ಪೈತೃಮೇಧಿಕೇನ ಬ್ರಹ್ಮಮೇಧೇನ ಚ ಉಭಾಭ್ಯಾಂ ತಸ್ಯ ಸಂಸ್ಕಾರಃ । ಆಹಿತಾಗ್ನೇಃ ಮರಣ ಸಂಶಯೇ ಪ್ರಾಚೀನಾವೀತಿ, ದಹನದೇಶಂ ಚ ಉಪನಯತ ಇತ್ಯಯಂ ಪಕ್ಷೋ ನಾಶ್ರಯಣೀಯಃ ಲೋಕಗರ್ಹಿತತ್ವಾತ್ । ಗ್ರಾಮೇವಾಸ್ಯೈತೇನ ಕಲ್ಪೇನ ಜುಹುಯಾತ್ ಇತ್ಯಯಮೇವ ಪಕ್ಷಃ ಕಲಾವನುಷ್ಠೇಯಃ ದಧ್ಯಂಜಲಿ ಹೋಮವತ್ ॥

ಈಗ ಇಲ್ಲಿಂದ ಮುಂದೆ ಪೈತೃಮೇಧಿಕ ದಹನವನ್ನು ಹೇಳುತ್ತೇವೆ । ಪೈತೃಮೇಧಿಕ ಎನ್ನುವುದು ಕರ್ಮದ ಹೆಸರು, ಅಶ್ವಮೇಧ–ಪುರುಷಮೇಧ

ಎನ್ನುವಂತೆ । ಆಹಿತಾಗ್ನಿಯನ್ನು ಅಗ್ನಿಗಳಿಂದ ಯಜ್ಞಪಾತ್ರೆಯ ಜೊತೆಯಲ್ಲಿ ಸುಡುತ್ತಾರೆ ಎಂದು ವೇದದಲ್ಲಿ ಹೇಳಿರುವುದರಿಂದ । ಆಹಿತಾಗ್ನಿಯು ಸತ್ತಾಗ ಪೈತೃಮೇಧಿಕ ಕರ್ಮದಿಂದ ದಹನ ಮಾಡಬೇಕು । ಪುರುಷಾಹುತಿಯು ಈ ಅಗ್ನಿಗೆ ಬಹಳ ಇಷ್ಟವಾದದ್ದೆಂದು ತಿಳಿದುಬರುತ್ತದೆ । ಮೃತನಾದ ಪುರುಷನ ದಹನವೇ ಪುರುಷಾಹುತಿಯು । ಬ್ರಹ್ಮಿಷ್ಠನಾಗಿದ್ದರೆ ಬ್ರಹ್ಮಮೇಧವಿಧಿಯಿಂದಲೂ, ಪೈತೃಮೇಧಿಕವಿಧಿಯಿಂದಲೂ ಅವನಿಗೆ ಸಂಸ್ಕಾರವಾಗಬೇಕು । ಆಹಿತಾಗ್ನಿಗೆ ಸಾವು ಸನ್ನಿಹಿತವಾದರೆ, **ಪ್ರಾಚೀನಾವೀತಿಯಾಗಿ ಕರೆದುಕೊಂಡು** ಹೋಗುತ್ತಾರೆಂಬ ಈ ಪಕ್ಷವು ಆಶ್ರಯಿಸಲು ಯೋಗ್ಯವಾದದ್ದಲ್ಲ ಏಕೆಂದರೆ ಲೋಕನಿಂದಿತವಾದ್ದರಿಂದ । **'ಊರಿನಲ್ಲಿಯೇ ಇವನಿಗೆ ಈ ಕಲ್ಪದಿಂದ ಹೋಮ ಮಾಡಬೇಕು'** ಎಂಬ ಈ ಪಕ್ಷವೇ ಕಲಿಯುಗದಲ್ಲಿ ಆಚರಣೆಮಾಡತಕ್ಕದ್ದು (ದಧ್ಯಂಜಲಿ ಹೋಮದಂತೆ) ॥

ಆಹಿತಾಗ್ನೇಃ ಮರಣಸಂಶಯೇ ಅಗ್ನೀನ್ವಿಹೃತ್ಯ ಅಥಾऽಜಸ್ರಾಣಾಂ ದ್ವಹಂತ್ರ್ಯಹಂ ಇತ್ಯಾದಯೋ ವಿಕಲ್ಪಾಃ । ಯಾವದ್ವಾ ಸಂಶಯಂಮನ್ಯೇತ ತಾವಜಸ್ರಾನಗ್ನೀನ್ ಧಾರಯನ್ ಹೋಮಕಾಲೇ ಪ್ರಾಪ್ತೇ ತೇಷ್ವಗ್ನಿಷು ಪಯಸಾಗ್ನಿಹೋತ್ರಂ ಪ್ರಕೃತಿವಜ್ಜುಹೋತಿ ಆ ಮರಣಾತ್ ॥ ಅಗ್ನಿಹೋತ್ರೋಚ್ಛೇಷಣಂ ಪ್ರತಿಜ್ಞಾತಂ ನಿದಧಾತಿ ಪಾತ್ರಪೂರಣಾರ್ಥಂ ಪಾನಾರ್ಥಂ ವಾ । ಪ್ರಾಣಾ ವಾ ಏತ ಆಹಿತಾಗ್ನೇಃ ಯದಗ್ನಯಃ ತದೇವಂ ಸಮಿದ್ಧಾಃ । ಪಾಲಯಂತಿ ಅಗದೋಹೈಷ ಭವತೀತಿ ವಿಜ್ಞಾಯತ ಇತಿ ವಚನಾತ್ । ಭೈಷಜ್ಯಮೇವತತ್ । ತೇಷ್ವಜಸ್ರೇಷು ಜುಹುಯಾದೇಷು ಇತಿ ವಚನಾತ್ । ನ ಕೇವಲಂ ಅಗ್ನಿಹೋತ್ರಮೇವ ಅನ್ಯಾನ್ಯಪಿ ದರ್ಶಪೂರ್ಣಮಾಸಾದಿ ನಿತ್ಯ ನೈಮಿತ್ತಿಕ ಕಾಮ್ಯ ಪ್ರಾಯಶ್ಚಿತ್ತಾನ್ಯಪಿ ಕರ್ತವ್ಯಾನಿ ಯದಿ ಜೀವೇತ್ । ಮರಣಸಂಶಯ ನಿವೃತ್ತೌ ಏತತ್ ಅಗ್ನಿಹೋತ್ರೋಚ್ಛೇಷಣಂ ಸ್ವಯಂ ಯಜಮಾನಃ ಪಿಬೇತ್ ॥

ಆಹಿತಾಗ್ನಿಗೆ ಮರಣದ ಸಂಶಯವು ಬಂದರೆ, ತ್ರೇತಾಗ್ನಿಗಳನ್ನು ವಿಹರಣ (ಆಯಾಯಾ ಜಾಗದಲ್ಲಿ ಇಟ್ಟು) ಮಾಡಿ, ಆಮೇಲೆ ಅಜಸ್ರವಾಗಿ, 2 ಅಥವಾ

3 ದಿನ, ಇತ್ಯಾದಿ ವಿಕಲ್ಪಗಳಂತೆ ಧಾರಣೆಮಾಡಬೇಕು । ಎಲ್ಲಿಯವರೆಗೆ ಮರಣ ಸಂಶಯವು ತಿಳಿದುಬರುತ್ತದೆಯೋ, ಅಲ್ಲಿಯವರೆಗೆ ಅಜಸ್ರವಾಗಿ ಅಗ್ನಿಗಳನ್ನು ಧಾರಣೆಮಾಡುತ್ತಾ, ಹೋಮಕಾಲ ಬಂದಾಗ, ಅದೇ ಅಗ್ನಿಗಳಲ್ಲೇ ಹಾಲಿನಿಂದ ಅಗ್ನಿಹೋತ್ರವನ್ನು ಪ್ರಕೃತಿಯ ಅಗ್ನಿಹೋತ್ರದಂತೆ ಸಾಯುವವರೆಗೆ ಹೋಮ ಮಾಡಬೇಕು।ಅಗ್ನಿಹೋತ್ರದಲ್ಲಿ ಉಳಿದ ಹಾಲನ್ನು ನೆನಪಿರುವಂತೆ ಇಟ್ಟುಕೊಳ್ಳಬೇಕು ಪಾತ್ರಪೂರಣೆಗಾಗಲೀ ಅಥವಾ ಕುಡಿಯುವುದಕ್ಕಾಗಲಿ । **ಈ ಆಹಿತಾಗ್ನಿಯ ಪ್ರಾಣಗಳೇ ಈ ಅಗ್ನಿಗಳು ಅವುಗಳನ್ನು ಹೀಗೆ ಉರಿಸುತ್ತಿದ್ದೇವೆ । ಅಗ್ನಿಯನ್ನು ಕಾಪಾಡುತ್ತಾರೆ, ಅವರ ರೋಗವೂ ಪರಿಹಾರವಾಗುತ್ತದೆಂದು ತಿಳಿದುಬರುತ್ತದೆ** ಎಂದು ಶ್ರುತಿವಾಕ್ಯವಿರುವುದರಿಂದ । ಇದರಿಂದ ಔಷಧಿಕೊಟ್ಟಂತೆಯೇ ಆಗುತ್ತದೆ । ಆ ನಿರಂತರ ಧಾರಣೆ ಮಾಡಿದ ಅಗ್ನಿಗಳಲ್ಲೇ ಹೋಮಿಸುತ್ತಿರಬೇಕು, ಎಂದು ವಚನವಿರುವುದರಿಂದ । ಕೇವಲ ಅಗ್ನಿಹೋತ್ರವಲ್ಲದೇ, ದರ್ಶಪೂರ್ಣಮಾಸ ಮೊದಲಾದ ನಿತ್ಯ–ನೈಮಿತ್ತಿಕ–ಕಾಮ್ಯ–ಪ್ರಾಯಶ್ಚಿತ್ತ ಕರ್ಮಗಳನ್ನೂ ಒಂದು ವೇಳೆ ಬದುಕಿದ್ದರೆ ಮಾಡುತ್ತಿರಬೇಕು । ಮರಣ ಸಂಶಯವು ಹೊರಟುಹೋದರೆ, ಈ ಅಗ್ನಿಹೋತ್ರದ ಉಳಿದ ಹಾಲನ್ನು ತಾನೇ ಕುಡಿಯಬೇಕು ॥

ಪ್ರಾತರಗ್ನಿಹೋತ್ರಂ ಹುತ್ವಾ ಅಜಸ್ರೈಃ ವಿರಮ್ಯ ಅನ್ಯಂ ಪ್ರಣೀಯ ಪಥಿಕೃತಿಮಾಯುಷ್ಮತೀಂ ಚ ಕುರ್ಯಾತ್ । ಅಪಿವಾನಾಜಸ್ರಾನ್ ಕುರ್ವೀತ ಪ್ರಾಗ್ದಿಷ್ಟಗಮನಾದ್ವಿಹಾರಗ್ಂ ಸಾಧಯೇತ್ ॥ ಪ್ರೇತೇಪಿ ವಿಹರಣಮೇಕೇ ಸಮಾಮನಂತಿ । ತದನರ್ಥಕಂ ಪ್ರಜಾಯಾ ಇತಿ ವಿಜ್ಞಾಯತ ಇತಿ ವಚನಾತ್ ವಿಹಿತ ಪ್ರತಿಪಿದ್ಧತ್ವಾತ್ ವಿಕಲ್ಪಃ । ಏವಂ ಕೃತೇsಪಿ ಇತೋ ನ ಜೀವೇದಿತಿ ಪ್ರತ್ಯಯೋ ನ ಚೇತ್ ಮರಣಸಂಶಯ ಏವ ಮ್ರಿಯಮಾಣಸ್ಯೈವಂ ನ ಯಜ್ಞಲೋಪೋ ಭವತೀತಿ ವಿಜ್ಞಾಯತ ಇತಿ ವಚನಾತ್ ॥

ಪ್ರಾತರಗ್ನಿಹೋತ್ರ ಹೋಮವಾದಮೇಲೆ, ಅಜಸ್ರಾಗ್ನಿಗಳನ್ನು ನಿಲ್ಲಿಸಿ, ಮತ್ತೊಮ್ಮೆ ಆಹವನೀಯವನ್ನು ಪ್ರಣಯನವನ್ನು(ಗಾರ್ಹಪತ್ಯಾಗ್ನಿಯಿಂದ ದಕ್ಷಿಣಾಗ್ನಿಗೆ

ಮತ್ತು ಆಹವನೀಯಕ್ಕೆ ಅಗ್ನಿಯನ್ನು ಒಯ್ಯುವುದು)ಮಾಡಿ, ಪಥಿಕೃದಿಷ್ಟಿ, ಆಯುಷ್ಮತೀಷ್ಟಿಗಳನ್ನು ಮಾಡಬೇಕು । ಅಥವಾ ಅಜಸ್ರಧಾರಣೆ ಮಾಡದೇ, ತಾನು ಸಾಯುವುದಕ್ಕೆ ಮುಂಚೆ ಅಗ್ನಿವಿಹಾರ(3 ಅಗ್ನಿಗಳಾಗಿ ವಿಂಗಡಿಸುವಿಕೆ) ಗಳನ್ನು ಮಾಡಬೇಕು । ಸತ್ತಮೇಲೂ ಅಗ್ನಿವಿಹರಣ(3 ಅಗ್ನಿಗಳಾಗಿ ವಿಂಗಡಿಸುವಿಕೆ) ಮಾಡಬಹುದೆಂದು ಕೆಲವರು ಹೇಳುತ್ತಾರೆ । ಆದರೆ ಆ ಕ್ರಮವು ಮಕ್ಕಳಿಗೆ ದೋಷವಾಗುತ್ತದೆಂದು ವಚನಗಳಿಂದ ತಿಳಿದುಬರುತ್ತದೆ । ವಿಹಿತವೂ, ಪ್ರತಿಷೇಧವೂ ಎರಡೂ ಇರುವುದರಿಂದ ವಿಕಲ್ಪವು । ಹೀಗೆ ಮಾಡಿದರೂ ಅವನು ಬದುಕುವುದಿಲ್ಲವೆಂದು ತಿಳಿದರೆ, ಮರಣಸಂಶಯದಲ್ಲಷ್ಟೇ ಅಲ್ಲ, ಸಾಯುತ್ತಿರುವಾಗಲೂ, ಹೀಗಾದರೆ ಯಜ್ಞದ ಲೋಪವಾಗುವುದಿಲ್ಲವೆಂದು ತಿಳಿದುಬರುತ್ತದೆ ॥

2. ಮುಮೂರ್ಷೋಃ ಕರ್ತವ್ಯಾನಿ

(ಆಹಿತಾಗ್ನಿ ಮತ್ತು ಅನಾಹಿತಾಗ್ನಿಗಳಿಬ್ಬರಿಗೂ)

ವ್ಯಾಸಃ –

ಮ್ರಿಯಮಾಣಂ ನರಂ ದೃಷ್ಟ್ವಾ ಕರ್ತಾ ಭೂಮ್ಯಾಂ ಶುಚಿಸ್ಥಲೇ ।
ದೇವಾಲಯೇ ನದೀತೀರೇ ಗಂಗಾಂಭಸಿ ವನಸ್ಪತೌ ॥
ಅಧಶ್ಚ ದಕ್ಷಿಣಾಗ್ರೇಷು ಕುಶೇಷ್ವೇನಂ ನಿಪಾತಯೇತ್ ।
ಉತ್ತಾನಂ ದಕ್ಷಿಣಾಗ್ರೀವಂ ತಮುದ್ದಿಶ್ಯತು ಗಾಂ ತ್ಯಜೇತ್ ॥
ಹಿರಣ್ಯಂ ಭೂಮಿದಾನಂ ಚ ತಿಲಾನ್ನ್ಯಧ್ಯ ಯಥಾಪುರಾ ।
ಕುಟುಂಬಿನೇ ದರಿದ್ರಾಯ ತದ್ದಾನಂ ಸ್ವರ್ಗಸಾಧನಮ್ ॥
ಆತುರೋವಾಥ ಪುತ್ರೋ ವಾ ದದ್ಯುರಾಸನ್ನ ಬಾಂಧವಾಃ ।
ಕರ್ಣೇಜಪನ್ನಿದಂ ವಾಕ್ಯಂ ಶಾಸ್ತ್ರಾದಿಭಿರುದೀರಿತಮ್ ॥

ಸಾಯುತ್ತಿರುವಂತಹ ಮನುಷ್ಯನನ್ನು ನೋಡಿ, ಕರ್ತ್ಯವಾದ ಮಗನು ಶುದ್ಧವಾದ ನೆಲದಲ್ಲಿ । ದೇವತಾಸಾನ್ನಿಧ್ಯದ ಹತ್ತಿರ ಅಥವಾ ನದೀತೀರದಲ್ಲಿ ಅಥವಾ ಗಂಗಾತೀರದಲ್ಲಿ ಅಥವಾ ದೇವವೃಕ್ಷಗಳಿರುವ ಜಾಗದಲ್ಲಿ ॥ ಸಾಯುತ್ತಿರುವವನನ್ನು, ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹಾಸಿ ಅದರಮೇಲೆ । ಮೇಲ್ಮುಖವಾಗಿ ದಕ್ಷಿಣಕ್ಕೆ ತಲೆಯಿರುವಂತೆ ಮಲಗಿಸಬೇಕು, ಅವನಿಗಾಗಿ ಒಂದು ಹಸುವನ್ನು ಬಿಡಬೇಕು । ಚಿನ್ನ, ಭೂ ದಾನಗಳನ್ನು ಹಾಗೂ ಎಳ್ಳಿನ ಮತ್ತು ಮಾರ್ಗದ(ದಾರಿ) ದಾನವನ್ನು । ಗೃಹಸ್ಥನಾದ, ಬಡವನಾದ, ಶ್ರೋತ್ರಿಯನಾದವನಿಗೆ ಈ ದಾನಗಳನ್ನು ಕೊಟ್ಟರೆ, ಅದು ಸ್ವರ್ಗಕ್ಕೆ ಸಾಧನವಾಗುತ್ತದೆ ॥ ಸಾಯುತ್ತಿರುವವನಾಗಲೀ, ಅಥವಾ ಅವನಮಗ ಅಥವಾ ಅವನ ಬಂಧುಗಳು ಈ ದಾನಗಳನ್ನು ಮಾಡಬೇಕು । ಹಾಗೂ ದಾನವನ್ನು ಕೊಡುವಾಗ, ಶಾಸ್ತ್ರಾದಿಗಳಿಂದ ಹೇಳಲ್ಪಟ್ಟ ಈ ಮಂತ್ರಗಳನ್ನು ಕಿವಿಯಲ್ಲಿ ಜಪಿಸಿದರೆ ಅವನಿಗೆ ಉತ್ತಮಲೋಕಗಳು ಪ್ರಾಪ್ತವಾಗುತ್ತವೆ ॥

ಶಾತಾತಪೋಪಿ –

ಆತುರಸ್ಯ ಭಿಷಜ್ಞ್ಮಾತ್ರಂ ದಾನಂ ಮಿತ್ರಂ ಮರಿಷ್ಯತಃ ।
ಅನ್ನಪಾನಾಶ್ಚ ಗೋ ವಸ್ತ್ರ ಭೂ ಶಯ್ಯಾದ್ಯಾಸನಾನಿ ಚ ॥
ಪ್ರೇತಲೋಕೇ ಪ್ರಶಸ್ತಾನಿ ದಾನಾನ್ಯಷ್ಟೌ ವಿಶೇಷತಃ ।
ತಸ್ಮಾದ್ದಾನಂ ತು ಕರ್ತವ್ಯಂ ಮೃತಲೋಕೇ ಕಥಂಚನ ॥

ರೋಗಿಯಾದವನಿಗೆ ಔಷಧವೇ ಮಿತ್ರಸ್ಥಾನವು, ಸಾಯುತ್ತಿರುವವನಿಗೆ ದಾನವೇ ಮಿತ್ರಸ್ಥಾನವು । ಅನ್ನದಾನ, ಜಲಾದಿ ಪಾನೀಯದಾನ, ಗೋ, ವಸ್ತ್ರ, ಭೂ, ಹಾಸಿಗೆ, ಹೊದಿಕೆ ಮತ್ತು ಆಸನದಾನ ॥ ಪಿತೃಲೋಕದಲ್ಲಿ ಈ 8 ದಾನಗಳು ವಿಶೇಷವಾಗಿ ಶ್ರೇಷ್ಠವಾದವುಗಳು । ಆದ್ದರಿಂದ ಮರಣದ ಕಾಲದಲ್ಲಿ ಅಥವಾ ನಂತರ ಪ್ರಯತ್ನಪಟ್ಟು ದಾನಗಳನ್ನು ಮಾಡಲೇಬೇಕು ॥

3. ಕರ್ಣಮಂತ್ರ ಜಪಃ (ಇಬ್ಬರಿಗೂ)

ಏವಮೇತಾನಿ ದಾನಾನಿ ದಶದಾನಾನಿ ಚ ಕೃತ್ವಾ, ಪುತ್ರಾದಿಃ ಕರ್ತಾ ಮರಣ ಸಂಶಯ ಏವ ಬ್ರಹ್ಮವಿದಾಪ್ನೋತಿ ಪರಂ, ಭೃಗುರ್ವೈ ವಾರುಣಿಃ, ಇತ್ಯೇತಾವನುವಾಕೌ ಬ್ರಹ್ಮವಿದೋ ದಕ್ಷಿಣೇಕರ್ಣೇ ಜಪತಿ । ಇತರಸ್ಯ ಸ್ತ್ರಿಯಾಶ್ಚ ಆಯುಷಃ ಪ್ರಾಣಗ್ಂ, ಇತ್ಯನುವಾಕಮಾತ್ರಂ ಜಪೇತ್ ॥

ಸಾಯುತ್ತಿರುವವನು ಅಥವಾ ಅವನ ಮಕ್ಕಳು ಈ ರೀತಿಯಾಗಿ ಈ ದಾನಗಳನ್ನೂ ದಶದಾನಗಳನ್ನೂ ಮಾಡಿ, ನಂತರ ಬ್ರಹ್ಮವಲ್ಲೀ, ಭೃಗುವಲ್ಲಿಗಳ ಒಂದು ಅನುವಾಕವನ್ನು, ಸಾಯುತ್ತಿರುವವನು ಹೇಳಬೇಕು ಅಥವಾ ಸಾಯುತ್ತಿರುವವನ/ಸತ್ತವನ ಮಕ್ಕಳು, ಮೃತನು ಜ್ಞಾನಿಯಾಗಿದ್ದರೆ ಅವನ ಬಲಕಿವಿಯಲ್ಲಿ ಜಪಿಸಬೇಕು । ಉಳಿದ ಜನರಿಗೆ ಮತ್ತು ಸ್ತ್ರೀಯರಿಗೆ **ಆಯುಷಃ ಪ್ರಾಣಗ್ಂ.....**, ಮಂತ್ರವನ್ನು ಜಪಿಸಬೇಕು ॥

ಮರಣಾನಂತರಮಪಿ ಪ್ರಾಚೀನಾವೀತಿನಾ ಏತನ್ನಿಯಮೇನ ಕರ್ತವ್ಯಮ್ । ಯದಿಮ್ರಿಯೇತ ಅಮಾತ್ಯಾಜ್ಞಾತಯಃ ಪ್ರೇತಪುತ್ರಾಶ್ಚ ಸರ್ವೇಕೇಶಾನ್ ಪ್ರಕೀರ್ಯ । ಸ್ವೇಷು ಶಿರಸ್ಸುಪಾಂಸೂನ್ ಆವಪಂತೇ ತತಃ ಸ್ನಾತ್ವಾಚಮ್ಯ । ಊರ್ಧ್ವೋಚ್ಛಿಷ್ಟಾದಿ ಷಣ್ಣಿಮಿತ್ತ ಪ್ರಾಯಶ್ಚಿತ್ತಂ ಕುರ್ಯಾತ್ ॥

ಸತ್ತಮೇಲೂ ಕೂಡ ಪ್ರಾಚೀನಾವೀತಿಯಾಗಿ ನಿಯಮವಾಗಿ ಮಾಡಲೇಬೇಕು । ಒಂದುವೇಳೆ ಮರಣಸಂಭವಿಸಿದರೆ, ಅವನ ಸಹಾಯಕರು, ಜ್ಞಾತಿಗಳು, ಮಕ್ಕಳು ಎಲ್ಲರೂ ತಲೆಕೂದಲನ್ನು ಹರಡಿಕೊಂಡು । ತಲೆಯಮೇಲೆ ಧೂಳನ್ನು ಹಾಕಿಕೊಂಡು, ನಂತರ ಸ್ನಾನಮಾಡಿ ಆಚಮನ ಮಾಡಬೇಕು । 6 ಲಕ್ಷಣಗಳಿಂದ ಸತ್ತರೆ ಅದರಿಂದ ಬರುವ ದೋಷಗಳಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ॥

4. ಷಣ್ಣೈಮಿತ್ತ ಪ್ರಾಯಶ್ಚಿತ್ತಂ ಉಚ್ಯತೇ (ಇಬ್ಬರಿಗೂ)

ಊರ್ಧ್ವೋಚ್ಛಿಷ್ಟಂ ಅಧೋಚ್ಛಿಷ್ಟಂ ಅಂತರಿಕ್ಷಮೃತೌ ತಥಾ ।
ಕೃಚ್ಛ್ರತ್ರಯಂ ಪ್ರಕುರ್ವೀತ ಆಶೌಚ ಮರಣೇಪಿ ಚ ॥
ನಿಮಿತ್ತದ್ವಿತಯೇ ಚೈವ ಪ್ರಾಜಾಪತ್ಯಾನ್ ಷಡಾಚರೇತ್ ।
ಸರ್ವೇಷ್ವಪಿ ನಿಮಿತ್ತೇಷು ಕುರ್ಯಾತ್ ಪಂಚದಶಾಪಿ ಚ ॥
ಪರಾಶರಸ್ತ್ರಯಂ ಪ್ರಾಹ ಭೃಗುಃ ಪಂಚ ಷಡಂಗಿರಾಃ ।
ಅಸ್ಪೃಶ್ಯಸ್ಪರ್ಶ ಮರಣೇ ಕೃಚ್ಛ್ರಾನ್ ಷಡ್ಗೌತಮೋಬ್ರವೀತ್ ॥
ಪ್ರಾಯಶ್ಚಿತ್ತಂ ತು ಸರ್ವಸ್ಯ ಶಕ್ತ್ಯಾ ದ್ವಾದಶ ವಾರ್ಷಿಕಮ್ ॥

ದೇಹದ ಮೇಲುಗಡೆಯ ಅಂಗಗಳಿಂದ ವಾಂತಿಯೇ ಮೊದಲಾದವುಗಳನ್ನು ಮಾಡಿಕೊಂಡು ಸತ್ತರೆ ಹಾಗೂ ಕೆಳ ಅಂಗಗಳಿಂದ ಮಲಮೂತ್ರಾದಿಗಳನ್ನು ಮಾಡಿಕೊಂಡು ಸತ್ತರೆ ಹಾಗೂ ನೇರವಾಗಿ ಭೂಸ್ಪರ್ಶವಿಲ್ಲದೇ ಸತ್ತರೆ । ಆಶೌಚಗಳಲ್ಲಿ ಮರಣಹೊಂದಿದರೆ 3 ಕೃಚ್ಛ್ರಗಳನ್ನು ಮಾಡಿಕೊಳ್ಳಬೇಕು ॥ 2 ನಿಮಿತ್ತದೋಷಗಳಿಂದ ಸತ್ತರೆ, 6 ಪ್ರಾಜಾಪತ್ಯಕೃಚ್ಛ್ರಗಳನ್ನು ಪ್ರಾಯಶ್ಚಿತ್ತವಾಗಿ ಮಾಡಿಕೊಳ್ಳಬೇಕು । ಎಲ್ಲಾ ರೀತಿಯ ದೋಷಗಳಿಂದ ಕೂಡಿದ ಮರಣವಾದರೆ, 15 ಪ್ರಾಜಾಪತ್ಯಕೃಚ್ಛ್ರಗಳನ್ನು ಮಾಡಿಕೊಳ್ಳಬೇಕು । ಈ ವಿಷಯದಲ್ಲಿ, ಪರಾಶರರು 3 ಪ್ರಾಜಾಪತ್ಯವನ್ನು ಹೇಳಿದ್ದರೆ, ಭೃಗುಋಷಿಗಳು 5, ಅಂಗಿರಋಷಿಗಳು 6 ಎಂದು ಹೇಳಿದ್ದಾರೆ । ಅಸ್ಪೃಶ್ಯರ ಸ್ಪರ್ಶದೋಷಯುಕ್ತವಾಗಿ ಸತ್ತರೆ, ಅದಕ್ಕೆ ಗೌತಮರು 6 ಕೃಚ್ಛ್ರಗಳನ್ನು ಪ್ರಾಯಶ್ಚಿತ್ತವಾಗಿ ಹೇಳಿದ್ದಾರೆ ॥ 12 ವರ್ಷಗಳ ಕೃಚ್ಛ್ರವು ಎಲ್ಲಾ ರೀತಿಯ ದೋಷಗಳಿಗೂ ಪ್ರಾಯಶ್ಚಿತ್ತವು ॥

ಸ್ಮೃತಿತತ್ವ ನಿರ್ಣಯೇ –

ಊರ್ಧ್ವೋಚ್ಛಿಷ್ಟೇ ಅಧೋಚ್ಛಿಷ್ಟೇ ಅಂತರಿಕ್ಷಮೃತೌ ತಥಾ ।
ಆಶೌಚ ಮರಣೇ ಚೈವ ಕೃಚ್ಛ್ರತ್ರಯಮುದಾಹೃತಮ್ ॥
ಊರ್ಧ್ವೋಚ್ಛಿಷ್ಟೇತ್ವಧೋಚ್ಛಿಷ್ಟೇ ಖಟ್ವಾಯಾಂ ಮರಣೇ ತಥಾ ।
ಅಂತರಾಮರಣೇ ಚೈವ ಆಶೌಚ ಮರಣೇ ತಥಾ ॥
ಅಗ್ನಿತೋಮರಣೇ ಚೈವ ತ್ರಿಭಿಃ ಕೃಚ್ಛ್ರೈರ್ವಿಶೋಧನಮ್ ॥

ಈ ಮೇಲೆತಿಳಿಸಿದ 3 ರೀತಿಯ ದೋಷಗಳ ಸಹಿತ ಸಾವು ಸಂಭವಿಸಿದರೆ । 3 ಕೃಚ್ಛ್ರಗಳನ್ನು ಆಚರಿಸಬೇಕು ॥ ಊರ್ಧ್ವೋಚ್ಛಿಷ್ಟ, ಅಧೋಚ್ಛಿಷ್ಟ, ಮಂಚ ಮುಂತಾದವುಗಳು । ನಡುಅಂತರಿಕ್ಷಗಳಲ್ಲಿ, ಆಶೌಚಗಳಲ್ಲಿ ಹಾಗೂ ಅಗ್ನಿಯಿಂದ ಈ 3 ರೀತಿಗಳಿಂದ ಸಾವು ಸಂಭವಿಸಿದಾಗ 3 ಕೃಚ್ಛ್ರಗಳಿಂದ ಶುದ್ಧಿಯು ॥

ತಥಾ ಚ ಸ್ಮೃತಿ ಸಂಗ್ರಹೇ –

ಆಸ್ನಾತ್ವಾ ಮರಣೇ ಘೋರೇ ಆಶೌಚ ಮರಣೇಸತಿ ।
ಉಚ್ಛಿಷ್ಟಮರಣೇ ಚೈವ ಖಟ್ವಾಯಾಂ ಮರಣೇ ತಥಾ ॥
ಚಂಡಾಲ ಶ್ವಾನ ಸಂಸ್ಪೃಷ್ಟೇಷ್ವಾಕಾಶ ಮರಣೇಸತಿ ।
ಚಂಡಾಲಾನ್ಮರಣೇವಾಪಿ ತ್ರಿಭಿಃ ಕೃಚ್ಛ್ರೈಃ ಪೃಥಕ್ ಪೃಥಕ್ ॥
ಶುದ್ಧ್ಯತೀತಿ ಶೇಷಃ ।
ವಿಪ್ರವಾಕ್ಯಾನುಸಾರೇಣ ಪ್ರತ್ಯಾಖ್ಯಾಯ ವಿಧಿರ್ಯಥಾ ।
ಕೃತ್ವಾ ತು ದಹನಂ ಕಾರ್ಯಮನ್ಯಥಾ ಕಿಲ್ಬಿಷೀಭವೇತ್ ॥

ಸ್ನಾನ ಮಾಡದಿದ್ದಾಗ ಸತ್ತರೆ, ಕ್ರೂರರೀತಿಯಿಂದ ಸತ್ತರೆ, ಆಶೌಚದಲ್ಲಿ ಸತ್ತರೆ । ಉಚ್ಛಿಷ್ಟ(ಎಂಜಲು)ಯುಕ್ತನಾಗಿ ಸತ್ತರೆ, ಮಂಚದಮೇಲೆ ಸತ್ತರೆ, ಚಂಡಾಲ–ನಾಯಿ ಇವುಗಳ ಸ್ಪರ್ಶಯುಕ್ತ ಮರಣವಾದರೆ, ಆಕಾಶದಲ್ಲಿ ಸತ್ತರೆ ॥ ಇಷ್ಟು ಸಂದರ್ಭಗಳಿಗೆ 3 ಕೃಚ್ಛ್ರಗಳಿಂದ ಶುದ್ಧಿಯು ॥ ಬ್ರಾಹ್ಮಣರ ವಾಕ್ಯಗಳನ್ನು ಅನುಸರಿಸಿ ಯಥಾವಿಧಿಯಾಗಿ । ದಹನಪೂರ್ವದ ಕರ್ಮವನ್ನು ಮಾಡಬೇಕು, ಇಲ್ಲದಿದ್ದರೆ ಅವನು ಪಾಪಿಯಾಗುತ್ತಾನೆ ॥

5. ದಹನಕರ್ತೃ ಪ್ರಾಯಶ್ಚಿತ್ತಂ ಉಚ್ಯತೇ (ಇಬ್ಬರಿಗೂ)

ಕರ್ತಾಧಿಕಾರ ಸಿದ್ಧ್ಯರ್ಥಂ ತ್ರೀನ್ ಕೃಚ್ಛ್ರಾನ್ ಸಪ್ತ ಪಂಚ ವಾ ।
ಚರೇತ್ ದ್ವೌ ವಾ ತಥೈಕಾದ್ಯೈಃ ಪೈತೃಮೇಧಿಕಮಾಚರೇತ್ ॥

ಕರ್ತಾ ಕೃತಪ್ರಾಣಾಯಾಮಃ ಪ್ರಾಚೀನಾವೀತಿ ಪಿತುರ್ಗೋತ್ರಸ್ಯ ಶರ್ಮಣಃ ಪ್ರೇತಸ್ಯ ಮರಣಕಾಲೇ ಸಂಭಾವಿತಾನಾಂ ಊರ್ಧ್ವೋಚ್ಛಿಷ್ಟ ಅಧೋಚ್ಛಿಷ್ಟ ಅಂತರಿಕ್ಷಮರಣ ಖಟ್ವಾಮರಣ ಆಶೌಚಮರಣ ಅಸ್ನಾನಮರಣ ಪರ್ಯುಷಿತಾನಾಂ ನಿಮಿತ್ತಾನಾಂ ಅಪನೋದಕಂ ಪ್ರಾಯಶ್ಚಿತ್ತಂ ಕರಿಷ್ಯೇ ಇತಿ ಸಂಕಲ್ಪ್ಯ । ಪರಿಷದ್ದಕ್ಷಿಣಾಂ ಗೃಹೀತ್ವಾ ಪರಿಷದಂ ತ್ರಿಃ ಪ್ರದಕ್ಷಿಣೀಕೃತ್ಯ ಪರಿಷದ್ದಕ್ಷಿಣಾಂ ದತ್ವಾ ಪ್ರಣಮ್ಯ ವಿಜ್ಞಾಪಯೇತ್ ॥

ಕರ್ತೃವು, ಔರ್ಧ್ವದೈಹಿಕ ಕರ್ಮವನ್ನು ಮಾಡಲು ಯೋಗ್ಯತೆ ಪಡೆಯಲು, 3 ಅಥವಾ 5 ಅಥವಾ 7 । ಅಥವಾ 2 ಅಥವಾ 1 ಕೃಚ್ಛ್ರವನ್ನು ಆಚರಿಸಬೇಕು ನಂತರ ಈ ಕರ್ಮವನ್ನು ಆಚರಿಸಬೇಕು ॥

ಕರ್ತೃವು ಪ್ರಾಣಾಯಾಮ ಮಾಡಿ, ಪ್ರಾಚೀನಾವೀತಿಯಾಗಿ, ಮೃತನ ಗೋತ್ರ, ಹೆಸರುಗಳನ್ನು ಹೇಳಿಕೊಂಡು, ಮರಣಕಾಲದಲ್ಲಿ ಸಂಭವಿಸಿದ ಎಲ್ಲಾ ದೋಷಗಳ

ಪ್ರಾಯಶ್ಚಿತ್ತಕ್ಕಾಗಿ ಸಂಕಲ್ಪಿಸಿ, ಪರಿಷದ್ದಕ್ಷಿಣೆಯನ್ನು ತೆಗೆದುಕೊಂಡು, ಸಭೆಯನ್ನು 3 ಸಲ ಪ್ರದಕ್ಷಿಣೆಮಾಡಿ, ಆ ದಕ್ಷಿಣೆಯನ್ನು ಬ್ರಾಹ್ಮಣರಿಗೆ ಕೊಟ್ಟು, ನಮಸ್ಕರಿಸಿ ಈ ಮುಂದಿನಂತೆ ಪ್ರಾರ್ಥಿಸಬೇಕು ॥

ಅಶೇಷೇ ಹೇ ಪರಿಷತ್ ಮದೀಯಾಂ ವಿಜ್ಞಾಪನಾಂ ಸಮಾಕರ್ಣ್ಯ ಮಯಾ ಸಮರ್ಪಿತಾಂ ಇಮಾಂ ಪರಿಷದ್ದಕ್ಷಿಣಾಂ ಸ್ವೀಕೃತ್ಯ, ಪಿತುರ್ಮರಣಕಾಲೇ ಸಂಭಾವಿತಾನಾಂ ಸರ್ವೇಷಾಂ ದೋಷಾಣಾಂ ಅಪನೋದಕಂ ಪ್ರಾಯಶ್ಚಿತ್ತಂ ನಿಶ್ಚಿತ್ಯ । ಉಪವಿಶ್ಯ, ಉದ್ದಿಶ್ಯ ಮಾಂ ಅನುಗೃಹಾಣೇತಿ ವಿಜ್ಞಾಪ್ಯ ಪುನಃ ಪ್ರಣಮೇತ್ । ಪರಿಷದಪಿ ಯಜಮಾನೇನ ಉಕ್ತಾನಾಂ ಏಕೈಕಸ್ಯ ನಿಮಿತ್ತಸ್ಯ ನಿಮಿತ್ತಾನಾಂ ಪ್ರತ್ಯೇಕಂ ತ್ರೀಣಿ ತ್ರೀಣಿ ಪ್ರಾಜಾಪತ್ಯ ಕೃಚ್ಛ್ರಾಣಿ ಪ್ರಾಯಶ್ಚಿತ್ತಂ ನಿಶ್ಚಿತ್ಯ – ಯಜಮಾನ ತವ ಪಿತುರ್ಮರಣಕಾಲೇ ತ್ವದುಕ್ತ ನಿಮಿತ್ತಾನಾಂ ಏಕೈಕಸ್ಯ ನಿಮಿತ್ತಸ್ಯ ಪ್ರತ್ಯೇಕಂ ತ್ರೀಣಿತ್ರೀಣಿ ಪ್ರಾಜಾಪತ್ಯ ಕೃಚ್ಛ್ರಾಣಿ ಸಮುದ್ರಗಾ ಮಹಾನದೀಸ್ನಾನ, ಮೃತ್ತಿಕಾಸ್ನಾನ, ಧೇನುದಾನಾದಿ ಶಕ್ಯಪ್ರತ್ಯಾಮ್ನಾಯ ರೂಪೇಣಾಚರ । ಆಚರಿತೇ ತವ ಪಿತಾಮರಣಕಾಲೇ ಸಂಭಾವಿತೇಭ್ಯಃ ತ್ವದುಕ್ತ ನಿಮಿತ್ತೇಭ್ಯ ಊರ್ಧ್ವೋಚ್ಛಿಷ್ಟಾದಿಭ್ಯೋ ಮುಕ್ತೋ ಭವಿಷ್ಯತೀತ್ಯುಪದಿಶೇತ್ ॥

ಮೇಲೆ ತಿಳಿಸಿದಂತೆ ಸಂಕಲ್ಪಿಸಿ, ಮರಣಕಾಲದ ಎಲ್ಲಾ ದೋಷಗಳಿಗೆ ಪ್ರಾಯಶ್ಚಿತ್ತಗಳನ್ನು ಹೇಳಿಕೊಂಡು । ಕುಳಿತು, ಬ್ರಾಹ್ಮಣರ ಅನುಜ್ಞೆಯನ್ನು ಮೇಲೆ ಹೇಳಿದಂತೆ ವಿಜ್ಞಾಪಿಸಿ, ಮತ್ತೆ ನಮಿಸಬೇಕು । ಪರಿಷತ್ತು ಕೂಡ, ಯಜಮಾನನಿಂದ ಹೇಳಲ್ಪಟ್ಟ ಮರಣಕಾಲದ ಒಂದೊಂದು ದೋಷಗಳಿಗೆ ಪ್ರತ್ಯೇಕವಾಗಿ 3 ಪ್ರಾಜಾಪತ್ಯಕೃಚ್ಛ್ರಗಳನ್ನು ಪ್ರಾಯಶ್ಚಿತ್ತವಾಗಿ ಹೇಳಿ, ಮೇಲೆಹೇಳಿದಂತೆ ಕೃಚ್ಛ್ರಗಳನ್ನೂ, ನದಿಯು ಸಮುದ್ರವನ್ನು ಸೇರುವ ಜಾಗದ ಸ್ನಾನವನ್ನೂ,

ಮಹಾನದಿಗಳಸ್ನಾನವನ್ನೂ, ಮೃತ್ತಿಕಾಸ್ನಾನವನ್ನೂ, ಗೋದಾನಾದಿಗಳನ್ನೂ ಅಥವಾ ಅಭಾವ ಅಥವಾ ಅಶಕ್ತತೆಯಲ್ಲಿ, ಯಥಾಶಕ್ತಿಯಾಗಿ ಆ ದಾನಾದಿಗಳ ಹಾಗೂ ಸ್ನಾನಗಳ ಬದಲಿಗೆ ಸೂಕ್ತವಾದ ದಕ್ಷಿಣೆಯನ್ನು ಕೊಡಬೇಕೆಂದು ಸಭೆಯು ಹೇಳಬೇಕು। ಈ ಪ್ರಾಯಶ್ಚಿತ್ತಗಳಿಂದ, ನಿನ್ನ ತಂದೆಯ ಮರಣಕಾಲದಲ್ಲಿ ಸಂಭವಿಸಿದ ಎಲ್ಲಾ ನಿರ್ದಿಷ್ಟ ದೋಷಗಳ ಪರಿಹಾರವು ಆಗುತ್ತದೆ ಎಂಬುದು ಸಭೆಯ ಅನುಗ್ರಹವು ॥

ತತಃ ಕರ್ತಾ ಪ್ರಾಣಾನಾಯಮ್ಯ, ಪಿತುರ್ಗೋತ್ರಸ್ಯ, ಶರ್ಮಣಃ ಪ್ರೇತಸ್ಯ ಮರಣಕಾಲೇ ಸಂಭಾವಿತಾನಾಂ ಊರ್ಧ್ವೋಚ್ಛಿಷ್ಟಾದಿ ನಿಮಿತ್ತಾನಾಂ ಅಪನೋದಕಂ ಪ್ರಾಯಶ್ಚಿತ್ತಂ ಪರಿಷದುಪದಿಷ್ಟಂ ಶಕ್ಯಪ್ರತ್ಯಾಮ್ನಾಯ ರೂಪೇಣ ಆಚರಿಷ್ಯೇ ಇತಿ ಸಂಕಲ್ಪ್ಯ ॥

ಏಕೈಕಸ್ಯ ನಿಮಿತ್ತಸ್ಯ ತ್ರೀಣಿತ್ರೀಣಿ ಪ್ರಾಜಾಪತ್ಯ ಕೃಚ್ಛ್ರಾಣಿ ಧೇನುದಾನಾದಿ ಪೂರ್ವೋಕ್ತ ಪ್ರತ್ಯಾಮ್ನಾಯ ರೂಪೇಣ ಚರಿತ್ವಾ, ಮೃತ್ತಿಕಾಸ್ನಾನ ಕರ್ತೃಭ್ಯಃ ಫಲಸ್ವೀಕರಣಾರ್ಥಂ ಆಗ್ನೇಯಹಿರಣ್ಯಂ ತೇಭ್ಯಃ ಸಂಪ್ರದದೇ ನಮಮೇತಿ ಯಥಾಶಕ್ತಿ ದಕ್ಷಿಣಾಂ ದತ್ವಾ, ಪರಿಷದಂ ಪ್ರಾರ್ಥಯೇತ್ ॥

ಯಜಮಾನಸ್ಯ ಪಿತಾ ಗೋತ್ರಃ, ಶರ್ಮಾ ಪ್ರೇತಃ ಮರಣಕಾಲೇ ಸಂಭಾವಿತೇಭ್ಯಃ ಪೂರ್ವೋಕ್ತ ಸರ್ವೇಭ್ಯಃ ಪಾಪೇಭ್ಯೋ ಮುಕ್ತೋ ಭೂಯಾದಿತಿ ಭವಂತೋಬ್ರುವಂತು, ಇತಿ ಬ್ರೂಯಾತ್ । ಪರಿಷದಪಿ ಉಚ್ಚೈಃ 'ತಥಾಸ್ತು' ಇತಿ ಬ್ರೂಯಾತ್ ॥ ಇತಿ ಷಣ್ಣೈಮಿತ್ತ ಪ್ರಾಯಶ್ಚಿತ್ತ ಪ್ರಕರಣಮ್ ॥

ನಂತರ ಕರ್ತೃವು ಮೇಲೆ ಹೇಳಿದಂತೆ ಸಕಲದೋಷಗಳ ನಿವಾರಣೆಗಾಗಿ ಸಭೆಯು ತಿಳಿಸಿದಂತೆ, ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಸಂಕಲ್ಪಿಸಿ ॥

ಸಂಭವಿಸಿರುವ ಒಂದೊಂದು ದೋಷಕ್ಕೂ ಸಭೆಯು ಹೇಳಿದಂತೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು, ಅಥವಾ ಅದಕ್ಕೆ ಪ್ರತ್ಯಾಮ್ನಾಯವಾಗಿ ಯಥಾಶಕ್ತಿಯಾಗಿ ದಕ್ಷಿಣೆಯನ್ನು ಕೊಟ್ಟು ಸಭೆಯನ್ನು ಪ್ರಾರ್ಥಿಸಬೇಕು ॥

ಈ ಮೇಲಿನಂತೆ, ತನ್ನ ತಂದೆಯ ಮರಣಕಾಲದಲ್ಲಿ ಸಂಭವಿಸಿರುವ ಎಲ್ಲಾ ದೋಷಗಳೂ ಹೋಗಲೆಂದು ಸಭೆಯು ಅನುಗ್ರಹಿಸಲಿ, ಎಂದು ಪ್ರಾರ್ಥಿಸಬೇಕು ॥ **'ಹಾಗೆಯೇ ಆಗಲಿ'** ಎಂಬುದು ಸಭೆಯ ಮಾತು ॥

6. ಧನಿಷ್ಠಾಪಂಚಕೇ (ಇಬ್ಬರಿಗೂ)

ಧನಿಷ್ಠಾಪಂಚಕೇ – ಮರಣದಹನಾಭ್ಯಾಂ ಯೋದೋಷಸ್ಸಮಜನಿ ತದ್ದೋಷ ಪರಿಹಾರಾರ್ಥಂ, ಕಾಂಸ್ಯದಾನಂ ಕರಿಷ್ಯೇ, ಇತಿ ಸಂಕಲ್ಪ್ಯ । ಯಾನಿ ಪಾಪಾನ್ಯನೇಕಾನೀತಿ ಮಂತ್ರೇಣ ಕಾಂಸ್ಯಂ ದದ್ಯಾತ್ ॥

ಧನಿಷ್ಠಾಪಂಚಕ(ಧನಿಷ್ಠಾ – ಶತಭಿಷ – ಪೂರ್ವಾಭಾದ್ರಾ – ಉತ್ತರಾಭಾದ್ರಾ – ರೇವತಿ) ನಕ್ಷತ್ರಗಳಲ್ಲಿ, ಮರಣ ಅಥವಾ ದಹನವಾದರೆ ಅದು ದೋಷವು । ಇದರ ಪರಿಹಾರಕ್ಕಾಗಿ ಕಂಚಿನಪಾತ್ರೆಯನ್ನು ದಾನಮಾಡುತ್ತೇನೆಂದು ಸಂಕಲ್ಪಿಸಿ । ಯಾನಿ ಪಾಪಾನಿ....., ಎಂಬ ಶ್ಲೋಕದಿಂದ ದಾನವನ್ನು ಕೊಡಬೇಕು ॥

ಲೋಕಾಕ್ಷಿಃ –

ಏಕಾಶೀತಿಪಲಂ ಕಾಂಸ್ಯಂ ತದರ್ಧಂ ವಾ ತದರ್ಧಕಂ ।
ನವಪಟ್ತ್ರಿಪಲಂ ವಾಪಿ ದದ್ಯಾತ್ ವಿಪ್ರಾಯ ಶಕ್ತಿತಃ ॥

81 ಅಥವಾ 40 ಅಥವಾ 20 ಅಥವಾ 69 ತೊಲ(1 ತೊಲ=12 ಗ್ರಾಂ) ಕಂಚಿನಪಾತ್ರೆಯನ್ನು ದಾನಮಾಡಬೇಕೆಂದು ಲೋಕಾಕ್ಷಿ ಮುನಿಗಳು ಹೇಳಿದ್ದಾರೆ ॥

7. ಧನಿಷ್ಠಾಪಂಚಕ ಮರಣೇ ವಿಶೇಷಃ (ಇಬ್ಬರಿಗೂ)

ಹಿರಣ್ಯಂ ಶಕಲಮುಖ್ಯೇನ್ಯಸ್ಯಾಹುತಿ ತ್ರಯಂ ತತ್ರ ವಹವಪಾಂ
ಜಾತವೇದ ಇತಿ ಮಂತ್ರೇಣ ॥

ತತ್ಕಾಲೇ ವಾನ್ಯಕಾಲೇ ವಾ ಚೈತತ್ಸರ್ವಂ ಸಮಾಚರೇತ್ ।
ಯದಿ ನ ಕ್ರಿಯತೇ ಶಾಂತಿಸ್ತತ್ಕುಲಂ ಚಾಶು ನಶ್ಯತಿ ॥

ತತ್ಪ್ರಕಾರಃ ವಹವಪಾಂಜಾತವೇದಃ ಸತ್ಯಾ ಏತಾ ಆಶಿಷಸ್ಸಂತು ಕಾಮೈಸ್ವಾಹೇತಿ ಮಂತ್ರಾವೃತ್ತ್ಯಾ ಆಹುತಿತ್ರಯಂ ಚಿತ್ಯಾಂ ನಿಕ್ಷಿಪ್ತ ಪ್ರೇತಮುಖೇ ಹಿರಣ್ಯಶಕಲಂ ನಿಧಾಯ ತಸ್ಮಿನ್ ಜುಹುಯಾತ್ – ಅಗ್ನಯೇ ಜಾತವೇದಸ ಇದಂ ॥

ಮೃತಿಕಾಲೇ ದಾಹಕಾಲೇ ದದ್ಯಾತ್ ಶಾಂತ್ಯೈ ಧನಾದಿಕಂ ।
ಭದ್ರೇ ತ್ರಿಪದನಕ್ಷತ್ರೇ ಭೃಗ್ವಂಗಾರಕ ವಾಸರೇ ॥
ಮರಣಂ ದಹನಂ ವಾಸ್ಯಾತ್ತ್ರಿವಾರಂ ತಾದೃಶಂ ಭವೇತ್ ।
ಭದ್ರೇಭೂಮಿಃ ಪ್ರದೇಯಾಸ್ಯಾ ತ್ರಿಪದಕ್ಷೇ ಹಿರಣ್ಯಕಂ ॥
ವಾರೇವಾರಾಧಿ ದೈವತ್ಯಂ ವಾಸೋದಾನಂ ವಿಧೀಯತೇ ।
ದ್ವಿಪದಕ್ಷೇ ತು ಗೌರ್ದೇಯಾ ನಂದಾ ರಿಕ್ತಾಸು ಧಾನ್ಯದಃ ॥
ಧನಿಷ್ಠಾಪಂಚಕಮೃತೇ ಪಂಚರತ್ನಾನಿ ತನ್ಮುಖೇ ।
ನ್ಯಸ್ಯಾಹುತಿತ್ರಯಂ ಕುರ್ಯಾತ್ ಕರ್ತಾ ವಹಾವಪಾಮಿತಿ ॥

ಚಿನ್ನದಕಡ್ಡಿಯನ್ನು ಸತ್ತವನ ಮುಖದಲ್ಲಿ ಹಾಕಿ, 3 ಆಹುತಿಗಳನ್ನು ವಹವಪಾಂ....., ಎಂಬ ಮಂತ್ರಗಳಿಂದ ತುಪ್ಪವನ್ನು ಹೋಮಿಸಬೇಕು । ಈ ಮರಣ ಅಥವಾ ದಹನಕಾಲಗಳಲ್ಲಿ ಹೀಗೆ ಮಾಡಬೇಕು । ಒಂದುವೇಳೆ ಮಾಡದಿದ್ದರೆ, ಆ ಕುಲದಲ್ಲಿ ಶಾಂತಿಯು ಬಹುಬೇಗನೇ ನಾಶವಾಗುತ್ತದೆ । ಆ ಹೋಮಮಾಡುವ ಕ್ರಮವನ್ನು ಈ ರೀತಿ ಹೇಳಿದೆ । ವಹವಪಾಂ....., ಮಂತ್ರವನ್ನು 3 ಸಲ ಆವೃತ್ತಿಮಾಡಿ, 3 ಸಲ ಹೋಮಮಾಡಬೇಕು । ಹೇಗೆಮಾಡಬೇಕೆಂದರೆ, ಸತ್ತವನನ್ನು ಚಿತೆಯಲ್ಲಿ ಮಲಗಿಸಿ, ಅವನ ಮುಖದಲ್ಲಿ ಚಿನ್ನದಕಡ್ಡಿಯನ್ನು ಹಾಕಿದಮೇಲೆ, ಈ 3 ಮಂತ್ರಗಳಿಂದ ತುಪ್ಪವನ್ನು ಹೋಮಿಸಬೇಕು । ಅಗ್ನಯೇ ಜಾತವೇದಸ ಇದಂ ಎಂಬುದು ಉದ್ದೇಶತ್ಯಾಗ ॥

ಮರಣ ಅಥವ ದಹನಕಾಲಗಳಲ್ಲಿ ಶಾಂತಿಗಾಗಿ ಧನಾದಿಗಳನ್ನು ದಾನ ಮಾಡಬೇಕು । ಭದ್ರ ತಿಥಿ(ಬಿದಿಗೆ–ಸಪ್ತಮಿ–ದ್ವಾದಶಿ), ತ್ರಿಪಾದ ನಕ್ಷತ್ರ (ಕೃತ್ತಿಕಾ, ಪುನರ್ವಸು, ಉತ್ತರ, ವಿಶಾಖಿ, ಉತ್ತರಾಷಾಢ, ಪೂರ್ವಾಭಾದ್ರಾ), ಮಂಗಳ–ಶುಕ್ರವಾರ, ಈ ಮೂರೂ ಲಕ್ಷಣಗಳಲ್ಲಿ ಮರಣ ಅಥವಾ ದಹನವಾದರೆ ಮೇಲೆ ತಿಳಿಸಿದಂತೆ 3 ಬಾರಿ ಮಂತ್ರವನ್ನು ಜಪಿಸಿ, ಹೋಮಿಸಬೇಕು । ಭದ್ರತಿಥಿಗಳಲ್ಲಿ ಮರಣ/ದಹನಗಳ ದೋಷದ ಪರಿಹಾರಕ್ಕೆ, ಭೂದಾನ, ತ್ರಿಪಾದನಕ್ಷತ್ರಗಳಲ್ಲಿ ಮರಣ/ದಹನಗಳ ದೋಷದ ಪರಿಹಾರಕ್ಕೆ, ಹಿರಣ್ಯದಾನ, ಮಂಗಳ, ಶುಕ್ರವಾರಗಳಲ್ಲಿ ಮರಣ/ದಹನಗಳ ದೋಷದ ಪರಿಹಾರಕ್ಕೆ, ವಸ್ತ್ರದಾನಗಳನ್ನು, ಕ್ರಮವಾಗಿ ವಿಧಿಸಿದೆ । ದ್ವಿಪಾದ ನಕ್ಷತ್ರಗಳಲ್ಲಿ(ಮೃಗಶಿರಾ–ಚಿತ್ತಾ–ಧನಿಷ್ಠ) ಮರಣ/ದಹನಗಳ ದೋಷದ ಪರಿಹಾರಕ್ಕೆ ಗೋದಾನವು ಹಾಗೆಯೇ ನಂದತಿಥಿ(ಪಾಡ್ಯ–ಷಷ್ಠಿ–ಏಕಾದಶಿ) ಮತ್ತು ರಿಕ್ತತಿಥಿ(ಚೌತಿ–ನವಮಿ–ಚತುರ್ದಶಿ)ಗಳಲ್ಲಿ ಮರಣ/ದಹನಗಳ ದೋಷದ ಪರಿಹಾರಕ್ಕೆ ಧಾನ್ಯದಾನವು ॥ ಧನಿಷ್ಠಾಪಂಚಕದಲ್ಲಿ(ಧನಿಷ್ಠ–ಶತಭಿಷ–ಪೂರ್ವಾಭಾದ್ರಾ–ಉತ್ತರಾಭಾದ್ರಾ–ರೇವತಿ) ಮರಣವಾದರೆ, ಪಂಚರತ್ನಗಳನ್ನು ಸತ್ತವನ ಮುಖದಲ್ಲಿ ವಿಧಿಯಂತೆ ಹಾಕಿ, ವಹವಪಾಂ....., ಎಂಬ ಮಂತ್ರದಿಂದ 3 ಆಹುತಿಗಳನ್ನು ಹೋಮಿಸಬೇಕು ॥

8. ತಿಥಿವಾರನಕ್ಷತ್ರೇ ಪುನರ್ದಹನಂ ಯಥಾ ಕಲ್ಪಕಾರಿಕಾಃ (ಇಬ್ಬರಿಗೂ)

ತ್ರಯಾಣಾಂ ಸನ್ನಿಪಾತೇ ಸ್ಯಾತ್ ಪುನರ್ದಹನಮಾಚರೇತ್ ।
ಯತ್ರ ದಾಹವಿಧೌ ವೃತ್ತೇ ಪುನರ್ದಹನಚೋದನಾ ॥
ಅಸ್ಮಾತ್ತ್ವಮಧಿ ಜಾತೋಸಿ ತ್ವದಿತ್ಯೇಕಾಹುತಿರ್ಭವೇತ್ ।
ಅಸ್ಮಾತ್ತ್ವಮಧಿ ಜಾತೋಸಿ ತ್ವದಯಂ ಜಾಯತಾಂ ಪುನಃ ॥

ಅಗ್ನಯೇ ವೈಶ್ವಾನರಾಯ ಸುವರ್ಗಾಯ ಲೋಕಾಯ ಸ್ವಾಹೇತಿ ಏಕಾಮಾಜ್ಯಾಹುತಿಂ ಶವಾಗ್ನೌ ಜುಹುಯಾತ್ । ಏತತ್ ಪುನರ್ದಹನಮ್ ॥

ತಿಲಪಿಷ್ಟಮಯಾನ್ ಪಿಂಡಾನ್ ಶವಪಾರ್ಶ್ವೇ ವಿನಿಕ್ಷಿಪೇತ್ ।
ತತ್ತತ್ಪುಷ್ಕರ ಸಂಖ್ಯಾಕಾನ್ ಶವಾಲಂಕಾರಮಾಚರೇತ್ ॥

3 ದೋಷಗಳಿಂದ(ತಿಥಿ–ವಾರ–ನಕ್ಷತ್ರ) ಯುಕ್ತನಾಗಿ ಸತ್ತರೆ ಪುನರ್ದಹನವನ್ನು ಮಾಡಬೇಕು । ಎಲ್ಲಿ ದಹನವಿಧಿಯನ್ನು ಹೇಳಿದೆಯೋ ಅಲ್ಲಿಯೇ ಪುನರ್ದಹನವನ್ನೂ ಹೇಳಿದೆ ॥ **ಅಸ್ಮಾತ್ತ್ವಮಧಿ ಜಾತೋಸಿ ತ್ವತ್.....**, ಎಂಬ ಮಂತ್ರದಿಂದ 1 ಆಜ್ಯಾಹುತಿಯನ್ನು ದಹನವಾದಮೇಲೆ ಅದೇ ಜಾಗದಲ್ಲಿ(ಅದೇ ಬೂದಿಯಲ್ಲಿ/ಅಗ್ನಿಯಲ್ಲಿ) ಹೋಮಿಸಬೇಕು । ಈ ಮಂತ್ರದಿಂದ ಶವಾಗ್ನಿಯಲ್ಲಿ ಹೋಮಿಸಬೇಕು । ಇದೇ ಪುನರ್ದಹನವು ॥ ಎಳ್ಳುಮಿಶ್ರಿತ ಹಿಟ್ಟಿನ ಪಿಂಡಗಳನ್ನು ಶವಾಗ್ನಿಯ ಪಕ್ಕದಲ್ಲಿ ಇಡಬೇಕು । ಆಯಾಯ ಪುಷ್ಕರ (ವಾರ ದೇವತೆಯ) ಸಂಖ್ಯೆಯಲ್ಲಿ ಶವದ ಅಲಂಕರವನ್ನು ಮಾಡಬೇಕು ॥

9. ಭದ್ರ ತಿಥ್ಯಾದೌ (ಇಬ್ಬರಿಗೂ)

ಭದ್ರತಿಥೌ ಮರಣದಹನಾಭ್ಯಾಂ ಯೋ ದೋಷಸ್ಸಮಜನಿ ತದ್ದೋಷ ಪರಿಹಾರಾರ್ಥಂ ಭೂದಾನಂ ತನ್ಮೂಲ ಹಿರಣ್ಯದಾನಂ ವಾ ಕರಿಷ್ಯೇ ಇತಿ ಸಂಕಲ್ಪ್ಯ । ತನ್ಮೂಲಂ ಹಿರಣ್ಯಂ ವಾ ದದ್ಯಾತ್ ॥

ಭದ್ರತಿಥಿಗಳಲ್ಲಿ(ಬಿದಿಗೆ–ಸಪ್ತಮಿ–ದ್ವಾದಶಿ), ಮರಣ ಅಥವಾ ದಹನಗಳಾದರೆ ಆ ದೋಷದ ಪರಿಹಾರಕ್ಕಾಗಿ ಭೂ, ಹಿರಣ್ಯದಾನಗಳನ್ನು ಸಂಕಲ್ಪ ಪೂರ್ವಕವಾಗಿ ಮಾಡಬೇಕು । ಒಂದುವೇಳೆ ಭೂದಾನ ಮಾಡಲು ಭೂಮಿ ಇಲ್ಲದಿದ್ದರೆ, ಅದಕ್ಕೆ ತಕ್ಕ ಮೌಲ್ಯದ ಹಣವನ್ನಾದರೂ ಕೊಡಬೇಕು ॥

10. ತ್ರಿಪಾನ್ನಕ್ಷತ್ರೇ ಮರಣೇ (ಇಬ್ಬರಿಗೂ)

ತ್ರಿಪಾನ್ನಕ್ಷತ್ರೇ ಮರಣದಹನಾಭ್ಯಾಂ ಯೋ ದೋಷಸ್ಸಮಜನಿ ತದ್ದೋಷ ಪರಿಹಾರಾರ್ಥಂ ಸಹಿರಣ್ಯಂ ವಸ್ತ್ರದಾನಂ ಕರಿಷ್ಯೇ ಇತಿ ಸಂಕಲ್ಪ್ಯ, ಹಿರಣ್ಯಂ ದದ್ಯಾತ್ । ಭಾನು ಭೌಮ ಭೃಗು ಶನಿವಾರೇಷು ಮರಣದಹನಾಭ್ಯಾಂ ಯೋ ದೋಷಸ್ಸಮಜನಿ ತದ್ದೋಷ ಪರಿಹಾರಾರ್ಥಂ ವಸ್ತ್ರದಾನಂ ಕರಿಷ್ಯೇ ಇತಿ ಸಂಕಲ್ಪ್ಯ, ವಸ್ತ್ರಂ ದದ್ಯಾತ್ ॥

ದ್ವಿಪಾದ (ಮೃಗಶಿರಾ–ಚಿತ್ತಾ–ಧನಿಷ್ಠ) ಅಥವಾ ತ್ರಿಪಾದ(ಕೃತ್ತಿಕಾ, ಪುನರ್ವಸು, ಉತ್ತರ, ವಿಶಾಖ, ಉತ್ತರಾಷಾಢ, ಪೂರ್ವಾಭಾದ್ರಾ) ನಕ್ಷತ್ರಗಳಲ್ಲಿ ಮರಣ ಅಥವಾ ದಹನಗಳಾದರೆ ಆ ದೋಷದ ಪರಿಹಾರಕ್ಕಾಗಿ, ಹಿರಣ್ಯ ಸಹಿತವಾಗಿ ವಸ್ತ್ರದಾನವನ್ನು ಸಂಕಲ್ಪ ಪೂರ್ವಕವಾಗಿ ಮಾಡಬೇಕು । ಭಾನು, ಮಂಗಳ, ಶುಕ್ರ, ಶನಿವಾರಗಳಲ್ಲಿ ಮರಣ ಅಥವಾ ದಹನಗಳಾದರೆ ಆ ದೋಷದ ಪರಿಹಾರಕ್ಕಾಗಿ ವಸ್ತ್ರ ದಾನವನ್ನು ಸಂಕಲ್ಪ ಪೂರ್ವಕವಾಗಿ ಮಾಡಬೇಕು ॥

11. ಪ್ರಥಮದಿವಸೇ ಅಕೃತವಪನಸ್ಯ ಕಾಲನಿರ್ಣಯಮಾಹ (ಇಬ್ಬರಿಗೂ)

ಬೋಧಾಯನಃ –

ಅನಷ್ಟಕೇಶೋ ಯಃ ಪೂರ್ವಂ ಸೋತ್ರ ಕೇಶಾನ್ ಪ್ರವಾಪಯೇತ್ ।
ದ್ವಿತೀಯೇಹ್ನಿ ತೃತೀಯೇಹ್ನಿ ಪಂಚಮೇ ಸಪ್ತಮೇಪಿ ವಾ ॥
ಯಾವತ್ ಶ್ರಾದ್ಧಂ ಪ್ರದೀಯೇತ ತಾವದಿತ್ಯಪರಂ ಮತಮ್ ॥

ಮೊದಲನೇ ದಿನ ಕೇಶವಪನವನ್ನು ಮಾಡಿಸಿಕೊಳ್ಳದಿದ್ದರೆ, ಅವನು ಈ ದಿನಗಳಲ್ಲಿ ವಪನ ಮಾಡಿಸಿಕೊಳ್ಳಬೇಕು । 2 / 3 / 5 / 7 ಈ ದಿನಗಳಲ್ಲಿ ॥ ಎಲ್ಲಿಯವರೆಗೆ ನವಶ್ರಾದ್ಧವನ್ನು ಮಾಡುತ್ತಾನೋ ಅಲ್ಲಿಯವರೆಗೂ ಕೇಶವಪನಕ್ಕೆ ಅವಕಾಶವಿದೆ ಎಂದು ಕೆಲವರ ಅಭಿಪ್ರಾಯವೂ ಇದೆ ॥

ಪರಾಶರಃ –

ದ್ವಿತೀಯೇಹನಿ ಕರ್ತವ್ಯಂ ಕ್ಷುರಕರ್ಮ ಪ್ರಯತ್ನತಃ ।
ತೃತೀಯೇ ಪಂಚಮೇ ವಾಪಿ ಸಪ್ತಮೇ ವಾ ಪ್ರದಾನತಃ ॥
ಪ್ರದಾನಮೇಕಾದಶಾಹ್ನಿಕಂ ಶ್ರಾದ್ಧಂ ।
ತತ್ರ ಪ್ರದಾನ ಇತಿ ವಚನಾತ್ ವಪನಂ ಪುತ್ರಾಣಾಂ ಚ
ಕನಿಷ್ಠಭ್ರಾತೄಣಾಂ ಚ ॥

2 ನೇದಿನ, ವಪನವನ್ನು ಅವಕಾಶವಿದ್ದರೆ ಮಾಡಿಸಿಕೊಳ್ಳಲೇಬೇಕು । ಅನಿವಾರ್ಯಗಳಲ್ಲಿ ಮಾತ್ರ, 3 ಅಥವಾ 5 ಅಥವಾ 7 ನೇದಿನಗಳಲ್ಲಿ

ಮಾಡಿಸಿಕೊಳ್ಳಬೇಕು ॥ 11 ನೇ ದಿವಸದ ಶ್ರಾದ್ಧದಲ್ಲಿಯೂ । ಅಲ್ಲಿ 'ಪ್ರದಾನ' ಎಂಬ ಮಾತಿರುವುದರಿಂದ, ಮೃತನ ಮಕ್ಕಳಿಗೆ ಮತ್ತು ಅವನ ತಮ್ಮಂದಿರಿಗೆ ಕೇಶವಪನ ಉಂಟು ॥

ಆಪಸ್ತಂಬಃ –

ಅನುಭಾವಿನಾಂ ಚ ಪರಿವಾಪನಂ ಇತಿ। ಅನುಪಶ್ಚಾತ್ ಭವಂತಿ ಜಾಯಂತ ಇತಿ ಪುತ್ರಾಃ ಕನಿಷ್ಠಭ್ರಾತರಶ್ಚ ಅಥವಾ ಅನುಭಾವಿನ ಇತಿ ಪುತ್ರಾ ಏವ ನಿರ್ದಿಶ್ಯಂತೇ । ಸಪಿಂಡಾಶ್ಚೇತಿ ಕೇಚಿತ್ । ದೇಶಕಾಲಾಪೇಕ್ಷಮಭಿಹಿತಂ ತತ್ರೈವ ॥

ಆಪಸ್ತಂಬರೂ ಸಹ, ತಮ್ಮಂದಿರಿಗೆ 11 ನೇ ದಿನ ವಪನ ಉಂಟೆಂದು ಹೇಳಿದ್ದಾರೆ । ಅನುಭಾವಿಗಳೆಂದರೆ, ಮೃತನಿಗಿಂತ ಆಮೇಲೆ ಹುಟ್ಟಿದ ಮಕ್ಕಳು (ತಮ್ಮಂದಿರು) ಎಂದರ್ಥ । ಕೆಲವರು ತ್ರಿಪೌರುಷ ಜ್ಞಾತಿಗಳೂ ಎಂದೂ ಅಭಿಪ್ರಾಯ ಪಡುತ್ತಾರೆ । ದೇಶಕಾಲವನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ತಕ್ಕಂತೆ ಹೇಳಿದೆ ॥

ಗಂಗಾಯಾಂ ಭಾಸ್ಕರಕ್ಷೇತ್ರೇ ಮಾತಾಪಿತ್ರೋರ್ಗುರೋರ್ಮೃತೌ ।
ಆಧಾನೇ ಯಜ್ಞಕಾಲೇ ಚ ವಪನಂ ಸಪ್ತಸು ಸ್ಮೃತಮ್ ॥
ಕರ್ತಾಸಹ ವಪನಂ ಕಾರ್ಯಂ ।

ಗಂಗೆಯಲ್ಲಿ, ಸೂರ್ಯನಕ್ಷೇತ್ರದಲ್ಲಿ (ಕೋನಾರ್ಕ/ಅಜ್ಮೀರದ ಪುಷ್ಕರ), ತಂದೆ, ತಾಯಿಯರ ಮತ್ತು ಗುರುಗಳ ಮರಣ ಸಂಭವಿಸಿದಾಗ । ಹಾಗೂ ತ್ರೇತಾಗ್ನಿ ಆಧಾನದಲ್ಲಿ ಹಾಗೂ ಸೋಮಯಾಗಾದಿಗಳಲ್ಲಿ ಈ 7 ಸ್ಥಳಗಳಲ್ಲಿ ಮತ್ತು ಸಂದರ್ಭಗಳಲ್ಲಿ ಕರ್ತೃವಿನ ಜೊತೆ ಬೇರೆಯವರಿಗೂ(ಜ್ಞಾತಿ) ವಪನವು ಉಂಟು ॥

ತಥಾ ಚ ಸ್ಮೃತಿಃ –

ಜ್ಞಾತಯಃ ಸಪ್ತಮಾದರ್ವಾಕ್ ಕನಿಷ್ಠಾದಶಮೇಹನಿ ।
ವಾಪಯೇಯುಶ್ಚ ತೇ ಸರ್ವೇ ಕರ್ತೃಭಿಸ್ಸಹ ಸಂಯುತಾಃ ॥

7 ತಲೆಮಾರು ಕಳೆಯದಿರುವ ಮತ್ತು ಮೃತನಿಗಿಂತ ಕನಿಷ್ಠರಾದವರು । 10 ನೇ ದಿನ ಕರ್ತೃ ಸಹಿತರಾಗಿ ಎಲ್ಲರೂ ವಪನ ಮಾಡಿಸಿಕೊಳ್ಳಬೇಕು ॥

ಪ್ರಥಮೇಹ್ನಿ ದಶಮೇಹ್ನಿ ವಾ ಅರ್ವಾಕ್ ಶ್ರಾದ್ಧದಿನಾತ್ । ಭ್ರಾತೄಣಾಂ ವಪನಂ ಭವೇತ್ ಪಿತೃಮೃತೇ । ಜೀವೇತ್ಪಿತರ್ಯಗ್ರಜೇ ಪ್ರೇತೇತ್ಸಹ ಜೇಷ್ಮ್ಯನುಪ್ರಭವ ಏವಾಗ್ನಿಂ ದಿಶೇತ್ ಕ್ಷೌರವಾನ್ । ನಾನ್ಯೇಷಾಂ ವಪನಂ ಪರಂ ಪಿತೃಮೃತೌ ಜ್ಯೇಷ್ಠೇ ವಿಪನ್ನೇಸತಿ ಭ್ರಾತೄಣಾಂ ವಪನಂ ಹಿ ನಾಗ್ನಿದಂ ಋತೇನ್ಯೇಷಾಂ ನಿಮಿತ್ತೇಸತಿ ॥

1 ನೇ ದಿನ ಅಥವಾ 10ನೇ ದಿನ ಮತ್ತು ಶ್ರಾದ್ಧದಿನಕ್ಕಿಂತ ಮೊದಲದಿನ । ಪುತ್ರರಿಗೆ ತಂದೆಯ ಸಾವಿನಲ್ಲಿ ವಪನವು ಇದೆ । ತಂದೆಯು ಬದುಕಿರಲಾಗಿ ಅವಿವಾಹಿತನಾದ ಅಣ್ಣನು ಮೃತನಾದರೆ, ಆಗ ತಮ್ಮಂದಿರು ಅಗ್ನಿಯನ್ನು ಕೊಡಬೇಕು(ದಹನ), ಕ್ಷೌರವೂ ತಂದೆ ಇದ್ದರೂ ಸಹ ಉಂಟು । ಇನ್ನು ಬೇರೆಯವರ ಮರಣದಲ್ಲಿ ವಪನವಿಲ್ಲ, ತಂದೆಯ ಮರಣದಲ್ಲಿ ಮತ್ತು ದೊಡ್ಡಣ್ಣನ ಮರಣದಲ್ಲಿ, ಸಂಬಂಧಪಡುವ ಎಲ್ಲರಿಗೂ ವಪನವು ಇದೆ । ಬೇರೇ(ಭಿನ್ನ) ಕರ್ತೃತ್ವವಾದರೆ, ಕ್ಷೌರ(ವಪನ)ವು ಇಲ್ಲ ॥

12. ರಾತ್ರೌ ವಪನ ನಿಷೇಧಃ (ಇಬ್ಬರಿಗೂ)

ರಾತ್ರೌ ದಗ್ಧ್ವಾತು ಪಿಂಡಾಂತಂ ಕುರ್ಯಾತ್ ವಪನವರ್ಜಿತಂ ।
ಶ್ವೋಭೂತೇ ವಪನಂ ತತ್ರ ಕೇಶಮಾತ್ರಂ ವಿಧೀಯತೇ ॥
ಮಾತಾಪಿತೃ ಪಿತೃವ್ಯಾಣಾಂ ಮಾತುಲಾಗ್ರಜಯೋರ್ಮೃತೌ ।
ಶ್ವಶುರಾಚಾರ್ಯಯೋರೇಷಾಂ ಪತ್ನೀನಾಂ ಚ ಪಿತೃಷ್ವಸುಃ ॥
ಮಾತೃಶ್ವಸುರ್ಭಗಿನ್ಯಾಶ್ಚ ವಪನಂ ಕುರುತೇದ್ವಿಜಃ ।
ಅಂತರ್ವಾನಪಿ ಕರ್ತವ್ಯಾ ಪಿತ್ರೋರ್ವಪನಮೇವತತ್ ॥
ಅನ್ಯಥಾ ವಪನಂ ಕುರ್ಯಾತ್ ಬ್ರಹ್ಮಹತ್ಯಾ ಸಮಂ ಭವೇತ್ ॥

ಕ್ಷೌರಂ ಶವಾನುಗಮನಂ ನಖ ನಿಕೃಂತನಂ ಚ ಶ್ರಾದ್ಧಂ ಚ ವಾಸ್ತುಕರಣಂ ತು ಅತಿದೂರಯಾನಂ । ಉದ್ವಾಹಮಂಬುಧಿ ಜಲ ಸ್ನಪನೋ ಪಯೋಗಮ ಆಯುಃಕ್ಷಯಂ ಭವತಿ ಗರ್ಭಿಣಿಕಾ ಪತೀನಾಂ । ಅಕೃತ ಪ್ರೇತಕೃತ್ಯೋ ಯೋ ಗರ್ಭಿಣೀಪತಿರೇವ ಚ । ನಸ್ನಾಯಾದುದಧೌ ವಿದ್ವಾನ್ ಸೇತೋರನ್ಯತ್ರ ಕರ್ಹಿಚಿತ್ ॥

ರಾತ್ರಿಯಲ್ಲಿ ದಹನಮಾಡಿ, ವಪನವನ್ನು ಮಾಡಿಸಿಕೊಳ್ಳದೇ, ಪಿಂಡಾಂತಕರ್ಮದ ವರೆಗೆ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು । ಮರುದಿನ ಮುಖ ಮತ್ತು ತಲೆಯ ಕ್ಷೌರವನ್ನು ಮಾಡಿಸಿಕೊಳ್ಳಬೇಕು ॥ ತಾಯಿ, ತಂದೆ, ಚಿಕ್ಕಪ್ಪ, ಸೋದರಮಾವ, ಅಣ್ಣ । ಹೆಣ್ಣುಕೊಟ್ಟ ಮಾವ, ಆಚಾರ್ಯರು, ಗುರುಗಳು, ಹೆಂಡತಿ, ಸೋದರ ಅತ್ತೆ(ತಂದೆಯ ಅಕ್ಕತಂಗಿಯರು), ಇವರ ಔರ್ಧ್ವದೈಹಿಕ ಕರ್ಮಗಳನ್ನು ಮಾಡುವಾಗ ॥ ಹಾಗೂ ತಾಯಿಯ ಅಕ್ಕತಂಗಿಯರು, ತನ್ನ ಅಕ್ಕತಂಗಿಯರು, ಇವರ ಈ ಕರ್ಮವನ್ನು ಮಾಡಬೇಕಾದರೂ ಸಹ ಕರ್ತೃವು

ವಪನವನ್ನು ಮಾಡಿಸಿಕೊಳ್ಳಬೇಕು । ತಂದೆ, ತಾಯಿಯರ ಈ ಕರ್ಮವನ್ನು ಮಾಡಬೇಕಾದರೆ, ಕರ್ತೃವಿನ ಹೆಂಡತಿಯು ಗರ್ಭಿಣಿಯಾಗಿದ್ದರೂ ವಪನವನ್ನು ಕರ್ತೃವು ಮಾಡಿಸಿಕೊಳ್ಳಬೇಕು ॥ ಈ ಸಂದರ್ಭಗಳನ್ನು ಬಿಟ್ಟು ಬೇರೇ ಸಂದರ್ಭಗಳಲ್ಲಿ ಗರ್ಭಿಣೀಪತಿಯು ವಪನಮಾಡಿಸಿಕೊಂಡರೆ ಅದು ಬ್ರಹ್ಮಹತ್ಯೆಗೆ ಸಮವು ॥

ಕ್ಷೌರ, ಶವದಜೊತೆ ಹೋಗುವಿಕೆ, ಉಗುರು ಕತ್ತರಿಸುವಿಕೆ, ಶ್ರಾದ್ಧದ ನಿಮಂತ್ರಣವಾಗುವಿಕೆ, ಮನೆಪ್ರವೇಶೋತ್ಸವ, ಅತಿದೂರಪ್ರಯಾಣ । ತನ್ನ ಮಕ್ಕಳಿಗೆ ವಿವಾಹ ಮಾಡುವಿಕೆ, ಸಮುದ್ರಸ್ನಾನ ಮಾಡುವಿಕೆ/ಮಾಡಿಸುವಿಕೆ, ಗರ್ಭಿಣಿಯ ಹಾಲನ್ನು ಕುಡಿಯುವಿಕೆ, ಇವಿಷ್ಟನ್ನೂ ಗರ್ಭಿಣಿಯಾಗಿದ್ದಾಗ ಗಂಡನು ಮಾಡಿದರೆ, ಅವನ ಆಯಸ್ಸು ಕಡಿಮೆಯಾಗುತ್ತದೆ । ಗರ್ಭಿಣೀಪತಿಯು ಸೇತುಸಮುದ್ರಸ್ನಾನವನ್ನು ಬಿಟ್ಟು, ಬೇರೇ ಸಮುದ್ರಸ್ನಾನವನ್ನು ಮಾಡಬಾರದು (ಜೀವತ್ಪಿತೃಕರಾದರೆ) ತಂದೆತಾಯಿಯರು ಬದುಕಿದ್ದರೆ ॥

ಸ್ಮೃತ್ಯಂತರೇ –

ಯದಿ ವಾ ಸ್ಯಾತ್ ದಿವಾರಂಭಃ ತೇಷು ಸಂಸಾಧಯೇನ್ನಿಶಿ ।
ರಾತ್ರೌ ಯಾಮದ್ವಯಾದರ್ವಾಕ್ ಕರ್ತುರ್ವೈ ವಪನಂ ಭವೇತ್ ।
ಅನ್ಯೇಷಾಂ ತು ಸಪಿಂಡಾನಾಂ ಶ್ವೋಭೂತೇ ವಪನಕ್ರಿಯೇತಿ ।

ಕ್ವಚಿತ್ ಪಾಠಃ।

ಜ್ಯೇಷ್ಠಸ್ಯಚಾನಪತ್ಯಸ್ಯ ಮಾತುಲಸ್ಯಾಸುತಸ್ಯ ಚ ।
ಅಪುತ್ರಸ್ಯ ಪಿತೃವ್ಯಸ್ಯ ಶ್ವಶುರಸ್ಯಾಪ್ಯಸಂತತೇಃ ।
ಭ್ರೂ ಕಕ್ಷ ಕೋಷ್ಮ ಲೋಮಾನಿ ವರ್ಜಯಿತ್ವಾ ಶಿಖಾಮಪಿ ।
ಕೇಶಾಂಸ್ತು ವಾಪಯೇತ್ಪಿತ್ರೋಃ ಮರಣೇ ಗರ್ಭವಾನಪಿ ।

ಮೃತಾವಪಿ ಕನಿಷ್ಠಾನಾಂ ಸಂಸ್ಕರ್ತುರ್ವಪನಂ ಭವೇತ್ ।
ಮೃತಾವನುಪನೀತಾನಾಂ ವಪನಂ ನ ಕದಾಚನ ॥

ಅಜೀವಪಿತೃಕಾಃ ವಯಸಾ ಸಂಬಂಧೇನ ಚ ಕನಿಷ್ಠಾಜ್ಞಾತಯಃ ದಹನಾನಂತರಂ ಕೇಶಾನ್ ವಾಪಯೇಯುಃ ॥

ಒಂದುವೇಳೆ, ತಂದೆತಾಯಿಯರ ಔರ್ಧ್ವದೈಹಿಕ ಕರ್ಮವು ಹಗಲಲ್ಲಿ ಆರಂಭವಾಗಿ ರಾತ್ರಿಯಲ್ಲಿ ದಹನಾದಿ ಕ್ರಿಯೆಗಳು ನಡೆಯುವುದಾದರೆ । ಆಗ ರಾತ್ರಿಯ ಯಾಮದ್ವಯ ಕಳೆಯುವುದರೊಳಗೆ ಕರ್ತೃವು ವಪನವನ್ನು ಮಾಡಿಸಿಕೊಳ್ಳಬಹುದು । ಆದರೆ, ತ್ರಿಪೌರುಷ ಜ್ಞಾತಿಗಳು ಕರ್ತೃವಾಗಿದ್ದರೆ ಮರುದಿನ ವಪನಕ್ರಿಯೆಯು । ಎಂದು ಕೆಲವರ ಅಭಿಪ್ರಾಯವಾಗಿದೆ । ಮಕ್ಕಳಿಲ್ಲದ ಅಣ್ಣನ, ಮಕ್ಕಳಿಲ್ಲದ ಸೋದರ ಮಾವನ । ಮಕ್ಕಳಿಲ್ಲದ ಚಿಕ್ಕಪ್ಪನ/ದೊಡ್ಡಪ್ಪನ, ಗಂಡುಮಕ್ಕಳಿಲ್ಲದ ಹೆಣ್ಣುಕೊಟ್ಟ ಮಾವನ ಇವರುಗಳ ಅಂತ್ಯಕ್ರಿಯೆಯನ್ನು ಮಾಡಬೇಕಾದರೆ । ಹುಬ್ಬು, ಕಂಕಳು, ಶಿಖೆ ಇವುಗಳನ್ನು ಬಿಟ್ಟು ಕೇವಲ ತಲೆಕೂದಲುಗಳನ್ನು ವಪನಮಾಡಿಸಿಕೊಳ್ಳ ಬಹುದು । ಗರ್ಭಿಣೀಪತಿಯು ಕರ್ತೃವು ಆಗಿದ್ದರೂ, ತನ್ನ ತಂದೆತಾಯಿಯರ ಮರಣದಲ್ಲಿ ವಪನವು ಇರುತ್ತದೆ । ತನಗಿಂತ ವಯಸ್ಸಿನಲ್ಲಿ ಚಿಕ್ಕವರು ಮೃತರಾಗಿದ್ದಾಗ, ಅವರ ಕರ್ಮವನ್ನು ಕರ್ತೃವಾಗಿ ಮಾಡಬೇಕಾದಾಗ, ವಪನವು ಇದೆ । ಸತ್ತವನಿಗೆ ಉಪನಯನವಾಗಿಲ್ಲದಿದ್ದರೆ ಆಗ ಕರ್ತೃವಿಗೆ ವಪನವು ಇಲ್ಲ ॥

ತಂದೆ ಇಲ್ಲದವರಾಗಿದ್ದು, ಮೃತನ ಸಂಬಂಧಿಕರಾಗಿ ವಯಸ್ಸಿನಲ್ಲಿ ಚಿಕ್ಕವರಾದ ಮತ್ತು ಜ್ಞಾತಿಗಳಾದವರು ದಹನವಾದ ನಂತರ ಕೇಶವಪನ ಮಾಡಿಸಿಕೊಳ್ಳಬೇಕು ॥

ತಥಾ ಕಲ್ಪಕಾರಿಕಾ –

ಕೃತ್ಸ್ನಸ್ಯ ಕೇಶಪಕ್ಷಸ್ಯ ವಿಸ್ರಸ್ಯೋದ್ಗ್ರಥನಶ್ರುತೇಃ ।
ಶಿರಸೋ ವಪನಂ ದಾಹಾದೂರ್ಧ್ವಂತದಸುಭಾವಿನಾಂ ।
ಸನ್ನಿಧಾನೇ ಸಪಿಂಡಾನಾಂ ವಪನಂ ತು ವಿಧೀಯತೇ ।
ಅಸನ್ನಿಧೌತು ಸರ್ವತ್ರ ದಾಹಕಸ್ಯ ಗುರೋರಪಿ ॥
ಅಕೃತ್ವಾಚೇತ್ತದಾನ್ಯೇಷಾಂ ಅಶೌಚಂ ಸರ್ವದಾಭವೇತ್ ।
ವಪನಂ ದಹನಾತ್ಪೂರ್ವಂ ಪಶ್ಚಾದ್ವಾಪಿ ಮೃತೇಗುರೌ ॥

ಸಂಪೂರ್ಣ ತಲೆಯ ಕೂದಲುಗಳನ್ನು ತೆಗೆಯುವ ಪಕ್ಷದಲ್ಲಿ, ಕೂದಲು ಬಿಚ್ಚಿಕೊಳ್ಳುವುದೂ ಮತ್ತು ಒಂದುಕಡೆ ಕಟ್ಟಿಕೊಳ್ಳುವುದು, ಎಂದು ಶ್ರುತಿಯಿರುವುದರಿಂದ । ಅಣ್ಣತಮ್ಮಂದಿರಿಗೆ, ತಲೆಯ ಕೂದಲಿನ ವಪನವು ದಹನವಾದ ನಂತರ ॥ ಸಪಿಂಡರಿಗೆ(ತ್ರಿಪೌರುಷ) ಆ ಸ್ಥಳದಲ್ಲಿದ್ದರೆ(ದಹನವಾದ ಜಾಗದಲ್ಲಿದ್ದರೆ) ವಪನವು । ಗುರುವಿಗೆ ಹಾಗೂ ತಂದೆಗೆ ಆ ಜಾಗದಲ್ಲಿದ್ದರೂ, ಇಲ್ಲದಿದ್ದರೂ ಸಹಾ ವಪನವು ಇದೆ ॥ ವಪನವನ್ನು ಮಾಡಿಸಿಕೊಳ್ಳದಿದ್ದರೆ ಮನುಷ್ಯರಿಗೆ(ಕರ್ತೃವಿಗೆ) ಶುದ್ಧಿಯು ಯಾವಾಗಲೂ ಇಲ್ಲವೇ ಇಲ್ಲ । ತಂದೆ ಅಥವಾ ಗುರುಗಳು ಸತ್ತರೆ, ದಹನಕ್ಕೆ ಮುಂಚೆ ಅಥವಾ ಆಮೇಲೆ ವಪನವನ್ನು ಮಾಡಿಸಿಕೊಳ್ಳಬೇಕು ॥

ನ ಕುರ್ಯಾಚ್ಚೇದ್ವೃಥಾದಹಃ ಸ್ವಯಂ ಚ ನರಕಂ ವ್ರಜೇತ್ ।
ಸನ್ನಿಧಾನೇ ಸಪಿಂಡಾನಾಂ ವಪನಂ ಸ್ಯಾತ್ ಗುರೋರ್ಮೃತೌ ॥
ಮಹಾಗುರೂಣಾಂ ಸರ್ವತ್ರ ದಾಹಕಸ್ಯ ಗುರೋರಪಿ ।
ವಾಪಯೇಯುಃ ಮೃತೇ ಜ್ಯೇಷ್ಠೇ ಕನಿಷ್ಠಾದಶಮೇಹನಿ ॥
ಜ್ಞಾತಯಃ ಸಪ್ತಮಾದರ್ವಾಕ್ ಕರ್ತೃಭಿಸ್ಸಹ ಸರ್ವದಾ ।

ವಪನಂ ನೇಷ್ಯತೇ ರಾತ್ರೌ ಶ್ವಃ ಕಾರ್ಯಾವಪನಕ್ರಿಯಾ ॥
ಮೃತಾವಪಿ ಕನಿಷ್ಠಾನಾಂ ವಪನಂ ಶ್ರುತಿಚೋದಿತಂ ।
ಮೃತಾವನುಪನೀತಾನಾಂ ಸಂಸ್ಕರ್ತುಃ ನ ಕದಾಚನ ॥
ಮಾತರಂ ಪಿತರಂ ಜ್ಯೇಷ್ಠಮಾಚಾರ್ಯಂ ಶ್ವಶುರಂ ವಿನಾ ।
ಗರ್ಭವಾನ್ ವಪನಂ ಕುರ್ಯಾತ್ ಬ್ರಹ್ಮಹತ್ಯಾಸಮಂ ಭವೇತ್ ॥

ವಪನವನ್ನು ಮಾಡಿಸಿಕೊಳ್ಳದಿದ್ದರೆ, ದಹನವು ವ್ಯರ್ಥವಾಗಿ ತಾನು ನರಕಕ್ಕೆ ಹೋಗುತ್ತಾನೆ ॥ ತಂದೆ ಅಥವಾ ಗುರುಗಳು ಸತ್ತಾಗ, ಸಪಿಂಡರಿಗೆ(ತ್ರಿಪೌರುಷ) ಆ ಜಾಗದಲ್ಲಿದ್ದರೆ ಮಾತ್ರ ವಪನವು ಉಂಟು । ಮಹಾಗುರುಗಳು ಮೃತರಾದರೆ, ಕರ್ತೃವಿಗೂ ಮತ್ತು ಗುರುವಿಗೂ ಎಲ್ಲಿದ್ದರೂ ವಪನವು ಇದೆ । ಅಣ್ಣಂದಿರು ಅಥವಾ ತನಗಿಂತ ದೊಡ್ಡವರು ಮೃತರಾದರೆ, ಸಣ್ಣವರಿಗೆ 10ನೇ ದಿನ ವಪನವು । 7 ತಲೆಮಾರು ಕಳೆದ ಜ್ಞಾತಿಗಳಿಗೆ, ಕರ್ತೃಗಳೊಡನೆಯೇ ಯಾವಾಗಲೂ ವಪನವು । ರಾತ್ರಿಯಲ್ಲಿ ವಪನವನ್ನು ಮಾಡಿಸಿಕೊಳ್ಳಬಾರದು, ಮರುದಿನ ಮಾಡಿಸಿಕೊಳ್ಳಬೇಕು । ತನಗಿಂತ ಸಣ್ಣವರು ಮೃತರಾದರೂ ವಪನವುಂಟೆಂದು ಶ್ರುತಿಯು ಹೇಳಿದೆ । ಉಪನಯನವಾಗದವರು ಸತ್ತರೆ, ಸಂಸ್ಕಾರ ಮಾಡುವವರಿಗೆ ಯಾವಾಗಲೂ ವಪನವಿಲ್ಲ । ತಾಯಿ, ತಂದೆ, ಅಣ್ಣ, ತನಗಿಂತ ದೊಡ್ಡವರಾದ ಚಿಕ್ಕಪ್ಪಂದಿರು ಮತ್ತು ಆಚಾರ್ಯ ಮತ್ತು ಹೆಣ್ಣುಕೊಟ್ಟ ಮಾವ, ಇವರನ್ನು ಬಿಟ್ಟು । ಬೇರೆಯವರು ಮೃತರಾದಾಗ ಗರ್ಭಿಣೀಪತಿಯು ವಪನಮಾಡಿಸಿಕೊಂಡರೆ, ಅದು ಬ್ರಹ್ಮಹತ್ಯೆಗೆ ಸಮವಾಗುತ್ತದೆ ॥

ಮಾತಾಮಹ ಪಿತೃವ್ಯಾಣಾಂ ಮಾತುಲಾಗ್ರಜಯೋರ್ಮೃತೌ ।
ಶ್ವಶುರಾಚಾರ್ಯಯೋರೇಷಾಂ ಪತ್ನೀನಾಂ ಚ ಪಿತೃಷ್ವಸುಃ ॥
ಮಾತೃಷ್ವಸುರ್ಭಗಿನ್ಯಾಶ್ಚ ಗರ್ಭವಾನಪಿ ವಾಪಯೇತ್ ।
ಮಾತಾಪಿತ್ರೋಶ್ಚ ತತ್ಪಿತ್ರೋರ್ಮಾತುಲೇ ಪೂರ್ವಜೇ ತಥಾ ॥

ಮೃತೇಶ್ವಶುರ ಆಚಾರ್ಯೇ ಗರ್ಭವಾನಪಿ ವಾಪಯೇತ್ ।
ಉದನ್ವದಂಭಸಿ ಸ್ನಾನಂ ವಪನಂ ಪ್ರೇತಧಾರಣಂ ॥
ಪರ್ವತಾರೋಹಣಂ ಚೈವ ನ ಕುರ್ಯಾತ್ ಗರ್ಭಿಣೀಪತಿಃ ।
ಗರ್ಭಿಣೀ ಯದಿ ಪತ್ನೀ ಚೇನ್ನಕುರ್ಯಾತ್ ನ ಉಪನಾಯನಂ ॥
ಭೋಕ್ತವ್ಯಂ ಯಾವದಾಶೌಚಂ ಸಪಿಂಡೈರ್ಬಂಧುಭಿಸ್ಸಹ ।
ಆಶೌಚಾಂತದಿನೇ ಕ್ಷೌರಂ ಗುರುಷು ಸ್ವರ್ಗತೇಷು ಚೇತಿ ॥

ತಾಯಿಯ ತಂದೆ, ಚಿಕ್ಕಪ್ಪ, ದೊಡ್ಡಪ್ಪ, ಸೋದರಮಾವ, ಅಣ್ಣ, ತಮ್ಮ । ಹೆಣ್ಣುಕೊಟ್ಟ ಮಾವ, ಆಚಾರ್ಯ, ಇವರೆಲ್ಲರ ಪತ್ನಿಯರು, ಸೋದರತ್ತೆ । ತಾಯಿಯ ಅಕ್ಕತಂಗಿಯರು, ತನ್ನ ಅಕ್ಕತಂಗಿಯರು, ಇವರುಗಳು ಮೃತರಾದಾಗ ಗರ್ಭಿಣೀಪತಿಗೂ ವಪನವುಂಟು । ತಾಯಿ, ತಂದೆ, ಇವರಿಬ್ಬರ ತಂದೆಯರು, ಸೋದರಮಾವ, ಅಣ್ಣ । ಹಾಗೆಯೇ ಹೆಣ್ಣುಕೊಟ್ಟ ಮಾವ, ಆಚಾರ್ಯ ಇವರುಗಳು ಮೃತರಾದಾಗಲೂ ಸಹಾ ಗರ್ಭಿಣೀಪತಿಗೂ ವಪನವುಂಟು । ಹರಿಯುವ ನದಿಯಲ್ಲಿ ಸ್ನಾನ, ವಪನ, ಪ್ರೇತಧಾರಣೆ(ಶಿಲಾವಾಹನೆ) । ಪರ್ವತಾರೋಹಣ ಇವುಗಳನ್ನು ಸಾಮಾನ್ಯ ನಿಯಮದಲ್ಲಿ ಗರ್ಭಿಣೀಪತಿಯು ಮಾಡಬಾರದು । ಪತ್ನಿಯು ಗರ್ಭಿಣಿಯಾಗಿದ್ದರೆ, ಮಗನಿಗೆ ಉಪನಯನವನ್ನು ಮಾಡಬಾರದು । ಸಪಿಂಡರಾದ ಬಂಧುಗಳ ಜೊತೆ ಮೃತಾಶೌಚ ಕಳೆಯುವವರೆಗೆ ಊಟ ಮಾಡಬೇಕು । ಒಂದುಪಕ್ಷ ಗುರುಗಳು ಮೃತರಾದರೆ, ಆಶೌಚದ ಕೊನೆಯ ದಿನ ವಪನವು ಇದೆ ॥

ವ್ಯಾಸಃ –

ಪುತ್ರಾಭಾವೇಥ ಪೌತ್ರೋ ವಾ ತತ್ಪುತ್ರಃ ಪುತ್ರಿಕಾಸುತಃ ।
ಕೇಶಾನಾಂ ವಪನಂ ಕೃತ್ವಾ ಪೈತೃಮೇಧಿಕಮಾಚರೇತ್ ॥

ಬಹಿರ್ಗ್ರಾಮೇಥವಾ ಗತ್ವಾ ಶ್ಮಶ್ರು ಲೋಮ ನಖಾನಿ ಚ ।
ವಾಪಯಿತ್ವಾ ಚ ಸುಸ್ನಾತ್ವಾ ಕರ್ಮಕುರ್ಯಾತ್ ಯಥಾವಿಧೀತಿ ।
ಇದಂ ವಚನದ್ವಯಂ ಆಶ್ವಲಾಯನ ವಿಷಯಂ ॥
ಏವಂ ಚ ಸಪರ್ಯಾಲೋಚನಯಾ ದೇಶಾಚಾರೇಣೈವ ವಪನಂ ಕಾರ್ಯಮ್ ॥

ಮಗನಿಲ್ಲದಿದ್ದರೆ, ಮೊಮ್ಮಗ ಅವನಿಲ್ಲದಿದ್ದರೆ ಅವನ ಮಗ ಅವನೂ ಇಲ್ಲದಿದ್ದರೆ ಮಗಳಮಗ । ತಲೆಯ ಕೂದಲನ್ನು ವಪನ(ಕ್ಷೌರ) ಮಾಡಿಸಿಕೊಂಡು ಪಿತೃಮೇಧಕರ್ಮವನ್ನು ಮಾಡಬೇಕು ॥ ಊರಿನ ಹೊರಗೆಹೋಗಿ, ಮುಖ–ದೇಹದ ಕೂದಲು–ಉಗುರು, ಇವುಗಳನ್ನು ತೆಗೆಸಿಕೊಂಡು । ಚೆನ್ನಾಗಿ ಸ್ನಾನಮಾಡಿ ಔರ್ಧ್ವದೈಹಿಕಕರ್ಮವನ್ನು ಯಥಾವಿಧಿಯಾಗಿ ಮಾಡಬೇಕು । ಈ 2 ಮಾತು ಆಶ್ವಲಾಯನರ ವಿಷಯದ್ದಾಗಿದೆ । ಹೀಗೆಯೇ ಎಲ್ಲರೀತಿಯಿಂದಲೂ ಆಲೋಚನೆಮಾಡಿ, ಆಯಾಯಾ ದೇಶಾಚಾರಗಳನ್ನು ತಿಳಿದುಕೊಂಡು ವಪನವನ್ನು ಮಾಡಿಸಿಕೊಳ್ಳಬೇಕು ॥

ತತಃ ಸ್ನಾತ್ವಾ, ಆಚಮ್ಯ । ಯಥಾಶಕ್ತಿ ದಕ್ಷಿಣಾಂ ಗೃಹೀತ್ವಾ, ಪರಿಷದೇ ದತ್ವಾ । ಪಿತೃ ಗೋತ್ರಸ್ಯ(ಗೋತ್ರಾಯಾಃ), ಶರ್ಮಣಃ(ದಾಃ), ಪ್ರೇತಸ್ಯ (ಪ್ರೇತಾಯಾಃ), ಪ್ರಥಮೇಹನಿ ವಪನಕರ್ಮಣಿ ಯಜಮಾನಸ್ಯ ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು । ಇತ್ಯನುಜ್ಞಾಪ್ಯ, ಅನುಜ್ಞಾಂ ಗೃಹೀತ್ವಾ, ವಪನಂ ಕುರ್ಯಾತ್ ॥

ನಂತರ, ಸ್ನಾನ–ಆಚಮನವನ್ನು ಮಾಡಿ । ಯಥಾಶಕ್ತಿ ದಕ್ಷಿಣೆಯನ್ನು ಬ್ರಾಹ್ಮಣರಿಗೆ ಕೊಟ್ಟು । ಮೇಲೆ ಹೇಳಿದಂತೆ ಸಂಕಲ್ಪಿಸಿ, ವಪನಕರ್ಮಕ್ಕೆ ಒಪ್ಪಿಗೆಯನ್ನು ಕೇಳಿ, ವಪನವನ್ನು ಮಾಡಿಸಿಕೊಳ್ಳಬೇಕು ॥

ತತಃ ಕರ್ತಾ ಸ್ನಾತ್ವಾ, ಆಚಮ್ಯ । ಪೂರ್ಣಪಾಣೆ ತಿಲೈರನ್ನಂ ಪಿಂಡಾರ್ಥಂ
ತಂಡುಲೈಃ ಪಚೇತ್ । ಅರ್ಘ ಪ್ರಸೃತಿ ಮುದ್ದಿಶ್ಯ ಶಾಕ ಫಲೈಸ್ಸಹ ॥
ಶಾಕಾರ್ಥಂ ಶೃಂಗಿಬೇರಂ ಚ ಪಿಂಡೇಷು ವಿನಿಯೋಜಯೇತ್ ।
ಪ್ರಥಮೇಹನಿ ಯದ್ದ್ರವ್ಯಂ ದಶಾಹಾಂತಂ ತದೇವತು ॥

ನಂತರ ಕರ್ತೃವು ಸ್ನಾನ, ಆಚಮನಗಳನ್ನು ಮಾಡಿ । ತಿಲಸಹಿತವಾದ ಅನ್ನಪಿಂಡವನ್ನು ಮಾಡುವುದು । ಆಯಯಾ ಪದಾರ್ಥಗಳಾದ ಹೆಸರು, ತರಕಾರಿ, ಗೆಡ್ಡೆಗೆಣಸು । ತರಕಾರಿಯ ಅಭಾವದಲ್ಲಿ ಇಂಗಳವೆಂಬ ಹೆಸರಿನ ಮರದ ಹಿಂಡಿ ಈ ಎಲ್ಲವನ್ನೂ ಪಿಂಡಕ್ಕಾಗಿ ವಿನಿಯೋಗಿಸಬಹುದು । ಮೊದಲದಿನ ಯಾವ ವಸ್ತುಗಳನ್ನು ಪಿಂಡಕ್ಕೆ ಬಳಸುತ್ತಾರೋ, ಅವನ್ನೇ 10 ದಿನಗಳೂ ಬಳಸಬೇಕು ॥

13. ರಾತ್ರೌ ತಿಲೋದಕ – ಪಿಂಡದಾನಾದಿ ನಿಷೇಧಃ (ಇಬ್ಬರಿಗೂ)

ತಿಲೋದಕಂ ತಥಾ ಪಿಂಡಂ ನವಶ್ರಾದ್ಧಂ ತಥೈವ ಚ ।
ರಾತ್ರೌ ನ ಕುರ್ಯಾತ್ ಸಂಧ್ಯಾಯಾಂ ಯದಿ ಕುರ್ಯಾನ್ನಿರರ್ಥಕಮ್॥

ತಿಲೋದಕವನ್ನು ಹಾಗೂ ಪಿಂಡವನ್ನೂ ಹಾಗೂ ನವಶ್ರಾದ್ಧವನ್ನೂ । ರಾತ್ರಿಯಲ್ಲಿ ಹಾಗೂ ಸಂಧ್ಯಾಕಾಲದಲ್ಲಿ ಮಾಡಬಾರದು, ಮಾಡಿದರೆ ದೋಷವಾಗುತ್ತದೆ ॥

ವ್ಯಾಸಃ –

ಜಲಂ ಪ್ರೇತಾಯ ಮಧ್ಯಾಹ್ನೇ ದದ್ಯುರ್ಯಾವದಶುದ್ಧತಾ ।
ಯಾವದಾಶೌಚಮಿತ್ಯರ್ಥಃ ॥

ಪ್ರೇತನಿಗೆ ನೀರನ್ನು(ತರ್ಪಣ) ಮಧ್ಯಾಹ್ನದಲ್ಲಿ ಕೊಡಬೇಕು । ಎಲ್ಲಿಯವರೆಗೆ ಆಶೌಚವಿರುತ್ತದೋ ಅಲ್ಲಿಯವರೆಗೆ ॥

14. ಪಿಂಡದಾನ ಕಾಲಃ (ಇಬ್ಬರಿಗೂ)

ಸಂವರ್ತಃ –

ಪೂರ್ವಾಹ್ಣಾ ವಾ ಅಪರಾಹ್ಣೇ ವಾ ತೋಯೇ ವಾऽಶೌಚಗಾಮಿಭಿಃ ।
ಸಂಸ್ಕರ್ತ್ರೈವ ಬಲಿರ್ದೇಯಸ್ಸಹಿ ಪ್ರೇತಸ್ಯ ಬಾಂಧವಃ ॥

ಪೂರ್ವಾಹ್ಣ ಅಥವಾ ಅಪರಾಹ್ಣದಲ್ಲೋ, ಆಶೌಚದಿಂದ ಕೂಡಿದವರಾದವರು । ಸಂಸ್ಕಾರ ಮಾಡುವವರೇ ಬಲಿಯನ್ನು ಕೊಡಬೇಕು, ಏಕೆಂದರೆ ಅಂತಹವನೇ ಮೃತನ ನಿಜವಾದ ಬಂಧುವು ॥

15. ದುರ್ಮೃತಸ್ಯ ನಾರಾಯಣ ಬಲಿಃ (ಇಬ್ಬರಿಗೂ)

ಯಮಃ –

ನಾರಾಯಣಬಲಿಃ ಕಾರ್ಯೋ ಲೋಕಗರ್ಹಭಯಾನ್ನರೈಃ ।
ತತಸ್ತೇಷಾಂ ಭವೇತ್ ಶೌಚಂ ನಾನ್ಯಥೇತ್ಯಬ್ರವೀದ್ಯಮಃ ॥

ಲೋಕನಿಂದೆಯ ಹೆದರಿಕೆಯಿಂದ, ಮನುಷ್ಯರು ನಾರಾಯಣಬಲಿಯನ್ನು ಮಾಡಬೇಕು । ಇದನ್ನು ಮಾಡಿದರೆ ಮಾತ್ರ ಶುದ್ಧಿಯಾಗುತ್ತದೆ ಇಲ್ಲದಿದ್ದರೆ ಇಲ್ಲ ಎಂಬುದು ಯಮನ ಅಭಿಪ್ರಾಯವು ॥

ವ್ಯಾಸಃ –

ನಾರಾಯಣಂ ಸಮುದ್ದಿಶ್ಯ ಶಿವಂ ವಾ ಯತ್ಪ್ರದೀಯತೇ ।
ತಸ್ಯ ಶುದ್ಧಿಕರಂ ಕರ್ಮ ತದ್ಭವೇನ್ನೈತದನ್ಯಥಾ ।
ಅತೋ ನಾರಾಯಣಬಲಿಃ ಪ್ರೇತಂ ಶುದ್ಧ್ಯೇತ್ ।

ಅನೇನ ದ್ವಾರೇಣೌರ್ಧ್ವದೈಹಿಕ ಶ್ರಾದ್ಧಾದಿ ಸಂಪ್ರದಾನ ಯೋಗ್ಯತ್ವಂ ಜನಯತೀತಿ ತೇಷಾಮಹ್ಯೌರ್ಧ್ವದೈಹಿಕಂ ಸರ್ವಂ ಕಾರ್ಯಂ ಏವ ।

ಯೇ ಮೃತಾಃ ಪಾಪಮಾರ್ಗೇಣ ತೇಷಾಂ ಸಂವತ್ಸರಾತ್ ಪರಂ ।
ನಾರಾಯಣಬಲಿಂ ಕೃತ್ವಾ ಕುರ್ಯಾದೂರ್ಧ್ವಕ್ರಿಯಾಂ ದ್ವಿಜ ।

ಇತಿ ವಚನಾಚ್ಚ, ಪೂರ್ವಂ ನಾರಾಯಣಬಲಿಂ ಕೃತ್ವಾ ಪಶ್ಚಾತ್ ತ್ರಿರಾತ್ರೇಣ ಪ್ರೇತಕೃತ್ಯಂ ಕುರ್ಯಾತ್ ॥

ನಾರಾಯಣನನ್ನಾಗಲೀ ಅಥವಾ ಶಿವನನ್ನಾಗಲೀ ಉದ್ದೇಶವಾಗಿಟ್ಟುಕೊಂಡು ನಾವು ಏನನ್ನು ಮಾಡುತ್ತೇವೆಯೋ ಆ ಕರ್ಮವು ಅವನನ್ನು ಶುದ್ಧಿಮಾಡುತ್ತದೆ। ಇಲ್ಲದಿದ್ದರೆ ಇಲ್ಲಾ । ಆದ್ದರಿಂದ **ನಾರಾಯಣಬಲಿ** ಎಂಬ ಕರ್ಮವು ಪ್ರೇತವನ್ನು ಶುದ್ಧಿಮಾಡುತ್ತದೆ ॥

ಹಾರಿತಶ್ಚ –

ಭಸ್ಮಾಸ್ಥೀನಿ ಗೃಹೀತ್ವಾತು ವಿಪ್ರಾಣಾಮನುಶಾಸನಾತ್ ।
ಕ್ಷೀರಪ್ರಕ್ಷಾಳನಂ ಕೃತ್ವಾ ತದಸ್ಥಿ ಪ್ರೇತವದ್ದಹೇತ್ ॥

ಭಸ್ಮ ಮತ್ತು ಅಸ್ಥಿಗಳನ್ನು ತೆಗೆದುಕೊಂಡು ಬ್ರಾಹ್ಮಣೋತ್ತಮರ ಆದೇಶದಂತೆ । ಹಾಲಿನಿಂದ ತೊಳೆದು, ಆ ಅಸ್ಥಿಗಳನ್ನು ಪ್ರೇತದಂತೆ ದಹನ ಮಾಡಬೇಕು ॥

ಅಂಗಿರಾಃ –

ನಾರಾಯಣಬಲಿಃ ಕಾರ್ಯೋ ದುರ್ಮೃತೌ ದುರ್ಮೃತಸ್ಯತು ।
ಸಂವತ್ಸರೇ ವ್ಯತೀತೇ ವಾ ತದರ್ಧೇ ಪಾದ ಏವ ವಾ ॥

ದುರ್ಮರಣ ಸಂಭವಿಸಿದಾಗ ದುರ್ಮರಣ ಹೊಂದಿದವರಿಗೆ ನಾರಾಯಣ ಬಲಿಯನ್ನು ಮಾಡಬೇಕು । ಒಂದುವೇಳೆ ಮಾಡಲು ಅಶಕ್ತನಾದರೆ ವರ್ಷಕಳೆದಮೇಲೆ ಮಾಡಬೇಕು ಅಥವಾ ಆ ವರ್ಷಾರ್ಧದಲ್ಲಿ (6 ತಿಂಗಳಲ್ಲಿ) ಅಥವಾ 3 ತಿಂಗಳಲ್ಲಿ ಮಾಡಬೇಕು ॥

ಸ್ಮೃತ್ಯಂತರೇ –

ಯಾವತ್ ಪಾಣ್ಮಾಸಮಿತ್ಯಸ್ಯ ಯಾವನ್ಮಾಸ ತ್ರಯಂಪರೇ ।
ನಾಸ್ತಿಪ್ರೇತ ಕ್ರಿಯೇತ್ಯೇಕೇ ಪ್ರಾಯಶ್ಚಿತ್ತಂ ವಿದುಃ ಪರೇ ॥

6 ತಿಂಗಳಲ್ಲಿ ನಾರಾಯಣಬಲಿಯನ್ನು ಮಾಡಿದರೆ ಅಥವಾ 3 ತಿಂಗಳಲ್ಲಿ ಮಾಡಿದರೆ । ಆ ನಾರಾಯಣಬಲಿಯನ್ನು ಮಾಡುವವರೆಗೆ ಪ್ರೇತಕಾರ್ಯ (ಸಪಿಂಡೀಕರಣ)ವನ್ನು ಮಾಡಬಾರದು,. ಏಕೆಂದರೆ ಆ ನಾರಾಯಣಬಲಿಯು ಪ್ರಾಯಶ್ಚಿತ್ತರೂಪವಾದ ಕರ್ಮವಾದ್ದರಿಂದ ॥

ಪ್ರಾಯಶ್ಚಿತ್ತಮಾಹ –

ಪ್ರಾಜಾಪತ್ಯಾದಿ ಕೃಚ್ಛ್ರಂ ಚ ತಪ್ತಕೃಚ್ಛ್ರ ತ್ರಯಂ ತಥಾ ।
ಚಾಂದ್ರಾಯಣಂ ತತಃ ಕುರ್ಯಾನ್ನಾರಾಯಣ ಬಲಿಂ ತಥಾ ॥
ಕೃತ್ವೈತತ್ ವತ್ಸರಸ್ಯಾಂತೇ ವಿದಧೀತೌರ್ಧ್ವದೈಹಿಕಂ ।
ಷಣ್ಮಾಸಾದ್ವಿಗುಣಂ ಕಾರ್ಯಂ ತ್ರಿಮಾಸಾತ್ತ್ರಿಗುಣಂ ಭವೇತ್ ।
ಚತುರ್ಗುಣಂ ತ್ರಿಪಕ್ಷೇಸ್ಯಾತ್ ಸದ್ಯಃ ಪಂಚಗುಣಂ ಭವೇತ್ ॥

3 ಪ್ರಾಜಾಪತ್ಯ ಮತ್ತು ತಪ್ತಕೃಚ್ಛ್ರಗಳನ್ನು । ಹಾಗೆಯೇ ಚಾಂದ್ರಾಯಣಾದಿ ಕೃಚ್ಛ್ರಗಳನ್ನೂ ಹಾಗೂ ನಾರಾಯಣಬಲಿಯನ್ನೂ ಪ್ರಾಯಶ್ಚಿತ್ತರೂಪವಾಗಿ ಮಾಡಬೇಕು ॥ ವರ್ಷದ ಕೊನೆಯಲ್ಲಿ ಇಷ್ಟೂ ಪ್ರಾಯಶ್ಚಿತ್ತವನ್ನು ಮಾಡಿ ನಂತರ ಔರ್ಧ್ವದೈಹಿಕ(ಸಪಿಂಡೀಕರಣ) ಕರ್ಮವನ್ನು ಮಾಡಬೇಕು । 6 ತಿಂಗಳಲ್ಲಿ ಮಾಡುವುದಾದರೆ ಪ್ರಾಯಶ್ಚಿತ್ತವನ್ನು ದ್ವಿಗುಣ ಮಾಡಬೇಕು, 3 ತಿಂಗಳಲ್ಲಿ ಮಾಡುವುದಾದಾಗ 3 ಪಟ್ಟು । ಒಂದುವರೆ ತಿಂಗಳಲ್ಲಿ ಮಾಡುವುದಿದ್ದರೆ 4 ಪಟ್ಟು, ದುರ್ಮರಣ ಕಾಲದಲ್ಲೇ ಮಾಡುವುದಾದರೆ 5 ಪಟ್ಟು ಪ್ರಾಯಶ್ಚಿತ್ತಗಳನ್ನು ಮಾಡಬೇಕು ॥

ವೃದ್ಧ ಪರಾಶರಶ್ಚ –

ತತ್ಕಾಲೇಸತಿ ಪ್ರಾಯಶ್ಚಿತ್ತಂ ಚತುರ್ಗುಣಂ ಷಣ್ಮಾಸಾಂತೇ ತ್ರಿಗುಣಂ ।
ವತ್ಸರಾಂತೇ ದ್ವಿಗುಣಂ ತ್ರಿಹಾಯನಾಂತೇ ಪ್ರೋಕ್ತಮೇವಾಚರೇತ್ ॥

ಆ ಕಾಲದಲ್ಲಿಯೇ ಮಾಡುವುದಿದ್ದರೆ 4 ಪಟ್ಟು, 6 ತಿಂಗಳಲ್ಲಿ ಮಾಡುವುದಿದ್ದರೆ 3 ಪಟ್ಟು । ವರ್ಷದ ಕೊನೆಯಲ್ಲಿ ಮಾಡುವುದಿದ್ದರೆ 2 ಪಟ್ಟು, 3 ವರ್ಷದ ನಂತರ ಮಾಡುವುದಿದ್ದರೆ 4 ಪಟ್ಟು, ಈ ರೀತಿ ಮಾಡಬೇಕು ॥

ಸುಮಂತುಃ –

ಅತ್ರ ವಿಷಯಭೇದೇನ ಕಾಲವ್ಯವಸ್ಥಾಮಾಹ । ಅಗ್ನಿ, ವಿದ್ಯುತ್, ಪಯಃ, ಪಾಶ, ಚಂಡಾಲೈರ್ಬ್ರಾಹ್ಮಣೈರ್ಹತಾಃ । ಏಕ ದ್ವಿ ತ್ರಿ ಚತುಃ ಪಂಚ ಷಡಬ್ದೇ ಶುದ್ಧಿಮಾಪ್ನುಯುಃ ॥

ಇಲ್ಲಿ ವಿಷಯ ಭೇದದಿಂದ ಕಾಲವ್ಯವಸ್ಥೆಯನ್ನು ಸುಮಂತು ಆಚಾರ್ಯರು ಹೇಳಿದ್ದಾರೆ । ಅಗ್ನಿ – ವಿದ್ಯುತ್ – ನೀರು – ಹಗ್ಗ – ಚಂಡಾಲ – ಬ್ರಾಹ್ಮಣ ಇವರಿಂದ ಮರಣಹೊಂದಿದ್ದರೆ । ಕ್ರಮವಾಗಿ, 1 – 2 – 3 – 4 – 5 – 6 ಈ ಸಂಖ್ಯೆಯಲ್ಲಿ ಷಡಬ್ದಕೃಚ್ಛ್ರಗಳನ್ನು ಮಾಡಿಕೊಳ್ಳುವುದರಿಂದ ಶುದ್ಧಿಯನ್ನು ಹೊಂದುತ್ತಾನೆ ॥

ಸಂವರ್ತಶ್ಚ –

ಯದಿ ಶಸ್ತ್ರ ವಿಷಾಂ ಬಾಧೈಃ ಕಾಮತೋ ಬ್ರಾಹ್ಮಣೈರ್ಹತಾಃ ।
ತ್ರಿಹಾಯನೇ ವ್ಯತೀತೇತು ಪ್ರಾಯಶ್ಚಿತ್ತಂ ವಿದುರ್ಬುಧಾಃ ॥

ಏತತ್ಕಾಲ ವಿಲಂಬೇನ ಶುದ್ಧಿವಿಧಾನಂ ಪೂರ್ವೋಕ್ತ ಪ್ರಾಯಶ್ಚಿತ್ತಾಕರಣ ವಿಷಯಂ । ತತ್ಕೃತೌತು ಸದ್ಯ ಏವ ॥

ಒಂದುವೇಳೆ ಶಸ್ತ್ರ, ವಿಷ, ಮುಂತಾದವುಗಳಿಂದ ಅಥವಾ ಕಾಮನಾಪೂರ್ವಕವಾಗಿ ಬ್ರಾಹ್ಮಣರಿಂದ ಮರಣಹೊಂದಿದ್ದರೆ, ದುರ್ಮೃತನಿಗೆ, ಪ್ರಾಯಶ್ಚಿತ್ತಪೂರ್ವಕವಾಗಿ ಔರ್ಧ್ವದೈಹಿಕ ಕ್ರಿಯೆಗಳನ್ನು ತಕ್ಷಣ ಮಾಡಬೇಕು । 3 ವರ್ಷ ಕಳೆದರೆ ಪ್ರಾಯಶ್ಚಿತ್ತವನ್ನು ಬಲ್ಲವರು ಹೇಳಿದ್ದಾರೆ ॥ ಇಷ್ಟುಕಾಲದವರೆಗೆ ವಿಳಂಬಮಾಡಿದ್ದರಿಂದ ಈ

ದೋಷದ ಶುದ್ಧಿಗಾಗಿ ಹಿಂದೆ ಹೇಳಿದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದೇ ಇರುವ ದೋಷದ ಪ್ರಾಯಶ್ಚಿತ್ತವನ್ನೂ ಮಾಡಿಕೊಂಡು । ತಕ್ಷಣ ಈ ದೋಷದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ॥

ತಥಾ ದಕ್ಷಃ –

ಮನುವರ್ಜಂತು ವಿಪ್ರಾಣಾಂ ಗರ್ಹಿತೇ ಮರಣೇ ಸತಿ ।
ಸದ್ಯ ಏವ ಕ್ರಿಯಾಃ ಕಾರ್ಯ ವಿಪ್ರಾಣಾಮನುಶಾಸನಾತ್ ॥

ಮನುಸ್ಮೃತಿಯನ್ನು ಬಿಟ್ಟು, ಬೇರೇ ವಿಪ್ರೋತ್ತಮರ ಆದೇಶವು ಏನೆಂದರೆ – ಬ್ರಾಹ್ಮಣರಿಗೆ ದುರ್ಮರಣವಾದರೆ ತಕ್ಷಣವೇ ಪ್ರಾಯಶ್ಚಿತ್ತಪೂರ್ವಕವಾಗಿ ಔರ್ಧ್ವದೈಹಿಕಕರ್ಮವನ್ನು ಮಾಡಬೇಕೆಂಬುದಾಗಿದೆ ॥

ಅಪರಾರ್ಕೇ ಚ –

ದುರ್ಮೃತೌ ಸದ್ಯ ಏವಸ್ಯಾತ್ ಸಂಸ್ಕಾರೋ ಹಿ ದ್ವಿಜನ್ಮನಾಮ್ ।
ಲಬ್ಧ್ವಾ ಕೃಚ್ಛ್ರಾಣಿ ವಿಪ್ರೇಭ್ಯ ಇತಿ ಧರ್ಮವಿದಾಂ ಮತಮ್ ॥

ಬ್ರಾಹ್ಮಣರಿಗೆ ದುರ್ಮರಣ ಸಂಭವಿಸಿದಾಗ, ತಕ್ಷಣವೇ ಔರ್ಧ್ವದೈಹಿಕ ಸಂಸ್ಕಾರವನ್ನು ಮಾಡಬೇಕು । ಕೃಚ್ಛ್ರಾದಿಗಳನ್ನು ಬ್ರಾಹ್ಮಣರಿಗೆ ದಾನಮಾಡಿ, ಕರ್ಮವನ್ನು ಮಾಡಬೇಕೆಂಬುದು ಧರ್ಮವಿದರ ಅಭಿಪ್ರಾಯವು ॥

16. ದೇಶ ವಿಶೇಷ ಮರಣೇ (ಇಬ್ಬರಿಗೂ)

ವಸಿಷ್ಠಃ –

ಅಕಾಮತೋ ಹತಾನಾಂ ತು ದ್ವಿಜಾತೀನಾಂ ವನೇಪಥಿ ।
ಗ್ರಾಮೇ ವಾ ನಗರೇ ವಾಪಿ ಕುಟೀರೇಷು ಗೃಹೇಷು ಚ ।
ಸಂವತ್ಸರ ವ್ಯತಿಕ್ರಾಂತೇ ಬ್ರಾಹ್ಮಣಾನಾಂ ಅನುಜ್ಞಯಾ ।
ಕೃಚ್ಛ್ರಾತಿಕೃಚ್ಛ್ರಂ ಸೌಮ್ಯಂ ಚ ಚರೇತ್ ಸಾಂತಪನಂ ತಥಾ ।
ಗೋದಾನಂ ತತ್ ವ್ರತಸ್ಯಾಂತೇ ಬ್ರಾಹ್ಮಣಾನಾಂ ಚ ಭೋಜನಮ್ ॥

ಆಕಸ್ಮಿಕವಾಗಿ ಬ್ರಾಹ್ಮಣರು ಕಾಡಿನಲ್ಲಿ ಅಥವಾ ದಾರಿಯಲ್ಲಿ । ಅಥವಾ ಹಳ್ಳಿಯಲ್ಲಿ, ನಗರದಲ್ಲಿ, ಕುಟೀರದಲ್ಲಿ, ಮನೆಯಲ್ಲಿ ಈ ಸ್ಥಳಗಳಲ್ಲಿ ಮರಣ ಹೊಂದಿದರೆ । ಆದರೆ ಸಂಸ್ಕಾರಕ್ಕಾಗಿ ಶರೀರವು ಒಂದುವರ್ಷಕಳೆದರೂ ಸಿಗದಿದ್ದಾಗ, ಬ್ರಾಹ್ಮಣರ ಅನುಜ್ಞೆಯನ್ನು ಪಡೆದು ಕೃಚ್ಛ್ರ, ಅತಿಕೃಚ್ಛ್ರ, ಸೌಮ್ಯ ಎಂಬ ಪ್ರಾಯಶ್ಚಿತ್ತಗಳನ್ನು ಹಾಗೂ ಸಾಂತಪನ(ಇಷ್ಟಿ) ಪ್ರಾಯಶ್ಚಿತ್ತಗಳನ್ನು ಮಾಡಬೇಕು । ಈ ಪ್ರಾಯಶ್ಚಿತ್ತವ್ರತದ ಕೊನೆಯಲ್ಲಿ ಗೋದಾನವನ್ನು ಹಾಗೂ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು ॥

ವಿಷ್ಣುರಪಿ –

ಮಂಟಪೇ ಗೋಪುರೇ ವಾಪಿ ಪ್ರಾಸಾದೇ ಹರ್ಮ್ಯಭಿತ್ತಿಷು ।
ಅಕಾಮತೋ ಮೃತಾನಾಂತು ದಾಪಯೇತ್ ಐಂದವದ್ವಯಮ್ ।
ಪ್ರಾಜಾಪತ್ಯಂ ಚರೇತ್ ಕೃಚ್ಛ್ರಂ ಪರಾಕೇಣ ವಿಶುದ್ಧ್ಯತಿ ।
ಸಂಪೂರ್ಣೇತು ವ್ರತಂ ಕುರ್ಯಾತ್ ಸಮಾಪ್ಯೈತೂದಕ ಕ್ರಿಯಾ ।

ನಾರಾಯಣಬಲಿಂ ಕುರ್ಯಾತ್ ಶುದ್ಧಿರೇಷಾ ಪ್ರಕೀರ್ತಿತಾ ।
ಇಹದುರ್ಮೃತೌ ಅವಶ್ಯಂ ನಿಯಮೇನ ನಾರಾಯಣಬಲಿರ್ಭವೇತ್ ॥

ಮಂಟಪದಲ್ಲಿ ಅಥವಾ ಗೋಪುರದಲ್ಲಿ, ಮಹಡಿಯಲ್ಲಿ, ದೊಡ್ಡಕಟ್ಟಡದ ಮೇಲೆ, ಗೋಡೆಗಳಲ್ಲಿ । ಈ ರೀತಿಯಲ್ಲಿ ಆಕಸ್ಮಿಕವಾಗಿ ದುರ್ಮರಣ ಹೊಂದಿದಾಗ, ಪ್ರಾಯಶ್ಚಿತ್ತವಾಗಿ 2 ಬೆಳ್ಳಿಪಾತ್ರೆಯನ್ನು ದಾನಮಾಡಬೇಕು । ಪ್ರಾಜಾಪತ್ಯ ಕೃಚ್ಛ್ರವನ್ನು ಮಾಡಿಕೊಳ್ಳಬೇಕು, ಅದರಿಂದ ಶುದ್ಧಿಯಾಗುತ್ತಾನೆ । ಪ್ರಾಯಶ್ಚಿತ್ತವ್ರತವನ್ನು ಮಾಡಿಕೊಂಡು, ನಂತರ ಔರ್ಧ್ವದೈಹಿಕ ಉದಕಕ್ರಿಯೆಗಳನ್ನು(ವಾಸೋದಕ, ತಿಲೋದಕ) ಮಾಡಬೇಕು । ಹೀಗೆ ದುರ್ಮೃತನಾದವನಿಗೆ ಅವಶ್ಯಕವಾಗಿ ನಿಯಮಕ್ರಮಗಳಿಂದ ನಾರಾಯಣಬಲಿಯನ್ನು ಮಾಡಬೇಕು, ಇದರ ಆಚರಣೆಯಿಂದ ಮಾತ್ರವೇ ಶುದ್ಧಿಯು ಉಂಟಾಗುವುದು ॥

ತಥಾ ಪುರಾಣೇ –

ಕ್ರಿಯತೇ ಪತಿತಾನಾಂ ತು ಗತೇ ಸಂವತ್ಸರೇ ಕ್ವಚಿತ್ ।
ದೇಶಧರ್ಮ ಪ್ರಮಾಣತ್ವಾತ್ ಗಯಾಮೂಲೇ ಚ ಬಂಧುಭಿಃ ।
ಮಾರ್ತಾಂಡ ಪಾದಮೂಲೇ ವಾ ಶ್ರಾದ್ಧಂ ಹರಿಸಮರ್ಪಣಮ್ ।
ಸ್ಮರಣಾದ್ಯತ್ರ ಶುದ್ಧಿಸ್ಯಾತ್ ಸುರಾಪಾನಾದಿ ಕರ್ಮಸು ।
ಸ್ವಯಂ ಮೃತಸ್ಯ ಶುದ್ಧಿಸ್ಯಾತ್ ಕುತ್ರಚಿತ್ ದೇಶಗೌರವಾತ್ ।
ಹರಿಸಮರ್ಪಣಂ ಶ್ರಾದ್ಧಂ ನಾರಾಯಣಬಲಿಃ ॥

ಪತಿತರಿಗೆ(ಮಹಾಪಾತಕಗಳನ್ನು ಮಾಡಿದವರು), ವರ್ಷಕಳೆದ ನಂತರ ಶ್ರಾದ್ಧವನ್ನು ಎಲ್ಲಾದರೂ ಮಾಡಬೇಕು । ದೇಶಧರ್ಮ ಪ್ರಮಾಣಗಳಿಂದ, ಗಯಾಕ್ಷೇತ್ರದಲ್ಲಿ ಬಂಧುಗಳೊಡಗೂಡಿ । ಅಥವಾ 14 ರುದ್ರ ಪಾದಸ್ಥಳದಲ್ಲಿ

ಹರಿಸಮರ್ಪಣಾಭಾವದಿಂದ ಕೊಡುವ ಪಿಂಡತರ್ಪಣಗಳೇ ಶ್ರಾದ್ಧವು । ಯಾವನ ಸ್ಮರಣೆಯಿಂದ ಸುರಾಪಾನಾದಿ ಪಂಚಮಹಾಪಾತಕಗಳಿಂದಲೂ ಶುದ್ಧಿಹೊಂದುತ್ತಾನೋ ಅಂತಹ ಹರಿಯನ್ನು ಸ್ಮರಿಸಬೇಕು । ಪತಿತನಾದವನಿಗೆ ಪುಣ್ಯಕ್ಷೇತ್ರಗಳಲ್ಲಿ ಮರಣಹೊಂದುವುದೇ ಶುದ್ಧಿಯು । ಕೇವಲ ಹರಿಸ್ಮರಣೆಯೇ ಶ್ರಾದ್ಧವೂ ಹಾಗೂ ನಾರಾಯಣಬಲಿಯೂ ಸಹ ॥

ಮನುಃ –

ಸರ್ವೇಷಾಮಪಿ ಲೋಕಾನಾಂ ಗುರುರ್ನಾರಾಯಣೋ ಹರಿಃ ।
ತಸ್ಯ ಸಂಪೂಜನಂ ಕಾರ್ಯಂ ಸರ್ವಪಾಪ ಹರಂ ಹಿ ತತ್ ॥
ತಮುದ್ದಿಶ್ಯ ಬಲಿಃ ಕಾರ್ಯೋ ದತ್ತೋಽಪಿ ದುರಿತಾಪಹಃ ।
ಮಂತ್ರಸಂಸ್ಕಾರಹೀನಂ ತು ಸುಗತಿಂ ಪ್ರಾಪಯಿಷ್ಯತಿ ॥

ಎಲ್ಲಾ ಲೋಕಗಳಲ್ಲಿಯೂ ನಾರಾಯಣರೂಪನಾದ ಹರಿಯೇ ಗುರುವು । ಅವನ ಆರಾಧನೆಯನ್ನು ಎಲ್ಲಾ ಪಾಪಗಳನ್ನು ಕಳೆದುಕೊಳ್ಳುವುದಕ್ಕಾಗಿ ಮಾಡಬೇಕು ॥ ಆ ಹರಿಯನ್ನು ಕುರಿತು ಬಲಿಯನ್ನು ಮತ್ತು ದಾನಾದಿಗಳನ್ನು ಮಾಡಬೇಕು, ಇದರಿಂದ ಎಲ್ಲಾ ಪಾಪಗಳನ್ನೂ ಕಳೆದುಕೊಳ್ಳುತ್ತಾನೆ । ಮಂತ್ರಹೀನ ಮತ್ತು ಸಂಸ್ಕಾರಹೀನರಾದವರನ್ನೂ ಸಹ ಉತ್ತಮಲೋಕಕ್ಕೆ ಕೊಂಡೊಯ್ಯುವ ಸಾಮರ್ಥ್ಯ ಹರಿಯ ಆರಾಧನೆಗಿದೆ ॥

ನಾರದಶ್ಚ –

ನಾರಾಯಣಬಲಿಃ ಕಾರ್ಯೋ ಲೋಕಗರ್ಹ ಭಯಾನ್ನರೈಃ ।
ತದಾ ತೇಷಾಂ ಭವೇತ್ ಶೌಚಂ ನಾನ್ಯಥೇತ್ಯಬ್ರವೀತ್ ಮನುಃ ॥

ಲೋಕದ ನಿಂದೆಗೆ ಹೆದರಿ, ಮನುಷ್ಯರು ನಾರಾಯಣಬಲಿಯನ್ನು ದುರ್ಮೃತನಿಗೆ ಮಾಡಬೇಕು । ಈ ರೀತಿ ಮಾಡುವುದರಿಂದಲೇ ದುರ್ಮೃತನಿಗೆ ಶುದ್ಧಿಯು, ಇನ್ನು ಬೇರೇ ರೀತಿಯಿಂದಲ್ಲ ಎಂದು ಮನುಋಷಿಗಳು ಹೇಳುತ್ತಾರೆ ॥

17. ಪ್ರಮಾದ ದುರ್ಮೃತಿಃ (ಇಬ್ಬರಿಗೂ)

ಭಾಗಲೇಯಃ –

ಚಂಡಾಲಾದುದಕಾತ್ಸರ್ಪಾತ್ ಬ್ರಾಹ್ಮಣಾದ್ವೈದ್ಯುತಾದಪಿ ।
ದಂಷ್ಟ್ರೇಭ್ಯಶ್ಚ ಪಶುಭ್ಯಶ್ಚ ಮರಣಂ ಪಾಪಕರ್ಮಣಾಮ್ ।
ತೇಷಾಂ ಪಾಪ ವಿಶುದ್ಧ್ಯರ್ಥಂ ಪಾಣ್ಮಾಸಂ ಕೃಚ್ಛ್ರಮಾಚರೇತ್ ॥

ಚಂಡಾಲನಿಂದ, ನೀರಿನಿಂದ, ಹಾವುಗಳಿಂದ, ಬ್ರಾಹ್ಮಣರಿಂದ, ವಿದ್ಯುತ್–ಸಿಡಿಲುಗಳಿಂದ । ಹಲ್ಲಿರುವ ಪ್ರಾಣಿಗಳಿಂದ, (ವಿಷಪ್ರಾಣಿಗಳಿಂದ) ಮತ್ತು ಎಲ್ಲಾ ರೀತಿಯ ಪ್ರಾಣಿಗಳಿಂದ ಮರಣವು, ಪಾಪಕರ್ಮವನ್ನು ಮಾಡಿದವನಿಗೆ ಉಂಟಾಗುತ್ತದೆ । ಅವರ ಪಾಪ ಪರಿಹಾರಕ್ಕಾಗಿ ಕರ್ತೃವು 6 ತಿಂಗಳು ಕೃಚ್ಛ್ರಾಚರಣೆಯನ್ನು ಮಾಡಬೇಕು ॥

ಸ್ಮೃತ್ಯಂತರೇ –

ಪ್ರಮಾದಾತ್ ವಿಷ ಶಸ್ತ್ರಾಗ್ನಿ ಭೃಗ್ವಾದಿ ನಿಹತಸ್ತುಯಃ ।
ಕೃಚ್ಛ್ರಂ ಪಾಣ್ಮಾಸಿಕೋಜ್ಞೇಯಃ ತಸ್ಯ ಪಾಪಾಪನುತ್ತಯೇ ॥

ಅಪಘಾತಗಳಿಂದ, ವಿಷಪ್ರಾಶನದಿಂದ, ಆಯುಧಗಳಿಂದ, ಅಗ್ನಿಯಿಂದ, ವಾಸಿಯಾಗದ ಖಾಯಿಲೆಯಿಂದ ನರಳಿ ಅಗ್ನಿ–ಜಲಪ್ರವೇಶ ಅಥವಾ

ವಿಷಪ್ರಾಶನ ಮಾಡಿಸತ್ತರೆ । ಆ ಪಾಪದೋಷದ ನಿವಾರಣೆಗಾಗಿ, 6 ತಿಂಗಳು ಕೃಚ್ಛ್ರಾಚರಣೆಯನ್ನು ಮಾಡಬೇಕು ॥

ಹಸ್ತಾಮಲಕೇ –

ಯಸ್ತು ಚಂಡಾಲ ಶ್ವಪಚ ಸರ್ವಪಶು ದಂಷ್ಟ್ರಿ ಭೃಗ್ವಗ್ನಿಪಾತ ಬ್ರಾಹ್ಮಣ ವಿಷಾನಶನಾಶನಿ ಮಾರ್ಗವಹ್ನಿ ಗಳೋದ್ಬಂಧನ ಜಲಸಾಹಸ ಚೋರ ರಜಸ್ವಲಾ ಶೀತ ವ್ಯಾಘ್ರ ಶಸ್ತ್ರಪಾತಾತ್ ಕ್ಷುತ್ತೃಷ್ಣಾದಿ ನಿಮಿತ್ತೈರ್ಹತಃ ಸ್ವಪುತ್ರಾದಿಕೃತ ಶತಪಂಚದಶ ಪ್ರಾಜಾಪತ್ಯ ಕೃಚ್ಛ್ರಾಚರಣಾದ್ವಾ ಚಾಂದ್ರಾಯಣಂ ಕೃಚ್ಛ್ರಾತಿಕೃಚ್ಛ್ರಾಚರಣಾದ್ವಾ ಕಾಲಶಕ್ತ್ಯಾದ್ಯಪೇಕ್ಷಯಾ ಶುದ್ಧ್ಯತಿ ॥

ಯಾರಾದರೋ – ಚಂಡಾಲ(ಬ್ರಾಹ್ಮಣಸ್ತ್ರೀಗೆ ಬೇರೆಯವನಿಂದ ಹುಟ್ಟಿದವ), ನಾಯಿ ತಿನ್ನುವವನು(ಅತಿಕೀಳು ಸಂಸ್ಕಾರದವನು), ಹಾವು, ಪ್ರಾಣಿಗಳು, ವಿಷಕ್ರೂರ ಜಂತುಗಳು, ವಾಸಿಯಾಗದ ಖಾಯಿಲೆಯಿಂದ ನರಳಿ ಅಗ್ನಿ–ಜಲಪ್ರವೇಶ ಅಥವಾ ವಿಷಪ್ರಾಶನ ಮಾಡಿಸತ್ತರೆ, ಬ್ರಾಹ್ಮಣರಿಂದ, ವಿಷದಿಂದ, ಹಸಿವಿನಿಂದ, ಸಿಡಿಲಿನಿಂದ, ದಾರಿಯಲ್ಲಿ ಬೆಂಕಿಯಿಂದ, ನೇಣು ಹಾಕಿಕೊಂಡು, ನೀರಿನಲ್ಲಿ, ಕಳ್ಳನಿಂದ, ರಜಸ್ವಲೆಯಿಂದ, ಶೀತದಿಂದ, ಹುಲಿ ಮುಂತಾದ ದುಷ್ಟಪ್ರಾಣಿಗಳಿಂದ, ಶಸ್ತ್ರಗಳಿಂದ, ಹಸಿವುಬಾಯಾರಿಕೆಯಿಂದ, ಇವಿಷ್ಟು ಕಾರಣಗಳಿಂದ ಮರಣಹೊಂದಿದರೆ, ಕರ್ತ್ಯವಾದ ತನ್ನ ಮಗ ಮುಂತಾದವರಿಂದ 115 ಪ್ರಾಜಾಪತ್ಯ ಕೃಚ್ಛ್ರಗಳಿಂದ ಅಥವಾ ಕಾಲ ಹಾಗೂ ತನ್ನ ಶಕ್ತಿಯನ್ನಪೇಕ್ಷಿಸಿ, ಮಾಡುವ ಪ್ರಾಯಶ್ಚಿತ್ತದಿಂದ ಶುದ್ಧಿಯನ್ನು ಹೊಂದುತ್ತಾನೆ ॥

ಶಂಖಃ –

ಪ್ರಮಾದಾದ್ಯೇಮೃತಾ ವಿಪ್ರಾ ವಿಷ ಶಸ್ತ್ರ ಜಲಾದಿಭಿಃ ।
ತೇಷಾಂ ಶರೀರಶುದ್ಧ್ಯರ್ಥಂ ಪ್ರಾಯಶ್ಚಿತ್ತಂ ವಿಧೀಯತೇ ॥
ಚಾಂದ್ರಾಯಣ ದ್ವಯಂ ಚಾಥ ತಪ್ತಕೃಚ್ಛ್ರ ಚತುಷ್ಟಯಂ ।
ಕಾರಯಿತ್ವಾ ವಿಧಾನೇನ ದಗ್ಧವ್ಯಾಸ್ತೇ ದ್ವಿಜಾತಿಭಿಃ ॥

ಆಕಸ್ಮಿಕವಾಗಿ, ಬ್ರಾಹ್ಮಣರಿಂದ, ವಿಷ, ಶಸ್ತ್ರ, ನೀರು ಮುಂತಾದವುಗಳಿಂದ ಮರಣಹೊಂದಿದರೆ । ಅವರ ಶರೀರಶುದ್ಧಿಗಾಗಿ ಪ್ರಾಯಶ್ಚಿತ್ತವನ್ನು ಹೇಳುತ್ತೇವೆ ॥ 2 ಚಾಂದ್ರಾಯಣ ಹಾಗೂ 4 ತಪ್ತಕೃಚ್ಛ್ರಗಳನ್ನು ಪ್ರಾಯಶ್ಚಿತ್ತವಾಗಿ ಆಚರಿಸಿ । ನಂತರ ವಿಧಿಪೂರ್ವಕವಾಗಿ ಬ್ರಾಹ್ಮಣ ಮುಂತಾದವರು ದಹನವನ್ನು ಮಾಡಬೇಕು ॥

ಹಸ್ತಾಮಲಕೇ –

ಯಸ್ತು ದ್ವಿಜಾತಿರಾತ್ಮಾನಂ ಖಡ್ಗಾದಿಭಿರ್ಹಂತಿ ಅಸೌ ಸ್ವಪುತ್ರಾದಿಭಿಃ ಕೃತ ಪ್ರಾಜಾಪತ್ಯ ಕೃಚ್ಛ್ರ ಶತತ್ರಯಾಚರಣಾಚ್ಛುದ್ಧ್ಯತಿ ॥

ಯಾವ ಬ್ರಾಹ್ಮಣನು, ಕತ್ತಿ ಮುಂತಾದವುಗಳಿಂದ ಆತ್ಮಹತ್ಯೆಯನ್ನು ಮಾಡಿಕೊಂಡರೆ ಅವನು ತನ್ನ ಮಕ್ಕಳು ಮಾಡುವ 300 ಪ್ರಾಜಾಪತ್ಯ ಕೃಚ್ಛ್ರಪ್ರಾಯಶ್ಚಿತ್ತದಿಂದ ಶುದ್ಧಿಯನ್ನು ಹೊಂದುತ್ತಾನೆ ॥

ವಸಿಷ್ಠಃ –

ವಿಷಾಗ್ನ್ಯುದ್ಬಂಧ ಶಸ್ತ್ರಾದ್ಯೈರಾತ್ಮಾನಂ ಯಸ್ತು ಘಾತಯೇತ್ ।
ತಸ್ಯ ಪಾಪವಿಶುದ್ಧ್ಯರ್ಥಂ ಪ್ರಾಜಾಪತ್ಯ ಶತತ್ರಯಮ್ ॥

ಆದಿಶಬ್ದಾತ್ ಭೃಗುಪಾತಜಲಪ್ರವೇಶಾನಶನದೀಕ್ಷಾ ವೃಕ್ಷಶೂಲಾರೋಹಣ ತಾಡನ ಜಿಹ್ವಾಚ್ಛೇದನಾನಿ ಗೃಹ್ಯಂತ ಇತ್ಯೇತತ್ ಬುದ್ಧಿಪೂರ್ವಕ ವಿಷಯಂ । ಯತ್ತು, ಜಲಾಗ್ನಿ ಶಸ್ತ್ರಪಾತಾದ್ಯೈಃ ಪ್ರಮಾದಾದ್ಯೇ ಮೃತಾದ್ವಿಜಾಃ । ಚಾಂದ್ರಾಯಣೇನ ಶುದ್ಧ್ಯಂತಿ ತಪ್ತಕೃಚ್ಛ್ರದ್ವಯೇನ ಚ । ಏತತ್ ಜ್ಞಾತಿಮಾತ್ರ ವಿಷಯಮಿತಿ ಕೇಚಿತ್ ॥

ವಿಷ, ಅಗ್ನಿ, ನೇಣು, ಆಯುಧ ಮುಂತಾದವುಗಳಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೋ । ಅವನ ಪಾಪದ ಪರಿಹಾರಕ್ಕಾಗಿ 300 ಪ್ರಾಜಾಪತ್ಯವನ್ನು ಮಾಡಿಕೊಳ್ಳಬೇಕು ॥

ಮೇಲಿನ ಶ್ಲೋಕದಲ್ಲಿರುವ ಆದಿಶಬ್ದದಿಂದ, ಪರ್ವತದಿಂದ ಬೀಳುವುದು, ನೀರಿನಲ್ಲಿ ಮುಳುಗಿ, ಉಪವಾಸ ದೀಕ್ಷೆಯಿಂದ, ಮರದ ತುದಿಯನ್ನು ಹತ್ತುವುದು, ತನ್ನನ್ನು ತಾನೇ ಹಿಂಸಿಸಿಕೊಳ್ಳುವುದು, ತನ್ನ ನಾಲಿಗೆಯನ್ನು ತಾನೇ ಕತ್ತರಿಸಿಕೊಳ್ಳುವುದು, ಇವೆಲ್ಲವೂ ಸಹಾ ಬುದ್ಧಿಪೂರ್ವಕವಾದ ಆತ್ಮಹತ್ಯೆಯ ವಿಷಯವೆಂದೇ ಗ್ರಹಿಸಬೇಕು । ಜಲ, ಅಗ್ನಿ, ಆಯುಧಗಳಿಂದ, ಪ್ರಮಾದದಿಂದ, ಯಾವ ಬ್ರಾಹ್ಮಣರು ಮರಣಹೊಂದುತ್ತಾರೋ । ಚಾಂದ್ರಾಯಣ ಮತ್ತು 2 ತಪ್ತಕೃಚ್ಛ್ರಗಳಿಂದ ಶುದ್ಧಿಹೊಂದುತ್ತಾರೆ । ಈ ಶುದ್ಧಿಹೊಂದುವಿಕೆಯು, ಮೇಲೆತಿಳಿಸಿರುವ ಮಾರ್ಗಗಳಲ್ಲಿ ಪ್ರಜ್ಞಾಪೂರ್ವಕವಾಗಿ(ಉದ್ದೇಶಪೂರ್ವಕ) ಮರಣಹೊಂದುವವರಿಗೆ ಮಾತ್ರ ಸಂಬಂಧಿಸಿದ ವಿಷಯ ಎಂದು ಕೆಲವರು ಹೇಳುತ್ತಾರೆ ॥

18. ಕೃಚ್ಛ್ರ ಪ್ರತಿನಿಧಿಃ (ಇಬ್ಬರಿಗೂ)

ಯಜ್ಞಪಾರ್ಶ್ವಃ –

ಪ್ರಾಜಾಪತ್ಯೇ ಭವೇದ್ಧೇನುಃ ತಿಸ್ರಸ್ಸಾಂತಪನೇ ತಥಾ ।
ಮಹಾಸಾಂತಪನೇ ತಿಸ್ರೋ ದ್ವೇ ತು ಸಾಂತಪನೇ ತಥಾ ।
ಪಂಚಚಾಂದ್ರಾಯಣೇ ಪ್ರೋಕ್ತಾಶ್ಚತಸ್ರೋ ವಾಪಿ ಧೇನವಃ ।
ಪರಾಕೇ ಯೇ ತು ನಿರ್ದಿಷ್ಟೇ ತಪ್ತಕೃಚ್ಛ್ರೇ ತಥೈವ ಚ ।
ದ್ವೇತು ಕೃಚ್ಛ್ರೇ ಸಮಾಖ್ಯಾತೇ ಧೇನುಪಂಚ ಪುರಾಣಿಕಾಃ ।
ನಿಷ್ಕಂ ಸಾಂತಪನೇ ತಿಸ್ರೋ ದ್ವೇ ತು ಸಾಂತಪನೇಥವಾ ।
ಪಂಚಚಾಂದ್ರಾಯಣೇ ಪ್ರೋಕ್ತಾಶ್ಚತಸ್ರೋ ವಾಪಿ ಧೇನವಃ ॥

1 ಪ್ರಾಜಾಪತ್ಯ ಪ್ರಾಯಶ್ಚಿತ್ತದಲ್ಲಿ – 1 ಗೋದಾನ, 1 ಸಾಂತಪನ ಪ್ರಾಯಶ್ಚಿತ್ತದಲ್ಲಿ – 3 ಗೋದಾನ । 1 ಮಹಾಸಾಂತಪನದಲ್ಲಿ – 3 ಗೋದಾನಮಾಡುವ 2 ಸಾಂತಪನ ಪ್ರಾಯಶ್ಚಿತ್ತ । ಚಾಂದ್ರಾಯಣದಲ್ಲಿ – 5 ಅಥವಾ 4 ಗೋದಾನ । ಪರಾಕಕೃಚ್ಛ್ರದಲ್ಲಿ – ಆ ವಿಧಿಯಲ್ಲಿ ಹೇಳಿದಷ್ಟು ಗೋದಾನ, ತಪ್ತಕೃಚ್ಛ್ರದಲ್ಲಿಯೂ ಹಾಗೆಯೇ । ಕೃಚ್ಛ್ರದಲ್ಲಿ – 2 ಗೋದಾನ ಅಥವಾ 5 ಎಂದು ಕೆಲವರು ಹೇಳುತ್ತಾರೆ । ಸಾಂತಪನ ಕೃಚ್ಛ್ರದಲ್ಲಿ – 3 ನಿಷ್ಕ (36 ಗ್ರಾಂ) ಪ್ರಮಾಣದ ಅಥವಾ 2 ನಿಷ್ಕ (24 ಗ್ರಾಂ) ಪ್ರಮಾಣದ ಚಿನ್ನದ ದಾನ । ಚಾಂದ್ರಾಯಣದಲ್ಲಿ 5 ಅಥವಾ 4 ಗೋದಾನ ॥

19. ನಿಷ್ಠ (ಚಿನ್ನ) ವಿಷಯೇ (ಇಬ್ಬರಿಗೂ)

ನಾರದಃ ಚತುರ್ವಿಂಶತಿಮತೇ –

ಪ್ರಾಜಾಪತ್ಯೇ ತು ಗಾಂ ಏಕಾಂ ದ್ವಯಸ್ಸಾಂತಪನೇ ತಥಾ ।
ಪರಾಕ ತಪ್ತ ಕೃಚ್ಛ್ರೇಷು ತಿಸ್ರಸ್ತಿಸ್ರಸ್ತು ಗಾಸ್ಸ್ಮೃತಾಃ ।
ಅಷ್ಟೌಚಾಂದ್ರಾಯಣೇ ದೇಯ ದಕ್ಷಿಣಾಸ್ತು ವಿಶೇಷತಃ ।
ಯಥಾ ವಿಭವಸಾರೇಣ ದಾನಂ ದದ್ಯಾತ್ ವಿಶುದ್ಧಯೇ ।

ಇತಿ ಕೃಚ್ಛ್ರ ಪ್ರತ್ಯಾಮ್ನಾಯಾಃ । ಅಷ್ಟೌಚಾಂದ್ರಾಯಣೇ ದೇಯ ಇತಿ ಧನಿಕ ವಿಷಯಮ್ ॥

ಪ್ರಾಜಾಪತ್ಯ ಕೃಚ್ಛ್ರದಲ್ಲಿ 1 ಗೋದಾನ, ಸಾಂತಪನಕೃಚ್ಛ್ರದಲ್ಲಿ 2 । ಪರಾಕ ಮತ್ತು ತಪ್ತಕೃಚ್ಛ್ರಗಳಲ್ಲಿ 3–3 ಗೋದಾನ । ಚಾಂದ್ರಾಯಣಕೃಚ್ಛ್ರದಲ್ಲಿ 8 ಗೋದಾನ ಹಾಗೂ ವಿಶೇಷವಾದ ದಕ್ಷಿಣೆಯನ್ನೂ ಕೊಡಬೇಕು । ತನ್ನ ಸಂಪತ್ತಿಗೆ ಅನುರೂಪವಾಗಿ, ಪಾಪ ಪರಿಹಾರಕ್ಕಾಗಿ ದಾನವನ್ನು ಮಾಡಬೇಕು । ಹೀಗೆ ಕೃಚ್ಛ್ರಕ್ಕೆ ಪ್ರತ್ಯಾಮ್ನಾಯವನ್ನು ಹೇಳಿದೆ । ಚಾಂದ್ರಾಯಣದಲ್ಲಿ 8 ಗೋದಾನ ಎಂಬುದು ಧನಿಕರ ವಿಷಯವಾಗಿದೆ ॥

ಅಶಕ್ತೌತ್ತು –

ಚಾಂದ್ರಾಯಣ ಪರಾಕ ಕೃಚ್ಛ್ರಾತಿಕೃಚ್ಛ್ರಾಸ್ತು ಪ್ರಾಜಾಪತ್ಯ ತ್ರಯಾತ್ಮಕಾಃ ।
ಅತ್ರಾಪವಾದೋಽಪಿ ಪುರಾಣೇ ದರ್ಶಿತಃ ॥

ಪ್ರಮಾದಾದಿ ನಿಶ್ಯಂಕಮಕಸ್ಮಾ ಮೃತ್ಯುನಾಮೃತಃ ।
ಶೃಂಗಿ ದಂಷ್ಟ್ರಿ ನಖಿ ವ್ಯಾಳ ವಿಷ ವಿದ್ಯುಜ್ಜಲಾದಿಭಿಃ ।
ಚಂಡಾಲೈರಥವಾ ಚೋರೈರ್ನಿಹತೋ ಯತ್ರ ಕುತ್ರಚಿತ್ ।
ತಸ್ಯ ದಾಹಾದಿಕಂ ಕಾರ್ಯಂ ಯಸ್ಮಾನ್ನ ಪತಿತಸ್ತು ಸಃ ॥

ಚಾಂದ್ರಾಯಣ, ಪರಾಕಕೃಚ್ಛ್ರ, ಅತಿಕೃಚ್ಛ್ರ, ಇವೆಲ್ಲವೂ 3 ಪ್ರಾಜಾಪತ್ಯ ಕೃಚ್ಛ್ರಗಳಿಂದ ಕೂಡಿದ್ದಾಗಿದೆ । ಇದಕ್ಕೆ ಅಪವಾದವನ್ನೂ ಪುರಾಣದಲ್ಲಿ ತೋರಿಸಿದೆ ॥

ಪ್ರಮಾದದಿಂದ, ನಿಶ್ಚಯವಾಗಿ (ಸಂದೇಹವಿಲ್ಲದೇ), ಆಕಸ್ಮಿಕವಾಗಿ ಅಪಮೃತ್ಯುವನ್ನು ಹೊಂದಿದರೆ । ಕೋಡು, ಹಲ್ಲು, ಉಗುರಿರುವ ಪ್ರಾಣಿಗಳು, ಹಾವು, ವಿಷ, ವಿದ್ಯುತ್–ಸಿಡಿಲು, ನೀರು ಮುಂತಾದವುಗಳಿಂದ । ಚಂಡಾಲ, ಕಳ್ಳ ಇವರಿಂದ ಎಲ್ಲಿಯಾದರೂ ಮರಣಹೊಂದಿದರೆ । ಅವನ ದಾಹಾದಿ ಕಾರ್ಯಗಳನ್ನು ಮಾಡಬೇಕು, ಸತ್ತವನು ಪತಿತನಲ್ಲದಿದ್ದರೆ ॥

ಅಂಗಿರಾಃ –

ಯದಿ ಕಶ್ಚಿತ್ ಪ್ರಮಾದೇನ ಮ್ರಿಯತೇsಗ್ನ್ಯುದಕಾದಿಭಿಃ ।
ತಸ್ಯಾಶೌಚಂ ವಿಧಾತೌವ್ಯಂ ದದ್ಯಾತ್ಪಿಂಡೋದಕ ಕ್ರಿಯಾಮ್ ।
ತತ್ರಾಪಿ ಪ್ರಾಯಶ್ಚಿತ್ತೋತ್ತರ ಕಾಲಮೇವ ॥

ಒಂದುವೇಳೆ ಯಾವನಾದರೊಬ್ಬ, ಪ್ರಮಾದದಿಂದ ಅಗ್ನಿ, ನೀರು ಮುಂತಾದವು ಗಳಿಂದ ಮರಣಹೊಂದಿದರೆ । ಅವನಿಗೆ ಆಶೌಚವನ್ನು ಆಚರಿಸಬೇಕು ಹಾಗೂ ಪಿಂಡೋದಕಕ್ರಿಯೆಗಳನ್ನು ಮಾಡಬೇಕು । ಈ ಹಿಂದೆ ಹೇಳಿದ ಎಲ್ಲವೂ ಪ್ರಾಯಶ್ಚಿತ್ತಮಾಡಿಕೊಂಡ ಮೇಲೆಯೇ ಎಂದು ತಿಳಿಯಬೇಕು ॥

ಗೌತಮಃ –

ಯಸ್ಯ ತು ಪ್ರಾಣಾಂತಿಕಂ ಪ್ರಾಯಶ್ಚಿತ್ತಂ ಸಮೃತ ಶುದ್ಧ್ಯೇತ್ ।
ಸರ್ವಾಣ್ಯೇವೋದಕಾದೀನಿ ಪ್ರೇತಕೃತ್ಯಾನಿ ಕುರ್ಯುಃ ॥

ಯಾವನಿಗೆ ಮರಣಾಂತ ಪ್ರಾಯಶ್ಚಿತ್ತವೋ ಅವನಿಗೆ ಮರಣದಿಂದಲೇ ಶುದ್ಧಿ । ಅವನಿಗೆ ಉದಕಕ್ರಿಯೆ ಮತ್ತು ಪ್ರೇತಕೃತ್ಯಾದಿ ಎಲ್ಲವನ್ನೂ ಮಾಡಬೇಕು ॥

ಶಾತಾತಪಃ –

ವೃಥಾಶೌಚ ಕ್ರಿಯಾಲುಪ್ತಃ ಪ್ರತ್ಯಾಖ್ಯಾಯಭಿಷಕ್ ಕ್ರಿಯಾಃ ।
ಆತ್ಮಾನಂ ಘಾತಯೇದ್ಯಸ್ತು ಭೃಗ್ವಗ್ನ್ಯನಶನಾಂಬುಭಿಃ ।
ತಸ್ಯ ತ್ರಿರಾತ್ರಮಾಶೌಚಂ ದ್ವಿತೀಯೇಹ್ನ್ಯಸ್ಥಿ ಸಂಚಯಃ ।
ತೃತೀಯೇತೂದಕಂ(ಪಿಂಡಂ) ದತ್ವಾ ಚತುರ್ಥೇ ಶ್ರಾದ್ಧಮಾಚರೇತ್ ॥

ಆಶೌಚ ಮುಂತಾದ ಕ್ರಿಯೆಗಳು ತನ್ನ ಅನಾರೋಗ್ಯದಿಂದ ಲೋಪವಾಗಲ್ಪಟ್ಟು ಆ ಕಾರಣದಿಂದ ತನ್ನ ರೋಗಕ್ಕೆ ಚಿಕಿತ್ಸೆಯನ್ನು ತಿರಸ್ಕರಿಸಿ । ಯಾವುದೇ ವ್ಯಕ್ತಿಯು ವಾಸಿಯಾಗದ ಖಾಯಿಲೆಯಿಂದ ಬಳಲಿ, ಅಗ್ನಿಪ್ರವೇಶ – ಉಪವಾಸ – ನೀರಿಗೆ ಹಾರಿ, ಈ ಮೂಲಕ ಸಾಯಿಸಿಕೊಳ್ಳುತ್ತಾರೋ । ಅಂತಹವರ ಸಾವಿನಲ್ಲಿ ಸಂಬಂಧಿಸಿದವರಿಗೆ ಕೇವಲ 3 ದಿನ ಆಶೌಚವು, 2 ನೇ ದಿನ ಅಸ್ಥಿಸಂಚಯನವು । 3 ನೇ ದಿನ ಉದಕಕ್ರಿಯೆ–ಪಿಂಡದಾನ, 4 ನೇ ದಿನ ಶ್ರಾದ್ಧವನ್ನು(ಏಕೋದ್ದಿಷ್ಟ+ ಸಪಿಂಡೀಕರಣ) ಮಾಡಬೇಕು ॥

20. ಅಗ್ನಿ ಪ್ರದಾತಾರಃ (ಇಬ್ಬರಿಗೂ)

ಪುತ್ರಃ ಪೌತ್ರಶ್ಚ ತಜ್ಜಶ್ಚ ಪುತ್ರಿಕಾಪುತ್ರ ಏವ ಚ ।
ಪತ್ನೀ ಭ್ರಾತಾ ಚ ತಜ್ಜಶ್ಚ ಪಿತಾ ಮಾತಾ ಸ್ನುಷಾ ತಥಾ ॥
ಭಗಿನೀ ಭಾಗಿನೇಯಶ್ಚ ಸಪಿಂಡೋ ಧನಹಾರ್ಯಪಿ ।
ಪೂರ್ವಪೂರ್ವ ವಿನಾಶೇಸ್ಯಾತ್ ಉತ್ತರೋತ್ತರ ಪಿಂಡದಾಃ ॥
ಔರಸಃ ಕ್ಷೇತ್ರಜಶ್ಚೈವ ಪುತ್ರಿಕಾಪುತ್ರ ಏವ ಚ ।
ಪುತ್ರೋ ವಾ ಭ್ರಾತೃಪುತ್ರೋ ವಾ ಸಪಿಂಡೀಕರಣಂ ಚರೇತ್ ॥
ಏಷಾಮಭಾವೇ ಪತ್ನೀ ಚ ಧನಹಾರ್ಯಪಿ ವಾ ಭವೇತ್ ।
ಪುತ್ರಾಭಾವೇ ತು ಪತ್ನೀಸ್ಯಾತ್ ಪತ್ನ್ಯಭಾವೇ ತು ಸೋದರಃ ॥

ಮಗ, ಮೊಮ್ಮಗ, ಅವರಿಗೆ ಹುಟ್ಟಿದವರು, ಮಗಳಮಗ, ಪತ್ನೀ, ಅಣ್ಣತಮ್ಮಂದಿರು, ಅವರಮಕ್ಕಳು, ತಂದೆ, ತಾಯಿ, ಹಾಗೂ ಸೊಸೆ । ತಂಗಿ, ಅಕ್ಕ, ಅಕ್ಕತಂಗಿಯರ ಮಕ್ಕಳು, ಜ್ಞಾತಿಗಳು, ಅವನಿಂದ (ಮೃತನಿಂದ) ಉಪಕಾರಕ್ಕೊಳಗಾದವರು । ಇವರಲ್ಲಿ ಕ್ರಮವಾಗಿ ಮೊದಲುಮೊದಲು ಇಲ್ಲದಿದ್ದಾಗ, ಮುಂದುಮುಂದಿನವರು ಈ ಕರ್ಮಕ್ಕೆ ಅಧಿಕಾರಿಗಳು । ಮಗಳ ಮಗ, ಮಗ, ಅಣ್ಣನ ಮಗ ಇವರುಗಳು ಸಪಿಂಡೀಕರಣಕ್ಕೆ ಅಧಿಕಾರಿಗಳು । ಇವರುಗಳು ಯಾರೂ ಇಲ್ಲದಿದ್ದರೆ ಪತ್ನೀ ಹಾಗೂ ಉಪಕಾರಕ್ಕೊಳಗಾದವರು ಸಪಿಂಡೀಕರಣಕ್ಕೆ ಅಧಿಕಾರಿಗಳು। ಮಗನಿಲ್ಲದಿದ್ದರೆ ಪತ್ನಿಯು ಅಧಿಕಾರಿಯು, ಪತ್ನಿಯೂ ಇಲ್ಲದಿದ್ದರೆ ಅಣ್ಣತಮ್ಮಂದಿರು ಸಪಿಂಡೀಕರಣಕ್ಕೆ ಅಧಿಕಾರಿಗಳು ॥

21. ಅನುಪನೀತಸ್ಯ ಪಿತೃ ಸಂಸ್ಕಾರಾಧಿಕಾರಃ (ಇಬ್ಬರಿಗೂ)

ಮನುಃ –

ನಹ್ಯಾಸ್ಮಿನ್ವಿದ್ಯತೇ ಕರ್ಮ ಕಿಂಚಿದಾ ಮೌಂಜಿಬಂಧನಾತ್ ।
ನಾಭಿವ್ಯಾಹರೇದ್ಬ್ರಹ್ಮ ಸ್ವಧಾ ನಿನಯನಾದೃತೇ ॥

ಉಪನಯನವಾಗುವವರೆಗೆ, ಮಂತ್ರಸಹಿತವಾದ ಶ್ರುತ್ಯುಕ್ತಕರ್ಮದಲ್ಲಿ ಅಧಿಕಾರವಿರುವುದಿಲ್ಲ । ಅನುಪನೀತನಾದವನಿಗೆ ವೇದಮಂತ್ರವನ್ನು ಹೇಳಿಸ ಬಾರದು । ಆದರೆ (ಸ್ವಧಾನಿನಯನವನ್ನು)ಪಿತೃಕರ್ಮದಲ್ಲಿ ಮಂತ್ರವನ್ನು ಹೇಳಿಸಿ ಮಾಡಿಸಬಹುದು ॥

ಸುಮಂತುಃ –

ಮಂತ್ರಾನನುಪನೀತೋಪಿ ಪ್ರೇತಕೃತ್ಯೇ ವದೇತ್ಪಿತುಃ ॥

ಅನುಪನೀತನಾದರೂ ಸಹ, ತಂದೆಯ ಔರ್ಧ್ವದೈಹಿಕ ಕರ್ಮದಲ್ಲಿ ಮಂತ್ರವನ್ನು ಹೇಳಲೇಬೇಕು ॥

ವಿಶ್ವಾಮಿತ್ರಃ –

ಪಿತ್ರೋರನುಪನೀತೋಪಿ ವಿದಧ್ಯಾನ್ಮಂತ್ರವತ್ಸುತಃ ॥

ತಂದೆತಾಯಿಗಳ ಮರಣಕಾರ್ಯದಲ್ಲಿ ಕರ್ತೃವು ಅನುಪನೀತನಾದರೂ ಸಹ ಮಂತ್ರಸಹಿತವಾಗಿ ಈ ಕರ್ಮವನ್ನು ಮಾಡಬೇಕು ॥

ಸುಮಂತುಃ –

ಶ್ರಾದ್ಧಂ ಕುರ್ಯಾದವಶ್ಯಂ ತು ಪ್ರಮೀತ ಪಿತೃಕೋಽಪಿ ಯಃ ।
ವ್ರತಸ್ಥೋವಾವ್ರತಸ್ಥೋ ವಾಪ್ಯೇಕ ಏವ ಭವೇದ್ಯದಿತಿ ॥
ಕೃತಚೂಡಸ್ತು ಕುರ್ವೀತ ಪಿಂಡದಾನೋದಕ ಕ್ರಿಯಾಃ ।
ಸ್ವಧಾಕಾರಂ ಪ್ರಯುಂಜೀತ ವೇದೋಚ್ಚಾರಂ ನ ಕಾರಯೇತ್ ॥
ಸ್ವಧಾಕಾರಂ ಪ್ರೇತಕರ್ಮ ದಾಹಾದಿ ಸಪಿಂಡಾಂತಮ್ ॥

ಅನುಪನೀತನಾದರೂ ಸಹ ತಂದೆತಾಯಿಗಳ ಶ್ರಾದ್ಧವನ್ನು ಅವಶ್ಯವಾಗಿ ಮಂತ್ರಪೂರ್ವಕವಾಗಿ ಮಾಡಬೇಕು । ಉಪನೀತನಾದರೂ, ಅನುಪನೀತನಾದರೂ ಚೂಡಾಕರ್ಮವಾಗಿದ್ದರೆ ತಂದೆತಾಯಿಗಳ ಪಿಂಡದಾನ, ಉದಕಕ್ರಿಯೆ(ತರ್ಪಣ)ಗಳನ್ನು ಮಾಡಬೇಕು । ಅನುಪನೀತನಾದರೆ, ಸ್ವಧಾಕಾರವನ್ನು ಮಾತ್ರ ಹೇಳಿಸಬೇಕು ವೇದೋಚ್ಚಾರಣೆಯಿಲ್ಲ । ಸ್ವಧಾಕಾರವನ್ನು, ಪ್ರೇತಕರ್ಮವನ್ನು, ದಾಹಾದಿಗಳನ್ನು ಪಿಂಡಾಂತವಾಗಿ ಮಾಡಿಸಬೇಕು ॥

22. ಅಥ ನಾರಾಯಣಬಲಿಃ (ಇಚ್ಛರಿಗೂ)

ದುರ್ಮೃತಸ್ಯ ಪುರುಷಸ್ಯ ಸಂಸ್ಕಾರಾತ್ ಪೂರ್ವಂ ವತ್ಸರಾಂತೇ ಷಾಣ್ಮಾಸೇ ತ್ರಿಮಾಸೇ ವಾ ತ್ರಿಪಕ್ಷೇ ವಾ ಸದ್ಯೋ ವಾ ಯಥೋಕ್ತ ಪ್ರಾಯಶ್ಚಿತ್ತಂ ಕೃತ್ವಾ, ನಾರಾಯಣಬಲಿಂ ಕೃತ್ವಾ, ಮಂತ್ರ ಸಂಸ್ಕಾರಂ ಕುರ್ಯಾತ್ ॥

ದುರ್ಮರಣ ಹೊಂದಿದವರಿಗೆ, ಸಂಸ್ಕಾರ ಮಾಡುವುದಕ್ಕಿಂತ ಮುಂಚೆ ಅಥವಾ 1 ವರ್ಷದಲ್ಲಿ ಅಥವಾ 6 ತಿಂಗಳಲ್ಲಿ ಅಥವಾ 3 ತಿಂಗಳಲ್ಲಿ, ಅಥವಾ 3 ಪಕ್ಷಗಳಲ್ಲಿ ಅಥವಾ ಆ ಕಾಲದಲ್ಲಿಯೇ(ಮೃತಕಾಲದಲ್ಲೇ), ಯಥೋಕ್ತವಾದ

ಪ್ರಾಯಶ್ಚಿತ್ತವನ್ನು ಮಾಡಿ, ನಂತರ ನಾರಾಯಣಬಲಿಯನ್ನು ಮಾಡಿ, ನಂತರ ಮಂತ್ರಪೂರ್ವಕವಾಗಿ ಸಂಸ್ಕಾರವನ್ನು ಮಾಡಬೇಕು ॥

ನಾರಾಯಣಬಲಿ ಪ್ರಯೋಗಕ್ರಮಃ –

ಏಕಾದಶ್ಯಾಂ ಶ್ರವಣನಕ್ಷತ್ರೇ ಅಶ್ವಿನ್ಯಾದಿ ಪುಣ್ಯನಕ್ಷತ್ರೇಷು, ಯಸ್ಮಿನ್ ಕಸ್ಮಿನ್ ವಾ ದಿನೇ ಕರ್ತಾ ಸ್ನಾತ್ವಾಚಮ್ಯ, ಕೃತ ಪ್ರಾಣಾಯಾಮೋ ದೇಶಕಾಲೌ ಸಂಕೀರ್ತ್ಯ । ಪಿತುರ್ಗೋತ್ರಸ್ಯ, ಶರ್ಮಣಃ, ಪ್ರೇತಸ್ಯ ಚಂಡಾಲಾದ್ಯೈಃ ಹತಸ್ಯ ದುರ್ಮೃತಸ್ಯ ದುರ್ಮೃತಿ ಜನಿತ ಪಿಶಾಚತ್ವ ನಿವೃತ್ತಿದ್ವಾರಾ ಪ್ರೇತಸಂಸ್ಕಾರ ಯೋಗ್ಯತಾ ಸಿದ್ಧ್ಯರ್ಥಂ, ನಾರಾಯಣಬಲಿಂ ಕರಿಷ್ಯೇ ಇತಿ ಸಂಕಲ್ಪ್ಯ ॥

ಏಕಾದಶೀ, ಶ್ರವಣನಕ್ಷತ್ರ ಅಥವಾ ಅಶ್ವಿನೀ ಮುಂತಾದ ಪುಣ್ಯನಕ್ಷತ್ರಗಳಲ್ಲಿ ಯಾವುದಾದರೊಂದು ದಿನ, ಕರ್ತೃವು ಸ್ನಾನಾಚಮನಗಳನ್ನು ಮಾಡಿ, ಪ್ರಾಣಾಯಾಮ ಮಾಡಿ, ಮೇಲೆಹೇಳಿದಂತೆ, ದೋಷಯುಕ್ತ ರೀತಿಯಲ್ಲಿ (ದುರ್ಮೃತನಿಗೆ) ಸತ್ತಿದ್ದರ ಪಾಪ ಪರಿಹಾರಕ್ಕಾಗಿ ಹಾಗೂ ದಹನಕ್ಕೆ ಯೋಗ್ಯತೆಯ ಸಂಪಾದನೆಗಾಗಿ, ನಾರಾಯಣಬಲಿಯನ್ನು ಮಾಡುತ್ತೇನೆಂದು ಸಂಕಲ್ಪಿಸಿ ॥

ಶ್ರೋತ್ರಿಯಾಗಾರಾತ್ ಅಗ್ನಿಮಾಹೃತ್ಯ, ಯತ್ರಕ್ವಚಾಗ್ನಿಮಿತಿ ವಿಧಿನಾಗ್ನಿಂ ಪ್ರತಿಷ್ಠಾಪ್ಯ । ವ್ರೀಹೀನ್ನಿರೂಪ್ಯಾವಹತ್ಯ ಶ್ರಪಯಿತ್ವಾ ಅಭಿಘಾರ್ಯ । ಪ್ರಾಚೀನಮುದೀಚೀನಂ ವೋದ್ವಾಸ್ಯ ಪ್ರತಿಷ್ಠಿತಂ ಅಭಿಘಾರ್ಯಾಗ್ನೇಃ ಉಪಸಮಾಧಾನಾದಿ ಆಜ್ಯಭಾಗಾಂತೇsಗ್ನಯೇ ಸ್ವಾಹೇತಗ್ನಿಮುಖಾಹುತಿಂ ಹುತ್ವಾ । ಸಹಸ್ರಶೀರ್ಷಾ ಪುರುಷಃ....., ಇತಿ ಸೂಕ್ತೇನ ಪ್ರತ್ಯೃಚ

ಷೋಡಶ ಪಲಾಶಸಮಿಧೋ ಹುತ್ವಾ । ಪ್ರತ್ಯೃಚಂ ಷೋಡಶ ಚರ್ವಾದ್ಯಾಹುತೀರ್ಹುತ್ವಾ ಪ್ರತ್ಯೃಚಂ ಷೋಡಶಾಜ್ಯಾಹುತೀರ್ಹುತ್ವಾ ತತೋ ಜಯಾದಿ ಪ್ರತಿಪದ್ಯತೇ, ಪರಿಷೇಚನಾಂತಂ ಕೃತ್ವಾ । ಪುನಃ ಪುರುಷಸೂಕ್ತಂ ಜಪಿತ್ವಾ । ಓಂ ನಾರಾಯಣಾಯೇತಿ ಮಂತ್ರಮುಚ್ಚಾರ್ಯ । ಚರುಶೇಷೇಣ ಅಗ್ನಿಸಮೀಪೇ ದರ್ಭೇಷು ಬಲಿಂ ದತ್ವಾ, ಕೇಶವಾದೀನ್ ಪ್ರೇತಂ ಚ ಉದ್ದಿಶ್ಯ ಬ್ರಾಹ್ಮಣಾನ್ ಭೋಜಯೇತ್ ॥

ಶ್ರೋತ್ರಿಯಬ್ರಾಹ್ಮಣರ ಮನೆಯಿಂದ ಅಗ್ನಿಯನ್ನು ತಂದು, **'ಯತ್ರಕ್ವಚ' (ತತ್ಕಾಲದಲ್ಲಿ ಅಗ್ನಿಪ್ರತಿಷ್ಠೆ ಮಾಡುವ ವಿಧಾನದಿಂದ)** ಎಂಬ ವಿಧಾನದಂತೆ ಅಗ್ನಿಯನ್ನು ಪ್ರತಿಷ್ಠಾಪಿಸಿ । ಭತ್ತವನ್ನು ಕುಟ್ಟಿ, ಸಿಪ್ಪೆಯನ್ನು ಬಿಡಿಸಿ, ಅದನ್ನು ಈ ಅಗ್ನಿಯಲ್ಲಿ ಬೇಯಿಸಿ, ಅದಕ್ಕೆ ತುಪ್ಪವನ್ನು ಹಾಕಿ । ಪೂರ್ವಕ್ಕೋ ಉತ್ತರಕ್ಕೋ ತಳ್ಳಿ, ಪುನಃ ತುಪ್ಪವನ್ನು ಹಾಕಿ, ಆಜ್ಯಭಾಗಾಂತವಾಗಿ ಪ್ರಯೋಗಮಾಡಿ, ಮುಖಾಹುತಿಯನ್ನೂ ಕೊಟ್ಟು । ನಂತರ ಪುರುಷಸೂಕ್ತದಿಂದ ಒಂದೊಂದು ಋಕ್ಕಿಗೆ ಒಂದರಂತೆ 16 ಹೋಮಗಳನ್ನು ಮುತ್ತುಗದ(ಪಾಲಾಶ) ಕಡ್ಡಿಗಳಿಂದ ಅಥವಾ ಚರುವಿನಿಂದ ಮಾಡಿ ನಂತರ ಆಜ್ಯದಿಂದಲೂ ಇದೇ ಹೋಮಗಳನ್ನು ಇದೇ ಮಂತ್ರಗಳಿಂದ ಮಾಡಿ ನಂತರ ಜಯಾದಿಯಿಂದ ಪರಿಷೇಚನಾಂತದವರೆಗೆ ಪ್ರಯೋಗಮಾಡುವುದು । ನಂತರ ಪುನಃ ಪುರುಷಸೂಕ್ತವನ್ನು ಜಪಿಸಿ । **'ಓಂ ನಮೋ ನಾರಾಯಣಾಯ'** ಎಂಬ ಮಂತ್ರದಿಂದ । ಉಳಿದ ಚರುವಿನಿಂದ ಅಗ್ನಿಯಬಳಿ ದರ್ಭೆಯಮೇಲೆ ಬಲಿಯನ್ನು ಹಾಕಿ । ಕೇಶವಾದಿ 12 ಹೆಸರುಗಳಿಂದ ಮೃತನನ್ನುದ್ದೇಶಿಸಿ 12 ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು ॥

ತತಃ ಕರ್ತಾ ಪ್ರಾಣಾನಾಯಮ್ಯ, ...ಪಿತುರ್ಗೋತ್ರಸ್ಯ, ...ಶರ್ಮಣಃ, ಪ್ರೇತಸ್ಯ ಚಂಡಾಲಾದ್ಯೈರ್ಹತಸ್ಯ, ದುರ್ಮೃತಸ್ಯ, ದುರ್ಮರಣ ಜನಿತ ಪಿಶಾಚತ್ವ ನಿವೃತ್ತಿದ್ವಾರಾ ಪ್ರೇತಸಂಸ್ಕಾರ ಯೋಗ್ಯತಾ ಸಿದ್ಧ್ಯರ್ಥಂ

ಕೇಶವಾದೀನ್, ಕೃಷ್ಣೇ ಸಂಕರ್ಷಣಾದಿ ಪಿತರಂ ಗೋತ್ರಂ ಶರ್ಮಾಣಂ ಪ್ರೇತಂ ಚ ಉದ್ದಿಶ್ಯ ಏಕೋದ್ದಿಷ್ಟ ವಿಧಾನೇನ ಅನ್ನದ್ರವ್ಯೇಣ ಶ್ರಾದ್ಧಂ ಕರಿಷ್ಯೇ ಇತಿ ಸಂಕಲ್ಪ್ಯ ॥

ನಂತರ ಕರ್ತೃವು ಪ್ರಾಣಾಯಾಮಮಾಡಿ, ಮೇಲೆತಿಳಿಸಿದಂತೆ ಸಂಕಲ್ಪಿಸಬೇಕು ॥

ಪ್ರಾಚೀನಾವೀತಿ ಪ್ರೇತಾರ್ಥಂ, ಅನ್ಯತ್ರೋಪವೀತೀ ಕುರ್ಯಾತ್ । ಸರ್ವತ್ರ ಕೇಶವಾಯ ನಮಃ, ನಾರಾಯಣಾಯ ನಮಃ .....ಇತ್ಯೇವಂ ಪ್ರಕಾರೇಣ ಕುರ್ಯಾತ್ । ಬ್ರಾಹ್ಮಣ ನಿಮಂತ್ರಣಾದಿಕಂ ಕುರ್ಯಾತ್ । ಕೇಶವಸ್ಯಾಹವನೀಯಾರ್ಥೇ ಕ್ಷಣಃ ಕರ್ತವ್ಯಃ, ನಾರಾಯಣಸ್ಯೇತ್ಯಾದಿ । ಪಿತುಃ, ...ಗೋತ್ರಸ್ಯ, ...ಶರ್ಮಣಃ, ಪ್ರೇತಸ್ಯ ಏಕೋದ್ದಿಷ್ಟ ಶ್ರಾದ್ಧೇ ಕ್ಷಣಃ ಕರ್ತವ್ಯ ಇತಿ ಕೇಶವಾದ್ಯರ್ಥಂ ದ್ವಾದಶ ಬ್ರಾಹ್ಮಣಾನ್, ಪ್ರೇತಾರ್ಥಂ ಏಕಂ ಚ ನಿಮಂತ್ರ್ಯ । ಗೋಮಯೇನ ಮಂಡಲದ್ವಯಂ ಕೃತ್ವಾ । ಪಾದಪ್ರಕ್ಷಾಳನಂ ಕೃತ್ವಾ, ಬ್ರಾಹ್ಮಣಾನ್ ಪ್ರಾಙ್ಮುಖಾನುಪವೇಶ್ಯ । ಪ್ರೇತಾರ್ಥಂ ಉದಙ್ಮುಖಂ ಉಪವೇಶ್ಯ । ಭವದನುಜ್ಞಯಾ ಪ್ರಕ್ರಾಂತಂ ಶ್ರಾದ್ಧಕರ್ಮ ಕರಿಷ್ಯೇ, ಇತಿ ಸಂಕಲ್ಪ್ಯ । ಅಪಹತಾ – ಇತ್ಯಾದಿ ಭೋಜನಪಾತ್ರ ನಿಧಾನಾಂತಂ ಕೃತ್ವಾ ॥

ನಂತರ ಪ್ರಾಚೀನಾವೀತಿಯಾಗಿ ಪ್ರೇತಕರ್ಮಗಳನ್ನು ಮಾಡಬೇಕು, ಉಳಿದ ಕಡೆಗಳಲ್ಲಿ ಉಪವೀತಿಯಾಗಿ ಮಾಡಬೇಕು । ಎಲ್ಲ ಕಡೆಗಳಲ್ಲಿಯೂ ಕೇಶವಾಯ ನಮಃ.....ಮುಂತಾದ ಪ್ರಕಾರಗಳಿಂದ ಕರ್ಮವನ್ನು ಮಾಡಬೇಕು । ಬ್ರಾಹ್ಮಣ ನಿಮಂತ್ರಣ ಮುಂತಾದವುಗಳನ್ನು ಮಾಡಬೇಕು । ಕೇಶವಸ್ಯ ಆಹವನೀಯಾರ್ಥೇ ಕ್ಷಣಃ ಕರ್ತವ್ಯಃ.....ಮುಂತಾದ ಕರ್ಮಗಳನ್ನು ಮಾಡಬೇಕು । ನಂತರ

ಮೇಲೆ ಹೇಳಿದಂತೆ ಕೇಶವಾದಿ ದ್ವಾದಶದೇವತೆಗಳಿಗೆ 12 ಬ್ರಾಹ್ಮಣರನ್ನು ಹಾಗೂ ಮೃತನಾದ ಪ್ರೇತನಿಗೆ ಒಬ್ಬಬ್ರಾಹ್ಮಣನನ್ನು ನಿಮಂತ್ರಿಸಬೇಕು । ಗೋಮಯದಿಂದ ಮಂಡಲದ್ವಯವನ್ನು ಮಾಡಿ, ನಿಮಂತ್ರಿತ ಬ್ರಾಹ್ಮಣರ ಪಾದಗಳನ್ನು ತೊಳೆದು, ಅವರನ್ನು ಪೂರ್ವಾಭಿಮುಖವಾಗಿ ಕೂರಿಸಿ । ಪ್ರೇತನಿಗಾಗಿ ನಿಮಂತ್ರಿಸಿದ ಬ್ರಾಹ್ಮಣನನ್ನು ಉತ್ತರಾಭಿಮುಖವಾಗಿ ಕೂರಿಸಿ । ಮೇಲೆ ಹೇಳಿದಂತೆ ಸಂಕಲ್ಪಿಸಿ । ಅಪಹತಾ....., ಮುಂತಾದ ಭೋಜನಪಾತ್ರೆಯ ನಿಧಾನಾಂತದವರೆಗೆ ಕರ್ಮವನ್ನು ಮಾಡಬೇಕು ॥

ಪಕ್ವಾನ್ನಾತ್ಪಾತ್ರದ್ವಯೇನೋದ್ಧೃತ್ಯ ಏಕಪಾತ್ರಸ್ಥಂ ಅನ್ನಮಾದಾಯ ಭವದನುಜ್ಞಯಾಗ್ನೌಕರಣಂ ಕರಿಷ್ಯೇ ಇತಿ ಸಂಕಲ್ಪ್ಯ । ಅನುಜ್ಞಾಪ್ಯ, ಕುರುಷ್ವೇತಿ ತೈರನುಜ್ಞಾತಃ ಲೌಕಿಕಾಗ್ನಿಮುಪಸಮಾಧಾಯ ಪ್ರಾಗುದಗಗ್ರೈಃ ದರ್ಭೈಃ ಪರಿಸ್ತೀರ್ಯ ಪ್ರದಕ್ಷಿಣಂ ತೂಷ್ಣೀಂ ಸಮಂತಂ ಪರಿಷಿಚ್ಯ । ಮೇಕ್ಷಣೇನಾದಾಯ । ಕೇಶವಾಯ ಸ್ವಾಹೇತ್ಯಾದಿ ದ್ವಾದಶಾಹುತೀರ್ಹುತ್ವಾ । ಉತ್ತರಂ ಪರಿಷಿಚ್ಯ । ಪಾತ್ರಾಂತರಸ್ಥಮನ್ನಂ ಆದಾಯ । ಪ್ರೇತಾಹುತಿಂ ಹೋಷ್ಯಾಮೀತ್ಯುಕ್ತ್ವಾ । ದಕ್ಷಿಣತಃ ಅಂಗಾರಾನ್ ನಿರೂಹ್ಯ । ಪ್ರೇತಾಯ ಅಮುಷ್ಮೈ ಯಮಾಯ ಚ ಸ್ವಾಹೇತಿ ಹುತ್ವಾ। ಹುತಶೇಷಂ ತತ್ತತ್ಪಾತ್ರೇಷು ನಿಧಾಯ । ಅನ್ನಪರಿವೇಷಣಾದಿ ಬ್ರಾಹ್ಮಣಭೋಜನಾಂತಂ ಕೃತ್ವಾ ॥

ಬೇಯಿಸಿದ ಪಾತ್ರೆಯಿಂದ ಎರಡು ಪಾತ್ರೆಗಳಿಗೆ ಅನ್ನವನ್ನು ತುಂಬಿಸಿಕೊಂಡು, ಒಂದರಲ್ಲಿರುವ ಅನ್ನವನ್ನು ತೆಗೆದುಕೊಂಡು, ಮೇಲೆಹೇಳಿದಂತೆ ಸಂಕಲ್ಪಿಸಿ । ಬ್ರಾಹ್ಮಣರ ಒಪ್ಪಿಗೆಯನ್ನು ಪಡೆದು, ಲೌಕಿಕಾಗ್ನಿಯನ್ನು ಪ್ರತಿಷ್ಠಾಪಿಸಿ, ಪೂರ್ವ ಮತ್ತು ಉತ್ತರಕ್ಕೆ ದರ್ಭೆಗಳಿಂದ ಪರಿಸ್ತರಣಹಾಕಿ, ಅಮಂತ್ರಕವಾಗಿ ಪ್ರದಕ್ಷಿಣೆಯಾಗಿ ಪರಿಷೇಚನ ಮಾಡಿ । ಮೇಕ್ಷಣೆ(ಸೌಟು) ಯಿಂದ ಅನ್ನವನ್ನು ತೆಗೆದುಕೊಂಡು ।

ಕೇಶವಾಯಸ್ವಾಹಾ..., ಮುಂತಾದ 12 ಆಹುತಿಗಳನ್ನು ಅಗ್ನಿಯಲ್ಲಿ ಕೊಟ್ಟು । ಮೊದಲಿನಂತೆ ಉತ್ತರಪರಿಷೇಚನವನ್ನು ಮಾಡಿ । ನಂತರ ಇನ್ನೊಂದು ಪಾತ್ರೆಯಲ್ಲಿರುವ ಅನ್ನವನ್ನು ತೆಗೆದುಕೊಂಡು । ಮೇಲೆಹೇಳಿದಂತೆ ಸಂಕಲ್ಪಿಸಿ । ದಕ್ಷಿಣದಿಕ್ಕಿಗೆ ಅಂಗಾರಗಳನ್ನು(ಕೆಂಡ) ಹೊರತೆಗೆದುಕೊಂಡು । ಅದರಲ್ಲಿ ಮೇಲೆ ಹೇಳಿರುವಂತೆ ಪ್ರೇತನನ್ನು ಉದ್ದೇಶಿಸಿ ಹೋಮಮಾಡಿ । ಉಳಿದ ಅನ್ನವನ್ನು ಆಯಾಯಾ ಪಾತ್ರೆಗಳಿಗೆ ಹಾಕಿ । ಅನ್ನವನ್ನು ಬ್ರಾಹ್ಮಣರಿಗೆ ಬಡಿಸುವುದೇ ಮುಂತಾದ ಭೋಜನಾಂತದವರೆಗಿನ ಕರ್ಮಗಳನ್ನು ಮಾಡಿ ॥

ಹುತಶೇಷಂ ಭುಕ್ತಶೇಷಂ ಚ ಮಧ್ವಾಜ್ಯ ತಿಲಮಿಶ್ರಣಂ ಕೃತ್ವಾ । ತ್ರಯೋದಶ ಪಿಂಡಾನ್ ಕೃತ್ವಾ । ಪ್ರಾಗಗ್ರಾನ್ ದರ್ಭಾನ್ ಆಸ್ತೀರ್ಯ । ತೇಷು 'ಕೇಶವಾಯನಮಃ' ಇತ್ಯಾದಿಭಿಃ ದಶಪಿಂಡಾನ್ ದತ್ವಾ । ದಕ್ಷಿಣಾಗ್ರೇಷು ದರ್ಭೇಷು ಪಿತ್ರೇ, ...ಗೋತ್ರಾಯ, ...ಶರ್ಮಣೇ ಪ್ರೇತಾಯ ಏಷಪಿಂಡಂ ಉಪತಿಷ್ಠತು ಇತಿ ಪಿಂಡಂದತ್ವಾ । ತಸ್ಯೋಪರಿ ತಿಲೋದಕಂ ದತ್ವಾ । ದೇಶಕಾಲೌ ಸಂಕೀರ್ತ್ಯ । ಕೇಶವಾದೀನ್ ಪ್ರೇತಂ ಚ ಉದ್ದಿಶ್ಯ । ಮಯಾಕೃತೇನ ನಾರಾಯಣಬಲಿ ಕರ್ಮಣಾ ಪಿತುರ್ಗೋತ್ರಸ್ಯ, ...ಶರ್ಮಣಃ, ಪ್ರೇತಸ್ಯ ಚಂಡಾಲಾದ್ಯೈರ್ಹತಸ್ಯ ದುರ್ಮೃತಸ್ಯ ದುರ್ಮರಣಜನಿತ ಪಿಶಾಚತ್ವ ನಿವೃತ್ತಿದ್ವಾರಾ ಪ್ರೇತಸಂಸ್ಕಾರ ಯೋಗ್ಯತಾ ಸಿದ್ಧಿರಸ್ತ್ವಿತಿ ಭವಂತೋಬ್ರುವಂತು ಇತಿ ಬ್ರೂಯಾತ್ । ಪಿಂಡಾನಪ್ಸು ಪ್ರಕ್ಷಿಪೇತ್ ॥

ಹೋಮಮಾಡಿ ಉಳಿದ ಹಾಗೂ ಬ್ರಾಹ್ಮಣರು ಭೋಜನಮಾಡಿ ಉಳಿದ ಅನ್ನವನ್ನು ಜೇನುತುಪ್ಪ ಹಾಗೂ ತುಪ್ಪ ಹಾಗೂ ಕಪ್ಪುಎಳ್ಳು ಇವುಗಳಿಗೆ (ಬೆರೆಸಿ)ಮಿಶ್ರಣಮಾಡಿ । ಆ ಮಿಶ್ರಣದಿಂದ 13 ಪಿಂಡಗಳನ್ನು ಮಾಡಿ ।

ನೆಲದಮೇಲೆ ಪೂರ್ವ ಮತ್ತು ಉತ್ತರಾಗ್ರವಾಗಿ ದರ್ಭೆಗಳನ್ನು ಹರಡಿ । ಅವುಗಳಮೇಲೆ ಕೇಶವಾಯನಮಃ.....ಮುಂತಾದ 10 ಪಿಂಡಗಳನ್ನಿಟ್ಟು । ನಂತರ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ, ಅದರಮೇಲೆ ಮೇಲೆಹೇಳಿದಂತೆ ಹೇಳಿ, ಮೃತನಿಗೆ ಪಿಂಡವನ್ನು ಕೊಟ್ಟು । ಅದರಮೇಲೆ ತಿಲೋದಕವನ್ನು ಬಿಟ್ಟು । ನಂತರ ಸಂಕಲ್ಪಿಸಿ । ಕೇಶವಾದಿ..... ಮತ್ತು ಪ್ರೇತನನ್ನು ಉದ್ದೇಶಿಸಿ । ಮೇಲೆ ಹೇಳಿದಂತೆ ಯೋಗ್ಯತೆಯನ್ನು ಪಡೆಯಲು ಬ್ರಾಹ್ಮಣರ ಅನುಜ್ಞೆಯನ್ನು ತೆಗೆದುಕೊಂಡು । ಪಿಂಡಗಳನ್ನು ನೀರಿನಲ್ಲಿ ಬಿಡಬೇಕು ॥

23. ಬೋಧಾಯನೋಕ್ತ ನಾರಾಯಣಬಲಿಃ (ಇಬ್ಬರಿಗೂ)

ವಿಷ್ಣುಬೋಧಾಯನ ಮತೇನ ಲಿಖ್ಯತೇ –

ಅಥ ದುರ್ಮೃತಾನಾಂ ನಾರಾಯಣಬಲಿಃ । ಶುಚೌದೇಶೇ ಕಾಲೇ ಶುಕ್ಲ ಏಕಾದಶ್ಯಾಂ ಪ್ರಾತಃ ವಿಷ್ಣುಂ ವೈವಸ್ವತಂ ಯಮಂ ಚ ಯಥಾಕ್ರಮೇಣಾಭ್ಯರ್ಚ್ಯ । ತದಗ್ರೇ ತಿಲಮಿಶ್ರಾನ್ ಮಧು ಘೃತ ಪ್ಲುತಾನ್ ದಶಪಿಂಡಾನ್ ವಿಷ್ಣುರೂಪಂ ಪ್ರೇತಂ ಧ್ಯಾಯನ್ ...ಗೋತ್ರೇ, ...ಶರ್ಮಣೇ ಪಿಂಡ ಇತಿ ದಕ್ಷಿಣಾಗ್ರೇಷು ದರ್ಭೇಷು ದಕ್ಷಿಣಾಮುಖಃ ಪ್ರಾಚೀನಾವೀತಿ ಪರಾಚೀನ ಪಾಣಿರ್ದತ್ವಾ, ಪಿಂಡಾನ್ ಗಂಧಾದಿಭಿರಭ್ಯರ್ಚ್ಯ ಪುಣ್ಯಜಲೇ ಕ್ಷಿಪೇತ್ ॥

ನಂತರ ದುರ್ಮರಣ ಹೊಂದಿದವರಿಗೆ ನಾರಾಯಣಬಲಿಯನ್ನು ವಿಷ್ಣು ಬೋಧಾಯನಮತಕ್ಕನುಸಾರವಾಗಿ ನಾವು ಹೇಳುತ್ತೇವೆ । ಶುದ್ಧವಾದ

ದೇಶಕಾಲಗಳಲ್ಲಿ, ಶುಕ್ಲಪಕ್ಷದ ಏಕಾದಶಿಯಲ್ಲಿ ಬೆಳಿಗ್ಗೆ, ವಿಷ್ಣು – ವೈವಸ್ವತ ಮತ್ತು ಯಮ ದೇವತೆಗಳಿಗೆ ಯಥಾಕ್ರಮವಾಗಿ ಪೂಜಿಸಿ । ಅವುಗಳಮುಂದೆ, ಎಳ್ಳಿನಿಂದ ಕೂಡಿದ ಮತ್ತು ಜೇನುತುಪ್ಪ ಹಾಗೂ ತುಪ್ಪದಿಂದ ಕೂಡಿದ 10 ಪಿಂಡಗಳನ್ನು ವಿಷ್ಣುರೂಪನಾದ ಮೃತನನ್ನು(ಪ್ರೇತ) ಧ್ಯಾನಮಾಡುತ್ತಾ, ಅವನ ಗೋತ್ರ ಮತ್ತು ಹೆಸರನ್ನು ಹೇಳಿ, ಈ ಮೇಲೆ ಹೇಳಿದಂತೆ ಪಿಂಡಗಳನ್ನು ದಕ್ಷಿಣಾಗ್ರ ದರ್ಭೆಗಳಲ್ಲಿ, ದಕ್ಷಿಣಾಭಿಮುಖನಾಗಿ, ಪ್ರಾಚೀನಾವೀತಿಯಲ್ಲಿ ಪಿತೃತೀರ್ಥದಿಂದ ಕೊಟ್ಟು, ನಂತರ ಗಂಧಾದಿಗಳಿಂದ ಅದಕ್ಕೆ ಪೂಜಿಸಿ ಆಮೇಲೆ ಪುಣ್ಯತೀರ್ಥಗಳಲ್ಲಿ ಅವುಗಳನ್ನು ಬಿಡಬೇಕು(ಎಸೆಯಬೇಕು) ॥

ಅಥ ರಾತ್ರೌ ಪಂಚಸಪ್ತ ವಾಪಿ ವಾಯುಗ್ಮಾನ್ ಬ್ರಾಹ್ಮಣಾನ್ ನಿಮಂತ್ರಯೇತ್ । ಉಪೋಷಿತೋ ರಾತ್ರೌ ಜಾಗರಣಂ ಕೃತ್ವಾ । ಶ್ವೋಭೂತೇ ಮಧ್ಯಾಹ್ನೇ ವಿಷ್ಣ್ವಾದೀನ್ ದೇವತಾನ್ ಅಭ್ಯರ್ಚ್ಯ । ಪ್ರೇತಮುದ್ದಿಶ್ಯ ಬ್ರಾಹ್ಮಣಾನ್ ಏಕೋದ್ದಿಷ್ಟ ವಿಧಿನಾ ಭೋಜಯಿತ್ವಾ । ತೃಪ್ತೇಷು ಬ್ರಾಹ್ಮಣೇಷು ಬ್ರಾಹ್ಮಣಸಮೀಪೇ ಏಕೋದ್ದಿಷ್ಟವಿಧಿನಾಂಭೋ ನಿನಯನಾಂತಂ ತೂಷ್ಣೀಂ ಕೃತ್ವಾ । ವಿಷ್ಣವೇ ಬ್ರಹ್ಮಣೇ ಶಿವಾಯ ಸಾಮಗಾಯ ಚ । ಚತುರಃ ಪಿಂಡಾನ್ ದತ್ವಾ ನಾಮ ಗೋತ್ರ ಸಹಿತಂ ಪ್ರೇತಂ ಸಂಸ್ಮೃತ್ಯ ವಿಷ್ಣೋರ್ನಾಮ ಚ ಸಂಕೀರ್ತ್ಯ ಪಂಚಮಂ ಪಿಂಡಂ ದದ್ಯಾತ್ ॥

ನಂತರ ಆ ರಾತ್ರಿಯಲ್ಲಿ, 5 ಅಥವಾ 7 ಅಥವಾ ಬೆಸಸಂಖ್ಯೆಯ ಬ್ರಾಹ್ಮಣರನ್ನು ನಿಮಂತ್ರಣಕ್ಕೆ ಕರೆಯಬೇಕು । ರಾತ್ರಿಯಲ್ಲಿ ಉಪವಾಸವಿದ್ದು, ಜಾಗರಣೆಮಾಡಿ । ಮರುದಿನ ಮಧ್ಯಾಹ್ನದಲ್ಲಿ, ಮೇಲೆ ಹೇಳಿದ ವಿಷ್ಣು ಮುಂತಾದ ದೇವತೆಗಳಿಗೆ ಪೂಜಿಸಿ । ಮೃತನನ್ನು ಉದ್ದೇಶಿಸಿ, ಆ ಬ್ರಾಹ್ಮಣರಿಗೆ ಏಕೋದ್ದಿಷ್ಟವಿಧಾನದಿಂದ ಭೋಜನ ಮಾಡಿಸಿ । ಬ್ರಾಹ್ಮಣರು ತೃಪ್ತರಾದಮೇಲೆ ಆ ಬ್ರಾಹ್ಮಣರ ಸಮೀಪದಲ್ಲಿ

ಏಕೋದ್ದಿಷ್ಟ ವಿಧಾನದಿಂದ ಅಂಭೋನಿನಯನಾಂತದವರೆಗೆ(ಕೈಗೆ ನೀರು ಕೊಡುವ....., ಕ್ರಿಯೆಯವರೆಗೆ) ಅಮಂತ್ರಕವಾಗಿ ಮಾಡಿ । ವಿಷ್ಣುವಿಗೆ, ಬ್ರಹ್ಮನಿಗೆ, ಶಿವನಿಗೆ, ಸಾಮಗನಿಗೆ । 4 ಪಿಂಡಗಳನ್ನು ಕೊಟ್ಟು, ಹೆಸರು, ಗೋತ್ರ ಸಹಿತವಾಗಿ ಮೃತನನ್ನು ಸ್ಮರಿಸಿ, ವಿಷ್ಣುವಿನ ಹೆಸರನ್ನು ಹೇಳಿ, 5 ನೇ ಪಿಂಡವನ್ನು ಕೊಡಬೇಕು ॥

ಅಥಾಚಾರ್ತಾ ಬ್ರಾಹ್ಮಣಾನ್ ದಕ್ಷಿಣಾಭಿಃ ತೋಷಯಿತ್ವಾ । ತನ್ಮಧ್ಯೇ ಚೈಕಂ ಗುಣವಂತಂ ವಸ್ತ್ರಾಭರಣ ಗೋ ಹಿರಣ್ಯೈಃ ಪ್ರೇತಬುದ್ಧ್ಯಾ ತೋಷಯೇತ್ । ಅಥ ತೈಃ ಪವಿತ್ರಪಾಣಿಭಿಃ ವಿಪ್ರೈಃ ಪ್ರೇತಾಯ ತಿಲಸಹಿತಂ ಉದಕುಂಭಂ ದಾಪಯಿತ್ವಾ, ಸ್ವಯಂ ಚ ದತ್ವಾ । ಅನೇನ ನಾರಾಯಣಬಲಿ ಕರ್ಮಣಾ ವಿಷ್ಣುರಮುಂ ದೇವದತ್ತಮಪಾಪಕಂ ಕರೋತ್ವಿತಿ ವಾಚಯಿತ್ವಾ । ತಾನ್ ವಿಪ್ರಾನ್ ದಕ್ಷಿಣಾಭಿಃ ಸಾರ್ಧಂ ವಿಸೃಜ್ಯ, ಸ್ನಾತ್ವಾ । ಸ್ವಜನೈಃ ಸರ್ವಂ ಭುಂಜೀತ । ಇತಿ ನಾರಾಯಣಬಲಿಃ ॥

ನಂತರ, ಆರ್ತರಾದ(ಬಡವರಾದ) ಶ್ರೋತ್ರಿಯ ಬ್ರಾಹ್ಮಣರನ್ನು ದಕ್ಷಿಣೆಗಳಿಂದ ಸಂತೋಷಗೊಳಿಸಿ । ಅವರ ಮಧ್ಯೇ ಅತ್ಯಂತ ಗುಣವಂತನಾದ, ಶಾಸ್ತ್ರಜ್ಞನಾದ ಬ್ರಾಹ್ಮಣನಿಗೆ ವಸ್ತ್ರ, ಆಭರಣ, ಹಸು, ಚಿನ್ನ ಇವುಗಳನ್ನು ಮೃತನಿಗಾಗಿ ಕೊಟ್ಟು । ಅವನನ್ನು ಸಂತೋಷಗೊಳಿಸಬೇಕು । ನಂತರ ಪವಿತ್ರಪಾಣಿಗಳಾದ, ನಿಮಂತ್ರಿತ ಆ ಬ್ರಾಹ್ಮಣರಿಂದ ಮೃತನಿಗಾಗಿ ಎಳ್ಳು ಸಹಿತವಾದ ನೀರಿನಪಾತ್ರೆಯನ್ನು ಬೇರೆ ಬ್ರಾಹ್ಮಣರಿಗೆ ದಾನವಾಗಿ ಕೊಡಿಸಿ, ಕರ್ತೃವಾದ ತಾನೂ ಕೊಟ್ಟು । ಈ ನಾರಾಯಣಬಲಿ ಕರ್ಮದಿಂದ ವಿಷ್ಣುವು, ಮೃತನಾದ ಈ ವ್ಯಕ್ತಿಯನ್ನು ಪಾಪಗಳಿಂದ ರಕ್ಷಿಸಲಿ, ಎಂದು ಅವರಿಂದ(ಬ್ರಾಹ್ಮಣರಿಂದ) ಹೇಳಿಸಿ । ಆ ಬ್ರಾಹ್ಮಣರನ್ನು ದಕ್ಷಿಣಾದಿಗಳೊಡನೆ ಕಳಿಸಿ, ತಾನು ಸ್ನಾನಮಾಡಿ । ತನ್ನ ಬಂಧುಗಳ ಜೊತೆ ಉಳಿದ ಅನ್ನವನ್ನು(ಅಡುಗೆ) ಊಟಮಾಡಬೇಕು । ಇದು ನಾರಾಯಣಬಲಿಯು ॥

24. ಸರ್ಪಹತಸ್ಯ ನಾಗಬಲಿ ಪ್ರಕಾರಃ (ಇಬ್ಬರಿಗೂ)

ಸರ್ಪಹತಸ್ಯ ದಾರುಮಯಂ ಮೃಣ್ಮಯಂ ವಾ ನಾಗಂ ಪಂಚಫಣಂ ಕೃತ್ವಾ । ಸಂವತ್ಸರಾದವರ್ವಾಕ್ ಭಾದ್ರಪದಶುಕ್ಲ ಪಂಚಮ್ಯಾಂ ಅನ್ಯಸ್ಯ ವಾಮನಸ್ಯ ಶುಕ್ಲಪಂಚಮೀಮಾರಭ್ಯ ಯಾವತ್ಸಂವತ್ಸರಂ ಪ್ರತಿಮಾಸಂ ತಸ್ಯಾಮುಪೋಷಿತೋ ರಾತ್ರೌ ಪಂಚಾಮೃತೈಃ ಸ್ನಾಪಯಿತ್ವಾ। ಸುರಭಿಗಂಧ ಪುಷ್ಪಾಕ್ಷತೈಃ ಅಭ್ಯರ್ಚ್ಯ । ಧೂಪದೀಪಾದಿಕಂ ದತ್ವಾ, ಪ್ರಣಮೇತ್ । ಅನುಮಾಸಮೇಕೈಕಂ, ಅನಂತಂ – ವಾಸುಕಿಂ – ಶಂಖಿಂ – ಪದ್ಮಂ – ಕಮಲಂ – ಕಾರ್ಕೋಟಕಂ – ಧೃತರಾಷ್ಟ್ರಂ – ಶಂಖಿಪಾಲಂ – ಕಾಳಿಂಗಂ – ತಕ್ಷಕಂ – ಕಪಿಲಮುದ್ದಿಶ್ಯ, ಪಾಯಸಾಪೂಪೈರ್ಬಲಿಂ ಉತ್ಸೃಜ್ಯ, ಜಾಗರಣಂ ಕೃತ್ವಾ । ಶ್ವೋಭೂತೇ, ಬ್ರಾಹ್ಮಣಾನ್ ತ್ರೀನ್ ಘೃತಪಾಯಸಾ ಅಪೂಪೈರ್ಭೋಜಯೇತ್ । ಪೂರ್ಣೇ ಸಂವತ್ಸರೇ ಪುನಃ ಪಂಚಮ್ಯಾಮೇವಂ ಪೂಜಯಿತ್ವಾ, ಸೌವರ್ಣಂ ನಾಗಂ ಗಾಂ ಚ ಬ್ರಾಹ್ಮಣಾಯ ದತ್ವಾ। ಅನ್ಯಾನ್ ಯಥೇಷ್ಟಂ ಭೋಜಯಿತ್ವಾ, ದಕ್ಷಿಣಯಾ ತೋಷಯಿತ್ವಾ, ನಾಗಪ್ರೀತಿಂ ವಾಚಯೇತ್ । ಏಷಾ ನಾಗಬಲಿಃ ॥

ವ್ಯಕ್ತಿಯು ಹಾವಿನಿಂದ ಸತ್ತರೆ, ಅದರ ದೋಷಪರಿಹಾರಕ್ಕಾಗಿ – ಮರದಿಂದ ಅಥವಾ ಮಣ್ಣಿನಿಂದ 5 ಹೆಡೆಯುಳ್ಳ ನಾಗನ ಪ್ರತಿಕೃತಿಯನ್ನು ಮಾಡಿ । ಒಂದುವರ್ಷದ ಒಳಗೆ ಭಾದ್ರಪದ ಶುಕ್ಲಪಂಚಮಿಯಂದು ಅಥವಾ ವಾಮನಶುಕ್ಲಪಂಚಮಿಯಂದು ಆರಂಭಿಸಿ, ಒಂದುವರ್ಷದ ಒಳಗೆ, ಪ್ರತಿಮಾಸವೂ ಆ ದಿನ ಉಪವಾಸವಿದ್ದು, ರಾತ್ರಿಯಲ್ಲಿ ಪಂಚಾಮೃತ ಸ್ನಾನಾದಿಗಳಿಂದ ನಾಗನಿಗೆ ಅಭಿಷೇಕ ಮಾಡಿ । ಸುಗಂಧ ಅಕ್ಷತೆ, ಪುಷ್ಪಗಳಿಂದ ಪೂಜಿಸಿ । ಧೂಪದೀಪಾದಿಗಳನ್ನು ಮಾಡಿ ನಮಸ್ಕರಿಸಬೇಕು । ಪ್ರತಿಮಾಸವೂ ಕ್ರಮವಾಗಿ – ಅನಂತ, ವಾಸುಕಿ, ಶಂಖಿ, ಪದ್ಮ, ಕಮಲ, ಕರ್ಕೋಟಕ, ಧೃತರಾಷ್ಟ್ರ, ಶಂಖಿಪಾಲ, ಕಾಳಿಂಗ, ತಕ್ಷಕ, ಕಪಿಲ,

ಈ ನಾಗದೇವತೆಗಳಿಗೆ ಪಾಯಸ, ಇಡ್ಲಿ ಮುಂತಾದ ಭಕ್ಷ್ಯಗಳಿಂದ ಬಲಿಯನ್ನು ಕೊಟ್ಟು, ರಾತ್ರಿ ಜಾಗರಣೆ ಮಾಡಿ । ಮರುದಿನ ತುಪ್ಪ, ಪಾಯಸಾ, ಇಡ್ಲಿಗಳಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು । ಒಂದುವರ್ಷ ಕಳೆದನಂತರ ಮತ್ತೇ ಅದೇ ಪಂಚಮಿಯಂದು ನಾಗನನ್ನು ಪೂಜಿಸಿ, ಚಿನ್ನದ ನಾಗನ ಪ್ರತಿಮೆಯನ್ನು ಹಾಗೂ ಒಂದು ಹಸುವನ್ನು ಶ್ರೋತ್ರಿಯ ಬ್ರಾಹ್ಮಣನಿಗೆ ದಾನಕೊಟ್ಟು । ಉಳಿದ ಬ್ರಾಹ್ಮಣರನ್ನು ಭೋಜನದಿಂದ ತೃಪ್ತಿಗೊಳಿಸಿ ಹಾಗೂ ದಕ್ಷಿಣೆಯಿಂದಲೂ ಸಂತೋಷಗೊಳಿಸಿ, ಅವರಿಂದ ನಾಗಾಶೀರ್ವಾದವನ್ನು ಪಡೆಯಬೇಕು । ಇದೇ ನಾಗಬಲಿಯು ॥

ಅಥ ಚೋಭಯೋಃ ಪಕ್ಷಯೋಃ ಪಂಚಮೀಷು ಸಂಮೃಷ್ಟಾಯಾಂ ಭುವಿ(ಪೀನಂ) ಸರ್ಪಂ(ಪಿಂಡೇ) ಪಿಷ್ಟೇನೋಲ್ಲಿಖ್ಯ ಶುಕ್ಲಸುರಭಿ ಗಂಧಾದಿಭಿರಭ್ಯರ್ಚ್ಯ, ಗವ್ಯಂ ಕ್ಷೀರಂ ಮೋದಕಂ ಭೂಮೌ ನಿವೇದ್ಯ । ಉಪಸ್ಥಾಯ ಮುಂಚಮುಂಚ ದೇವದತ್ತಮಿತಿ ಪ್ರಾರ್ಥ್ಯ । ಬಂಧುಭಿಸ್ಸಹ ಮಧು ಕ್ಷೀರಮಶ್ನೀಯಾತ್ । ಏವಂ ಸಂವತ್ಸರಾಂತೇ ನಾರಾಯಣಬಲಿಂ ಚೋಕ್ತವತ್ ಕೃತ್ವಾ । ತತ ಔರ್ಧ್ವದೈಹಿಕಂ ಕರ್ಮಕುರ್ಯಾತ್ ॥

ಅನಂತರ 2 ಪಕ್ಷಗಳ ಪಂಚಮಿಯಲ್ಲಿಯೂ, ಶುದ್ಧಗೊಳಿಸಿದ ಭೂಮಿಯಲ್ಲಿ ದಪ್ಪವಾಗಿ, ಹಾವಿನ ಪ್ರತಿಕೃತಿಯನ್ನು ಹಿಟ್ಟಿನಿಂದ ಮಾಡಿ ಬಿಳಿಯ ಸುಗಂಧಯುಕ್ತವಾದ ಗಂಧಾದಿಗಳಿಂದ, ಆ ನಾಗಪ್ರತಿಕೃತಿಗೆ ಪೂಜಿಸಿ, ಹಸುವಿನ ಹಾಲು, ಮೋದಕ, ಇವುಗಳನ್ನು ಭೂಮಿಯಲ್ಲಿ ಸಮರ್ಪಿಸಿ । ನಂತರ ನಾಗನಿಗೆ ಉಪಸ್ಥಾನಮಾಡಿ, ಈ ಕೆಳಗಿನ ಮಂತ್ರದಿಂದ ನಾಗನನ್ನು ಪ್ರಾರ್ಥಿಸಿ । ಬಂಧುಗಳ ಜೊತೆ ಜೇನುತುಪ್ಪ ಹಾಗೂ ಹಾಲನ್ನು ಸೇವಿಸಬೇಕು । ಹೀಗೆ ವರ್ಷದ ಕೊನೆಯಲ್ಲಿ ನಾರಾಯಣಬಲಿಯನ್ನು ಯಥಾವಿಧಿಯಾಗಿ ಮಾಡಿ । ನಂತರ ಸರ್ಪಹತನಾದ ವ್ಯಕ್ತಿಯ ಔರ್ಧ್ವದೈಹಿಕ(ಸಪಿಂಡಿಕರಣ) ಕರ್ಮವನ್ನು ಮಾಡಬೇಕು ॥

25. ಪೂರ್ವಪಕ್ಷ ನಯನಂ

(ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)

ಯದಿ ಪೂರ್ವಪಕ್ಷ ರಾತ್ರೌ ಮರಣಂ ಶಂಕೇತ ಸಾಯಂ ಅಗ್ನಿಹೋತ್ರಂ ಹುತ್ವಾ ತದಾನೀಮೇವ ಪ್ರಾತರಗ್ನಿಹೋತ್ರಂ ಜುಹುಯಾತ್ । ಪೂರ್ವಪಕ್ಷೇ ದಿವಾ ಪ್ರಮೀತಸ್ಯ ನ ಕಿಂಚಿತ್ ಕರ್ತವ್ಯಮಸ್ತಿ, ಪ್ರಾತರಗ್ನಿಹೋತ್ರಮೇವ । ಯದ್ಯಪರಪಕ್ಷ ರಾತ್ರೌ ಮರಣಂ ಶಂಕೇತ ಸಾಯಂ ಪ್ರಾತರಾಹುತಿಭಿರೇನಂ ಪೂರ್ವಪಕ್ಷಂ ನಯೇಯುಃ, ದರ್ಶಂ ಚ ಕುರ್ಯಾತ್ ॥ ಅಸ್ಯಾರ್ಥಃ – ಯದ್ಯಪರಪಕ್ಷೇ ಸಾಯಂಕಾಲೇ ಮರಣಶಂಕಾ ತದಾ ತದ್ದಿನಮಾರಭ್ಯ ಆಗಾಮಿ ದರ್ಶಾಂತಾಯಾವಂತಃ ಸಾಯಂ ಹೋಮಾಃ ತಾನ್ ಸಾಯಂ ಹೋಮೇನ ಸಮೋಪ್ಯ ಪಕ್ಷಹೋಮನ್ಯಾಯೇನ ಜುಹುಯಾತ್ ॥

ಒಂದುವೇಳೆ ಶುಕ್ಲಪಕ್ಷದ ರಾತ್ರಿವೇಳೆ, ಮರಣಸಂಶಯವು ಬಂದರೆ, ಸಾಯಂ ಅಗ್ನಿಹೋತ್ರವನ್ನು ಹೋಮಿಸಿ, ಆಗಲೇ ಪ್ರಾತರಗ್ನಿಹೋತ್ರವನ್ನೂ ಮಾಡಬೇಕು । ಶುಕ್ಲಪಕ್ಷದಲ್ಲಿ ಹಗಲು ಸಾಯುವುದಾದರೆ, ಅಗ್ನಿಹೋತ್ರಹೋಮದ ಕರ್ತವ್ಯವು ಇರುವುದಿಲ್ಲ । ಕೇವಲ ಪ್ರಾತರಗ್ನಿಹೋತ್ರವಷ್ಟೇ । ಒಂದುವೇಳೆ ಕೃಷ್ಣಪಕ್ಷದ ರಾತ್ರಿಯಲ್ಲಿ ಮರಣಸಂಶಯವು ಬಂದರೆ, ಸಾಯಂಪ್ರಾತರಾಹುತಿಗಳಿಂದ ಇವನನ್ನು ಶುಕ್ಲಪಕ್ಷದವರೆಗೆ ಕೊಂಡೊಯ್ಯಬೇಕು, ದರ್ಶಯಾಗವನ್ನೂ ಮಾಡಬೇಕು। ಇದರ ಅರ್ಥ – ಒಂದುವೇಳೆ ಅಪರಪಕ್ಷದಲ್ಲಿ, ಸಂಜೆಯಲ್ಲಿ ಮರಣ ಶಂಕೆಯಾದರೆ, ಆಗ ಆ ದಿನದಿಂದ ಆರಂಭಿಸಿ, ಬರುವ ಅಮಾವಾಸ್ಯೆಯವರೆಗೆ ಎಷ್ಟು ಸಾಯಂಕಾಲದ ಹೋಮವಿದೆಯೋ, ಅಷ್ಟು ಸಾಯಂಹೋಮ ಸಂಖ್ಯೆಯ ಆಹುತಿದ್ರವ್ಯ(ಹಾಲು)ಗಳನ್ನು ಒಟ್ಟು ಅವದಾನ ಮಾಡಿಕೊಂಡು, ಪಕ್ಷಹೋಮ ನ್ಯಾಯದಂತೆ ಹೋಮಿಸಬೇಕು ॥

ತದಾನೀಮೇವ ತತ್ ಪರದಿನಪ್ರಾತರಾರಭ್ಯ ಆಗಾಮಿಶುಕ್ಲಪಕ್ಷಪ್ರತಿಪದಃ ಯಾವಂತಃ ಪ್ರಾತರ್ಹೋಮಾಃ ತಾನ್ ಪ್ರಾತರ್ಹೋಮೇನ ಸಮೋಪ್ಯ, ಪಕ್ಷಹೋಮನ್ಯಾಯೇನ ಜುಹುಯಾತ್ ॥

ಆಗಲೇ (ಆ ರಾತ್ರಿಯೇ) ಮರುದಿನ ಬೆಳಿಗ್ಗೆಯಿಂದ ಆರಂಭಿಸಿ, ಮುಂಬರುವ ಶುಕ್ಲಪಕ್ಷಪ್ರತಿಪದವರೆಗಿನ ಎಷ್ಟು ಪ್ರಾತರ್ಹೋಮಗಳು ಇವೆಯೋ, ಅಷ್ಟೂ ಪ್ರಾತರ್ಹೋಮಸಂಖ್ಯೆಯ ಆಹುತಿ ದ್ರವ್ಯಗಳನ್ನು ಒಟ್ಟಾಗಿ ಹಾಕಿಕೊಂಡು, ಪಕ್ಷಹೋಮನ್ಯಾಯದಿಂದ ಹೋಮಿಸಬೇಕು ॥

ಯದ್ಯಪರಪಕ್ಷೇ ಪ್ರಾತಃಕಾಲೇ ಮರಣಶಂಕಾ, ತದಾ ತದ್ದಿನ ಪ್ರಾತಃಕಾಲಂ ಆರಭ್ಯ ಆಗಾಮಿ ಶುಕ್ಲಪ್ರತಿಪದಃ ಯಾವಂತಃ ಪ್ರಾತರ್ಹೋಮಾಃ ತಾನ್ ಪ್ರಾತರ್ಹೋಮೇನ ಸಮೋಪ್ಯ, ಪಕ್ಷಹೋಮನ್ಯಾಯೇನ ಜುಹುಯಾತ್ ॥

ಇದರಂತೆ, ಒಂದುವೇಳೆ ಕೃಷ್ಣಪಕ್ಷದ ಬೆಳಿಗ್ಗೆ ಮರಣಸಂಶಯ ಬಂದರೆ, ಆಗ ಆ ದಿನದ ಪ್ರಾತಃಕಾಲದಿಂದ ಆರಂಭಿಸಿ, ಮುಂಬರುವ ಶುಕ್ಲಪ್ರತಿಪದವರೆಗಿನ ಎಷ್ಟು ಪ್ರಾತರ್ಹೋಮಗಳಿವೆಯೋ, ಅಷ್ಟೂ ಪ್ರಾತರ್ಹೋಮಸಂಖ್ಯೆಯಿಂದ ಪಕ್ಷಹೋಮನ್ಯಾಯದಿಂದ ಹೋಮಿಸಬೇಕು ॥

ತದಾನೀಮೇವ ತದ್ದಿನ ಸಾಯಂ ಹೋಮಮಾರಭ್ಯ ಆಗಾಮಿ ದರ್ಶಾಂತಾಃ ಯಾವಂತಸ್ಸಾಯಂ ಹೋಮಾಃ ತಾನ್ ಸಾಯಂ ಹೋಮೇನ ಸಮಾಪ್ಯ, ಪಕ್ಷಹೋಮನ್ಯಾಯೇನ ಜುಹುಯಾತ್ । ಹೋಮದರ್ಶೌ ನ ಕರ್ತವ್ಯೌ ಪುನರ್ಯದಿ ಸ ಜೀವತೀತಿ ॥

ಆಗಲೇ, ಆ ದಿನದ ಸಾಯಂ ಹೋಮವನ್ನು ಆರಂಭಿಸಿ, ಮುಂದಿನ ಅಮಾವಾಸ್ಯೆಯವರೆಗಿನ ಎಷ್ಟು ಸಾಯಂ ಹೋಮಗಳಿವೆಯೋ, ಅಷ್ಟೂ ಸಾಯಂ ಹೋಮಗಳಿಂದ ಒಟ್ಟುಗೂಡಿಸಿ, ಪಕ್ಷಹೋಮನ್ಯಾಯದಂತೆ ಹೋಮಿಸಬೇಕು । ಒಂದುವೇಳೆ ಅವನು ಬದುಕಿಬಿಟ್ಟರೆ, ಹೋಮವನ್ನೂ, ದರ್ಶಯಾಗವನ್ನೂ ಮಾಡಕೂಡದು ॥

26. ಪಕ್ಷಾವಶಿಷ್ಟ ಹೋಮ ಕ್ರಮಃ
(ಆಹಿತಾಗ್ನಿಗಳಿಗೆ ಮಾತ್ರ)

ಮೃತೇ ತು ಮೃತಾಗ್ನಿಹೋತ್ರ ವಿಧಾನೇನ ಪಕ್ಷಾವಶಿಷ್ಟ ಸಾಯಂ ಹೋಮಾನ್ ಪ್ರಾತರ್ಹೋಮಾಂಶ್ಚ ಗಣಯಿತ್ವಾ ಸಕೃತ್ ಸಕೃದುನ್ನೀಯ ಭಿನ್ನತಂತ್ರೇಣ ಹೋಮದ್ವಯಂ ಕುರ್ಯಾದಿತಿ ಕೇಚಿತ್ । ಯದ್ಯಪರಪಕ್ಷೇ ಸಾಯಂಕಾಲೇ ಮ್ರಿಯೇತ ತದಾ ತದ್ದಿನಮಾರಭ್ಯ ಆಗಾಮಿ ದರ್ಶಾಂತಾಃ ಯಾವಂತಸ್ಸಾಯಂ ಹೋಮಾಃ ತಾನ್ ಸಾಯಂ ಹೋಮೇನ ಸಮಸ್ಯ ಗಣಯಿತ್ವಾ ಸಕೃತ್ ಸಕೃದುನ್ನೀಯ ಮೃತಾಗ್ನಿಹೋತ್ರ ವಿಧಾನೇನ ಜುಹುಯಾತ್ ॥

ಆಹಿತಾಗ್ನಿಯು ಸತ್ತಮೇಲೆ, ಮೃತಾಗ್ನಿಹೋತ್ರವಿಧಾನದಿಂದ ಪಕ್ಷಗಳಲ್ಲಿ ಉಳಿದ ಸಾಯಂ ಹೋಮವನ್ನೂ, ಪ್ರಾತಃಕಾಲದ ಹೋಮಗಳನ್ನೂ, ಒಂದೊಂದುಸಲ ಉನ್ನಯನ(ಸ್ರುವದಿಂದ, ಸ್ರುಕ್ಕಿಗೆ ಹಾಕಿಕೊಳ್ಳುವಿಕೆ) ಮಾಡಿ, ಭಿನ್ನತಂತ್ರದಿಂದ 2 ಹೋಮಗಳನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ । ಒಂದುವೇಳೆ, ಕೃಷ್ಣಪಕ್ಷದ ಸಂಜೆ ಸತ್ತರೆ, ಆಗ ಆ ದಿನದಿಂದ ಆರಂಭಿಸಿ, ಮುಂಬರುವ ಅಮಾವಾಸ್ಯೆವರೆಗೆ, ಎಷ್ಟು ಸಾಯಂ ಹೋಮಗಳಿವೆಯೋ ಅಷ್ಟನ್ನೂ ಒಟ್ಟಾಗಿ ಲೆಕ್ಕಮಾಡಿ ಒಂದೊಂದು ಸಲ ಉನ್ನಯನಮಾಡಿ, ಮೃತಾಗ್ನಿಹೋತ್ರವಿಧಾನದಿಂದ ಹೋಮಿಸಬೇಕು ॥

ತದಾನೀಮೇವ ತತ್ ಪರದಿನ ಪ್ರಾತಃಕಾಲಮಾರಭ್ಯ ಆಗಾಮಿ ಶುಕ್ಲ ಪ್ರತಿಪದಃ ಯಾವಂತಃ ಪ್ರಾತರ್ಹೋಮಾಃ ತಾನ್ ಪ್ರಾತರ್ಹೋಮೇನ ಸಮಸ್ಯ ಗಣಯಿತ್ವಾ ಸಕೃತ್ ಸಕೃದುನ್ನೀಯ ಮೃತಾಗ್ನಿಹೋತ್ರ ವಿಧಾನೇನ ಜುಹುಯಾತ್ ॥

ಆ ರಾತ್ರಿಕಾಲದಲ್ಲೇ, ಮರುದಿನದ ಪ್ರಾತಃಕಾಲದಿಂದ ಆರಂಭಿಸಿ, ಮುಂದಿನ ಶುಕ್ಲಪ್ರತಿಪದವರೆಗಿನ ಎಷ್ಟು ಪ್ರಾತಹೋ೯ಮಗಳಿವೆಯೋ ಅವನ್ನು ಒಟ್ಟಾಗಿ ಲೆಕ್ಕಮಾಡಿ, ಒಂದೊಂದು ಸಲ ಉನ್ನಯನಮಾಡಿ ಮೃತಾಗ್ನಿಹೋತ್ರ ವಿಧಾನದಿಂದ ಹೋಮಿಸಬೇಕು ॥

ಯದ್ಯಪರಪಕ್ಷ ಪ್ರಾತಃಕಾಲೇ ಮ್ರಿಯೇತ ತದಾ ತದ್ದಿನಮಾರಭ್ಯ ಆಗಾಮಿ ಶುಕ್ಲಪ್ರತಿಪದಃ ಯಾವಂತಃ ಪ್ರಾತಹೋ೯ಮಾಃ ತಾನ್ ಪ್ರಾತಹೋ೯ಮೇನ ಸಮಸ್ಯ ಗಣಯಿತ್ವಾ ಸಕೃತ್ ಸಕೃದುನ್ನೀಯ ಮೃತಾಗ್ನಿಹೋತ್ರ ವಿಧಾನೇನ ಜುಹುಯಾತ್ ॥

ಕೃಷ್ಣಪಕ್ಷದ ಪ್ರಾತಃಕಾಲದಲ್ಲಿ ಆಹಿತಾಗ್ನಿಯು ಸತ್ತರೆ, ಮುಂದಿನ ಶುಕ್ಲಪ್ರತಿಪದವರೆಗಿನ ಎಷ್ಟು ಪ್ರಾತಹೋ೯ಮಗಳಿವೆಯೋ ಅಷ್ಟೂ ಹೋಮಗಳನ್ನು ಲೆಕ್ಕಮಾಡಿ, ಅಷ್ಟನ್ನೂ ಒಂದೊಂದನ್ನೂ ಉನ್ನಯನಮಾಡಿ, ಮೃತಾಗ್ನಿಹೋತ್ರ ವಿಧಾನದಿಂದ ಹೋಮಿಸಬೇಕು ॥

ತದಾನೀಮೇವ ತದ್ದಿನ ಸಾಯಮಾರಭ್ಯ ಆಗಾಮಿ ದರ್ಶಾಂತಾಃ ಯಾವಂತಃ ಸಾಯಂಹೋಮಾಃ ತಾನ್ ಸಮಸ್ಯ ಗಣಯಿತ್ವಾ ಸಕೃತ್ ಸಕೃದುನ್ನೀಯ ಮೃತಾಗ್ನಿಹೋತ್ರ ವಿಧಾನೇನ ಜುಹುಯಾತ್ ॥

ಆ ಬೆಳಗಿನಕಾಲದಲ್ಲೇ, ಆ ಸಾಯಂಕಾಲದ ಹೋಮವನ್ನಾರಂಭಿಸಿ, ಮುಂದಿನ ಅಮಾವಾಸ್ಯೆಯವರೆಗೆ ಎಷ್ಟು ಸಾಯಂ ಹೋಮಗಳಿವೆಯೋ ಅವುಗಳನ್ನು ಒಟ್ಟಾಗಿ ಲೆಕ್ಕಮಾಡಿ ಅವನ್ನು ಒಂದೊಂದಾಗಿ ಉನ್ನಯನಮಾಡಿ ಮೃತಾಗ್ನಿಹೋತ್ರ ವಿಧಾನದಿಂದ ಹೋಮಿಸಬೇಕು ॥

ತದಾಹ ತ್ರಿಕಾಂಡಿಃ –

ಕೃಷ್ಣಪಕ್ಷೇ ಪ್ರಮೀಯೇತ ಯದ್ಯಹ್ನಿ ಪ್ರಾತರಾಹುತಿಃ । ಶೇಷಾಸ್ತು ಜುಹುಯಾತ್ ದರ್ಶಪರ್ಯಂತಾಃ ಪಕ್ಷಹೋಮವತ್ । ತದಾನೀಮೇವ ಜುಹುಯಾತ್ ಸಾಯಂಕಾಲಾಹುತೀರಪಿ । ಸಾಯಂಮ್ರಿಯೇತ ಚೇತ್ ಸಾಯಮಾಹುತೀರ್ಜುಹುಯಾದಥ । ತದಾನೀಮೇವ ಜುಹುಯಾತ್ ಪ್ರಾತಃಕಾಲಾಹುತೀರಪಿ ॥

ಈ ವಿಷಯದಲ್ಲಿ ತ್ರಿಕಾಂಡಿಗಳು ಹೀಗೆ ಹೇಳುತ್ತಾರೆ । ಕೃಷ್ಣಪಕ್ಷದಲ್ಲಿ ಆಹಿತಾಗ್ನಿಯು ಸತ್ತರೆ, ಆ ಹಗಲಿನಲ್ಲೇ ಪ್ರಾತರಾಹುತಿಯು । ಉಳಿದ ದರ್ಶಪರ್ಯಂತ ಆಹುತಿಗಳನ್ನೂ ಪಕ್ಷಹೋಮದಂತೆ ಮಾಡಬೇಕು । ಆಗಲೇ ಸಂಜೆಯ ಆಹುತಿಗಳನ್ನು ಗಣನೆಮಾಡಿ ಹೋಮಿಸಬೇಕು । ಹಾಗೆಯೇ ಕೃಷ್ಣಪಕ್ಷದ ಸಂಜೆ ಸತ್ತರೆ, ಆಗಲೇ ಉಳಿದ ಸಾಯಮಾಹುತಿಗಳನ್ನು, ಪ್ರಾತರಾಹುತಿಗಳನ್ನೂ ಲೆಕ್ಕಮಾಡಿ ಹೋಮಿಸಬೇಕು ॥

ಸಕೃತ್ ಗೃಹೀತಂ ಮಂತ್ರೇಷ್ಟಿಂ ಭಿನ್ನತಂತ್ರಂ ಚ ಹೋಮಯೋಃ । ಆಗಾಮಿ ದರ್ಶದೇವತಾಭ್ಯಃ ವಕ್ಷ್ಯಮಾಣ ಪ್ರಕಾರೇಣ ಪೂರ್ಣಾಹುತೇಃ ಜುಹುಯಾತ್ । ಅಗ್ನಿಹೋತ್ರೋಚ್ಛೇಷಣಂ ಪಾತ್ರಪೂರಣಾರ್ಥಂ ನಿದಧಾತಿ । ಸ್ಥಾಲೀಗತಂ ಅಗ್ನಿಹೋತ್ರೋಚ್ಛೇಷಣಂ ಇತಿ ದ್ರಷ್ಟವ್ಯಮ್ । ಅಪಿ ಪ್ರೇರಗ್ನೇ ಸ್ವಾಮೀತ್ಯಂತಿಮಾಗ್ನಿಹೋತ್ರಸ್ಥಾಲ್ಯಾಂ ತೃಣಮಕ್ತ್ವಾ ಪ್ರಹರತಿ । ಸಾಗ್ನಿಹೋತ್ರಸ್ಯ ಸಗ್ಗ್ಸ್ಥಿತಿಃ ॥

ಸಕೃತ್ ಗ್ರಹಣದಿಂದಲೇ, ಮಂತ್ರವನ್ನೂ ಇಷ್ಟಿಯನ್ನೂ ಭಿನ್ನತಂತ್ರವಾಗಿ 2 ಹೋಮಗಳನ್ನು ಮಾಡಬೇಕು । ಮುಂದಿನ ದರ್ಶೇಷ್ಟಿದೇವತೆಗಳಿಗೆ, ಮುಂದೆ

ಹೇಳುವ ಪ್ರಕಾರದಂತೆ ಪೂರ್ಣಾಹುತಿಯನ್ನು ಮಾಡಬೇಕು । ಅಗ್ನಿಹೋತ್ರದಲ್ಲಿ ಉಳಿದ ಹಾಲನ್ನು ಪಾತ್ರಪೂರಣೆಗಾಗಿ ಇಡಬೇಕು । ಸ್ಥಾಲಿಯಲ್ಲಿರುವ ಅಗ್ನಿಹೋತ್ರದ ಹಾಲು ಎಂದು ಅರ್ಥಮಾಡಿಕೊಳ್ಳಬೇಕು । **ಅಪಿ ಪ್ರೇರಗ್ನೇ.....,** ಎಂಬ ಮಂತ್ರದಿಂದ ಅಗ್ನಿಹೋತ್ರಸ್ಥಾಲಿಯಲ್ಲಿ ಒಂದು ದರ್ಭೆಯನ್ನು ಅದ್ದಿ, ಅಗ್ನಿಯಲ್ಲಿ ಹಾಕಬೇಕು । ಅದೇ ಅಗ್ನಿಹೋತ್ರದ ಸಂಸ್ಥಾನವು(ನಿಲುಗಡೆಯು) ॥

ನೈಯಮಗ್ನಿಹೋತ್ರೇ ಏಷ ವಾ ಅಗ್ನಿಹೋತ್ರಸ್ಯ ಸ್ಥಾಣುಃ ಯತ್ ಪೂರ್ವಾಹುತಿರಿತಿ ಶ್ರುತಿಬಲಾತ್ । ಭಾಷ್ಯವೃತ್ತೌ ಪೂರ್ವಾಹುತೇರೇವ ಪ್ರಾಧಾನ್ಯಮುಕ್ತಮ್ । ಉತ್ತರಾಹುತಿ ಪ್ರಭೃತಿ ಅಪರಾಗ್ನ್ಯೋರಾಹುತೀನಾಂ ಆಗಂತುಕತ್ವ ಮುಕ್ತಮ್ । ತಥಾ ಪಕ್ಷಹೋಮೇ ಪಕ್ಷಾಮನ್ಯಾಹೋಮಃ ಪರಾಗ್ನಿಹೋಮೇನ ಸಂಭವತಿ । ಆಹವನೀಯ ಏವೇತಿ ಕಪರ್ದಿ ಸ್ವಾಮಿನೋಕ್ತಮ್ । ಮೃತಾಗ್ನಿಹೋತ್ರೇ ತೂಷ್ಣೀಂ ಚತಸ್ರೋ ಗಾರ್ಹಪತ್ಯೇ ಜುಹೋತಿ । ತೂಷ್ಣೀಂ ಚತಸ್ರೋ ಅನ್ವಾಹಾರ್ಯಪಚನ ಇತಿ ತ್ರೈವಿದ್ಯ ವೃದ್ಧೇನ ತಾಳವೃಂತ ನಿವಾಸಿನಾಪ್ಯುಕ್ತಮ್ ॥

ನಿತ್ಯಾಗ್ನಿಹೋತ್ರದಲ್ಲಿ **"ಇದೇ ಅಗ್ನಿಹೋತ್ರದ ಆಧಾರಸ್ಥಂಭ, ಯಾವುದೆಂದರೆ ಪೂರ್ವಾಹುತಿಯು, ಎಂದು ಶ್ರುತಿಯಲ್ಲಿರುವುದರಿಂದ"** । ಭಾಷ್ಯವೃತ್ತಿಯಲ್ಲಿ ಪೂರ್ವಾಹುತಿಯೇ ಪ್ರಧಾನವೆಂದು ಹೇಳಿದೆ । ಉತ್ತರಾಹುತಿಯಿಂದ ಹಿಡಿದು, ಹಿಂದಿನ ಅಗ್ನಿಗಳ ಆಹುತಿಗಳವರೆಗೆ ಆಗಂತುಕವೆಂದು ಹೇಳಿದೆ। ಪಕ್ಷಹೋಮದಲ್ಲಿ ಪಕ್ಷಸಂಖ್ಯಾಹೋಮಗಳು, ಗಾರ್ಹಪತ್ಯ, ದಕ್ಷಿಣಾಗ್ನಿಗಳಲ್ಲಿ ಬರುವುದಿಲ್ಲ । ಆಹವನೀಯದಲ್ಲಿ ಮಾತ್ರವೇ ಎಂದು ಕಪರ್ದಿಸ್ವಾಮಿಗಳು ಹೇಳಿರುತ್ತಾರೆ । ಮೃತಾಗ್ನಿಹೋತ್ರದಲ್ಲೂ ಗಾರ್ಹಪತ್ಯದಲ್ಲಿ ಸುಮ್ಮನೆ 4 ಆಜ್ಯಾಹುತಿಗಳನ್ನು ಹೋಮಿಸಬೇಕು । ಹಾಗೆಯೇ ಸುಮ್ಮನೆ 4 ಆಜ್ಯಾಹುತಿಗಳನ್ನು ದಕ್ಷಿಣಾಗ್ನಿಯಲ್ಲೂ ಹೋಮಿಸಬೇಕೆಂದು ಮೂರು ವೇದಗಳನ್ನು ತಿಳಿದ ತಾಳವೃಂತ ನಿವಾಸಿಗಳಿಂದಲೂ ಹೇಳಲ್ಪಟ್ಟಿದೆ ॥

ಪ್ರೋಷಿತಮರಣೇ ಅಗ್ನಿಗುಪ್ತ್ಯರ್ಥಹೋಮೇ ಸರ್ವಂ ಸಾಂಗಂ ತೂಷ್ಣೀಂ ಅಗ್ನಿಹೋತ್ರಂ ಕರ್ತವ್ಯಮಿತಿ ಧೂರ್ತಸ್ವಾಮಿನಾ ಭಾಷ್ಯಕಾರೇಣೋಕ್ತತ್ವಾಚ್ಚ ಪಕ್ಷಹೋಮನ್ಯಾಯಪ್ರಾಪ್ತ ಪೂರ್ವಪಕ್ಷ ನಯನಂ???? ನೈಯಮಿಕಾಗ್ನಿಹೋತ್ರ ಪಕ್ವಾವಶಿಷ್ಟಹೋಮೇ ಪೂರ್ವಪಕ್ಷನಯನಂ – ಮೃತಾಗ್ನಿಹೋತ್ರ ಪಕ್ವಾವಶಿಷ್ಟ ಹೋಮೇ ಚ ಅಪರಾಗ್ನ್ಯೌಹೋರ್ಮಾ ಭವಂತ್ಯೇವ ॥

ಯಜಮಾನನು ಪ್ರವಾಸದಲ್ಲಿ ಮರಣಹೊಂದಿದಾಗ ಮತ್ತು ಅಗ್ನಿಗುಪ್ತ್ಯರ್ಥ (ಅಗ್ನಿರಕ್ಷಣೆಗಾಗಿ) ಹೋಮಮಾಡುವಾಗ ಅಗ್ನಿಹೋತ್ರವನ್ನು ಸಾಂಗವಾಗಿ ಅಮಂತ್ರಕವಾಗಿ(ತೂಷ್ಣೀಂ) ಮಾಡಬೇಕು, ಎಂದು ಧೂರ್ತಸ್ವಾಮಿ ಭಾಷ್ಯಕಾರರಿಂದ ಹೇಳಲ್ಪಟ್ಟಿರುವುದರಿಂದ ಪಕ್ಷಹೋಮನ್ಯಾಯಪ್ರಾಪ್ತವಾದ ಪೂರ್ವಪಕ್ಷ ಹೋಮಗಳು???? ॥

ಪಕ್ಷಹೋಮೇ ತ್ರಿಕಾಂಡಿಃ –

ಪಕ್ಷಹೋಮಾನಶೇಷಾಂಸ್ತಾನ್ ಶೇಷಹೋಮಾನಥಾಪಿ ವಾ ।
ಸಮಸ್ಯ ಜುಹುಯಾತ್ತತ್ರ ಪ್ರಯೋಗೋಯಂ ನಿರೂಪ್ಯತೇ ।
ಪ್ರತಿಪದ್ಯುನ್ನಯೇತ್ ಸಾಯಮಾಪದ್ಯುಕ್ತೇsಥವಾದಿನೇ ।
ಯಾವಂತ್ಯೌಪವಸಂಧ್ಯಾಹಾತ್ ಪ್ರಾಗ್ದಿನಾನಿ ಭವಂತಿ ಹಿ ।
ತಾವಂತಿ ಪ್ರತಿಗೃಹ್ಣೀಯಾಚ್ಚತುರುನ್ನಯಾನಿತು ।
ಪಾತ್ರಾಂತರ ಸಹಾಯಾಯಾಂ ನಿತ್ಯಾಯಾಂ ಪ್ರಾಕೃತ ಸ್ರುಚಿ ॥

ಪಕ್ಷಹೋಮದ ವಿಷಯದಲ್ಲಿ ತ್ರಿಕಾಂಡಿಯಷಿಗಳ ಅಭಿಪ್ರಾಯವು ಹೀಗಿದೆ । ಸಂಪೂರ್ಣಪಕ್ಷಹೋಮವನ್ನು, ಹಾಗೂ ಶೇಷಹೋಮಗಳನ್ನೂ ಸೇರಿಸಿ, ಹೋಮಮಾಡಬೇಕು । ಅದರ ಪ್ರಯೋಗವನ್ನು ಈಗ ಹೇಳುತ್ತೇವೆ । ಪ್ರತಿಪತ್ ದಿನದ ಸಂಜೆಯಲ್ಲಿ ಉನ್ನಯನವನ್ನು(ಸ್ರುವದಿಂದ ಸ್ರುಕ್ಕಿಗೆ ದ್ರವ್ಯವನ್ನು ಹಾಕಿಕೊಳ್ಳುವಿಕೆ) ಮಾಡಬೇಕು, ಮರಣಸಂಶಯವು ಆ ದಿನದಲ್ಲಿದ್ದಾಗ । (ಸ್ಥಾಲೀಪಾಕದ ಹಿಂದಿನ ದಿನದ ಸಾಯಂಕಾಲದವರೆಗೆ) ಔಪವ ಸಂಧ್ಯಾಕಾಲಕ್ಕಿಂತ ಮುಂಚಿನ ದಿನದವರೆಗೆ ಎಷ್ಟುದಿನಗಳಾಗುತ್ತವೆಯೋ ಅಷ್ಟೂ ಸಂಖ್ಯೆಯಲ್ಲಿ ಪ್ರತಿಯೊಂದಕ್ಕೂ 4 ಸಲ ಉನ್ನಯನ ಮಾಡಿಕೊಳ್ಳಬೇಕು । ಬೇರೇ ಪಾತ್ರೆಯ ಸಹಾಯದಿಂದ ಈ ಸ್ರುಕ್ಕಿನಿಂದ ಉನ್ನಯನ ಮಾಡಿಕೊಳ್ಳಬೇಕು (ಆ ಪಾತ್ರೆಯು, ನಿತ್ಯ ಅಗ್ನಿಹೋತ್ರಕರ್ಮದ ಪಾತ್ರೆಯಾಗಿರಬೇಕು ॥

ಸ್ಥೂಲಂ ಸ್ರುಗಂತರಂ ವಾಪಿ ಕೃತ್ವಾ ತತ್ರ ಸಮುನ್ನಯೇತ್ ।
ಏಕಾ ಸಮಿತ್ಸಕೃದ್ಧೋಮಸ್ಸಕೃತ್ ಪಾಣ್ಯವ ಮಾರ್ಜನಮ್ ।
ಉಪಸ್ಥಾನಂ ಸಕೃತ್ ಕಾರ್ಯಂ ಶೇಷಾಃ ಪ್ರಕೃತಿರಿಷ್ಯತೇ ।
ಏವಮೇವೋತ್ತರತ್ರಾಪಿ ಪ್ರಾತರ್ಹೋಮಾನ್ ಸಮಸ್ಯ ತು ಜುಹೋತಿ ।
ಔಪವಸಥ್ಯಾಹ್ನಃ ಪ್ರಾತರ್ಹೋಮಾವಧೀನ್ ಸಕೃತ್ ।
ಸಮಾರೋಪ ವಿಧಾನೇನ ಸಮಾರೋಪಯತೇನಲಾನ್ ।
ಯೇ ಧಾರ್ಯಂತೇsಥವಾ ಧಾರ್ಯಂ ಧಾರಯಂತ್ಯೇವ ಪೂರ್ವವತ್ ॥

ಬೇರೇ ಸ್ರುಕ್ಕನ್ನು ದಪ್ಪವಾಗಿ ಮಾಡಿಕೊಂಡು, ಉನ್ನಯನವನ್ನು ಮಾಡಬೇಕು । ಒಂದೇಸಲ ಸಮಿದ್ಧೋಮವನ್ನು ಮಾಡಬೇಕು । ಪಾಣಿಮಾರ್ಜನವೂ ಸಹ ಒಂದೇಸಲ । ಉಪಸ್ಥಾನವೂ ಕೂಡ ಒಂದೇ ಸಲ ಮಾಡಬೇಕು, ಉಳಿದೆಲ್ಲವೂ ಪ್ರಕೃತಿಯಂತೆ(ಅಗ್ನಿಹೋತ್ರದಂತೆ) ಮಾಡಬೇಕು । ಹೀಗೆಯೇ ಪ್ರಾತರ್ಹೋಮಗಳನ್ನೂ ಕೂಡ ಸೇರಿಸಿ ಹೋಮಮಾಡಬೇಕು । ಔಪವಸಥ್ಯಾಹ್ನದ ಬೆಳಿಗ್ಗಿನ ಹೋಮದವರೆಗೆ ಸೇರಿಸಿ, ಒಂದುಸಲ ಹೋಮಿಸಬೇಕು ।

ಸಮಾರೋಪವಿಧಾನದ ರೂಪದಲ್ಲಿ ಅಗ್ನಿಗಳನ್ನು ಸಮಾರೋಪ ಮಾಡಬೇಕು। ಯಾರು ಅಗ್ನಿಯನ್ನು ಅಜಸ್ರಧಾರಣೆ ಮಾಡಿರುತ್ತಾರೋ ಹಾಗೂ ಸಮಾರೋಪಾಗ್ನಿಯನ್ನು ಧರಿಸಿರುತ್ತಾರೋ ಅವರೂ ಹಿಂದಿನಂತೆಯೇ ಮಾಡಬೇಕು ॥

27. ದರ್ಶಪೂರ್ಣಮಾಸಾದಿ ಪೂರ್ಣಾಹುತಿಃ

(ಆಹಿತಾಗ್ನಿಗಳಿಗೆ ಮಾತ್ರ)

ಮರಣ ಸಂಶಯ ಏವ ಮ್ರಿಯಮಾಣಸ್ಯೈವಂ ನ ಯಜ್ಞಲೋಪೋ ಭವತೀತಿ ವಿಜ್ಞಾಯತ ಇತಿ ವಚನಾತ್ । ಚಿರಕಾಲಮಕೃತ್ ದರ್ಶಪೂರ್ಣಮಾಸಾದಿ ಯಾಗಶ್ಚೇದತಿಪನ್ನ ಪ್ರಾಯಶ್ಚಿತ್ತಂ ಕೃತ್ವಾ ಸಮನಂತರಂ ಅತಿಪನ್ನ ಸದರ್ಶಪೂರ್ಣಮಾಸಂ ಕುರ್ಯಾತ್ । "ಅತಿಪನ್ನಾನಾಂ ದರ್ಶಪೂರ್ಣಮಾಸಾನಾಂ ಪ್ರಾಯಶ್ಚಿತ್ತಾರ್ಥಂ ಪಥಿಕೃತ್ ವೈಶ್ವಾನರೇಷ್ಟ್ಯೋಃ ಸ್ಥಾನೇ ಪೂರ್ಣಾಹುತೀಃ ಹೋಷ್ಯಾಮಿ" ಇತಿ ಸಂಕಲ್ಪ್ಯ ಆಹವನೀಯಂ ವಿಹೃತ್ಯ ॥

ಮರಣಸಂಶಯವಾಗಲಾಗಿ, ಸಾಯುತ್ತಿರುವವನ ಅಗ್ನಿಗೆ ಯಜ್ಞಲೋಪವು ಆಗುವುದಿಲ್ಲ ಎಂದು ಶಾಸ್ತ್ರವಚನದಿಂದ ತಿಳಿಯುತ್ತದೆ। ಬಹಳ ಕಾಲದವರೆಗೆ ದರ್ಶಪೂರ್ಣಮಾಸ ಇಷ್ಟಿಯನ್ನು ಮಾಡದೇ, ಕಾಲಾತಿಕ್ರಮವಾಗಿದ್ದರೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು, ನಂತರ ಅತಿಪನ್ನವಾದ (ಅತಿಕ್ರಾಂತವಾದ) ದರ್ಶಪೂರ್ಣಮಾಸ ಇಷ್ಟಿಯನ್ನು ಮಾಡಬೇಕು, ಅತಿಕ್ರಾಂತವಾದ ದರ್ಶಪೂರ್ಣಮಾಸಗಳ ಪ್ರಾಯಶ್ಚಿತ್ತಕ್ಕೋಸ್ಕರವಾಗಿ, ಪಥಿಕೃತ್ ಹಾಗೂ ವೈಶ್ವಾನರೇಷ್ಟಿಗಳ ಸ್ಥಾನದಲ್ಲಿ ಪೂರ್ಣಾಹುತಿಯನ್ನು ಮಾಡಬೇಕು। ಮೇಲಿನಂತೆ ಸಂಕಲ್ಪಮಾಡಿ, ಆಹವನೀಯದ ವಿಹರಣ(ಆಯಾಯಾ ಜಾಗದಲ್ಲಿ ಅಗ್ನಿಗಳನ್ನು ಇಟ್ಟುಕೊಳ್ಳುವಿಕೆ) ಮಾಡಿ ॥

ಜುಹ್ವಾ ಚತುರ್ಗೃಹೀತಂ ಗೃಹೀತ್ವಾ । ವೇತ್ಥಾಹಿ ವೇಧೋಧ್ವನಃ..... ಸುಕ್ರತೋಮ್ । ಆ ದೇವಾನಾಮಪಿ ಪಂಥಾಮಗನ್ಮ.....ಕಲ್ಪಯಾತಿ ಸ್ವಾಹಾ । ಆಹವನೀಯೇ ಜುಹೋತಿ, ಅಗ್ನಯೇ ಪಥಿಕೃತ ಇದಂ । ಪುನಶ್ಚತುರ್ಗೃಹೀತಂ ಗೃಹೀತ್ವಾ । ವೈಶ್ವಾನರೋ ಅಜಜನತ್..... ಓಜಸೋಮ್ । ಪೃಷ್ಟೋ ದಿವಿ.....ನಕ್ತಂ ಸ್ವಾಹಾ । ಅಗ್ನಯೇ ವೈಶ್ವಾನರಾಯೇದಂ । ಅಗ್ನಿಂ ಪರಿತ್ಯಜ್ಯ ॥

ಸ್ರುಕ್ಕಿನಲ್ಲಿ ಚತುರ್ಗೃಹೀತ ಆಜ್ಯವನ್ನು ಹಾಕಿಕೊಂಡು, ವೇತ್ಥಾ ಹಿ....., ಎಂಬ ಪುರೋನುವಾಕ್ಯಾ ಮಂತ್ರದಮೂಲಕವಾಗಿ, ಆ ದೇವಾನಾಂ....., ಎಂಬ ಯಾಜ್ಯಾ ಮಂತ್ರದಿಂದ ಆಹವನೀಯದಲ್ಲಿ ಹೋಮಿಸಬೇಕು । ಇದರ ಉದ್ದೇಶತ್ಯಾಗವು ಅಗ್ನಯೇ ಪಥಿಕೃತ ಇದಂ ನಮಮ ಎಂದು । ನಂತರ ಮತ್ತೆ 4 ಸಲ ತುಪ್ಪವನ್ನು ಸ್ರುಕ್ಕಿನಲ್ಲಿ(ಜುಹು) ಸ್ವೀಕರಿಸಿ, ವೈಶ್ವಾನರೋ ಅಜಜನತ್....., ಎಂಬ ಪುರೋನುವಾಕ್ಯಾ ಮಂತ್ರದ ಮೂಲಕ, ಪೃಷ್ಟೋದಿವಿ....., ಎಂಬ ಯಾಜ್ಯಾ ಮಂತ್ರದಿಂದ ಹೋಮಿಸಬೇಕು । ಅಗ್ನಯೇ ವೈಶ್ವಾನರಾಯೇದಂ ನಮಮ ಎಂದು ಉದ್ದೇಶತ್ಯಾಗ । ನಂತರ ಆಹವನೀಯಾಗ್ನಿಯನ್ನು ಬಿಡಬೇಕು ॥

ಯದಿ ಪೂರ್ವಪಕ್ಷೇ ಮರಣಂ ಶಂಕೇತ ತದಾ ಸಮನಂತರಮತಿಪನ್ನ ದರ್ಶಪ್ರಧಾನ ದೇವತಾಭ್ಯಃ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ, ಆಹವನೀಯಂ ವಿಹೃತ್ಯ ಚತುರ್ಗೃಹೀತೇನ । ಅಗ್ನಿರ್ಮೂರ್ಧಾ..... ಜಿನ್ವತೋಮ್ । ಭುವೋ ಯಜ್ಞಸ್ಯ.....ಹವ್ಯವಾಹಗ್ಂ ಸ್ವಾಹಾ । ಅಗ್ನಯ ಇದಂ । ಪುನಶ್ಚತುರ್ಗೃಹೀತೇನ, ಇಂದ್ರಾಗ್ನೀ ಅವಸಾಗತಂ..... ಈಶಯು । ಗೀರ್ಭಿರ್ವಿಪ್ರಃ.....ದೇಷ್ಣೇ ಸ್ವಾಹಾ । ಇಂದ್ರಾಗ್ನಿಭ್ಯಾಮಿದಂ । ಇತ್ಯಸೋಮಯಾಜಿನಃ ಇಂದ್ರಮಹೇಂದ್ರ ವಾ ಸೋಮಯಾಜಿನಃ ॥

ಒಂದುವೇಳೆ, ಶುಕ್ಲಪಕ್ಷದಲ್ಲಿ ಮರಣಸಂಶಯವಾದರೆ, ಆಗ ಸಮನಂತರಂ ಎಂಬುದೇ ಮುಂತಾಗಿ ಸಂಕಲ್ಪಿಸಿ, ಅತಿಕ್ರಾಂತ ದರ್ಶಪ್ರಧಾನದೇವತೆಗಳಿಗೆ ಪೂರ್ಣಾಹುತಿಯನ್ನು ಮಾಡಬೇಕು । ಆಹವನೀಯವನ್ನು ವಿಹರಣ ಮಾಡಿಕೊಂಡು, 4 ಸಲ ಆಜ್ಯವನ್ನು ಜುಹುವಿನಲ್ಲಿ ಸ್ವೀಕರಿಸಿ, **ಅಗ್ನಿರ್ಮೂರ್ಧಾ.....**, ಎಂಬ **ಪುರೋನುವಾಕ್ಯದ** ಮೂಲಕವಾಗಿ **ಭುವೋಯಜ್ಞಸ್ಯ.....**, ಎಂಬ **ಯಾಜ್ಯಾಮಂತ್ರದಿಂದ** ಹೋಮಿಸಬೇಕು । ಅಗ್ನಯ ಇದಂ ನಮಮ ಎಂಬುದು ಇದರ ಉದ್ದೇಶತ್ಯಾಗ। ನಂತರ ಮತ್ತೇ 4 ಸಲ ತುಪ್ಪವನ್ನು ಸ್ವೀಕರಿಸಿ, ಇಂದ್ರಾಗ್ನೀ..., ಎಂಬ **ಪುರೋನುವಾಕ್ಯಾ** ಮಂತ್ರದ ಮೂಲಕ, **ಗೀರ್ಭಿರ್ವಿಪ್ರಾ.....**, ಎಂಬ **ಯಾಜ್ಯಾ** ಮಂತ್ರದಿಂದ ಇಂದ್ರಾಗ್ನಿಗಳಿಗೆ ಹೋಮಿಸಬೇಕು, ಸೋಮಯಾಜಿಗಳಲ್ಲದವರು । ಸೋಮಯಾಜಿಗಳಾದರೋ, ಇಂದ್ರ–ಮಹೇಂದ್ರರಿಗೆ ಹೋಮಿಸಬೇಕು ॥

ಪುನಶ್ಚತುರ್ಗೃಹೀತೇನ, ಇಂದ್ರಸಾನಸಿ..... ಭರೋಮ್ । ಪ್ರಸಸಾಹಿಷೇ..... ರೇವತೀನಾಗ್ ಸ್ವಾಹಾ । ಇಂದ್ರಾಯೇದಂ । ಇತೀಂದ್ರಯಾಜಿನಃ । ಚತುರ್ಗೃಹೀತೇನ, ಮಹಾಗ್ಂ ಇಂದ್ರೋ ಯ ಓಜಸಾ..... ವಾವೃಧೋಮ್ । ಭುವನಮಿಂದ್ರಚರ್ಷಣೇ ಸ್ವಾಹಾ । ಮಹೇಂದ್ರಾಯೇದಂ ನಮಮ । ಇತಿ ಮಹೇಂದ್ರಯಾಜಿನಃ । ತಮಗ್ನಿಂ ಪರಿತ್ಯಜ್ಯ ॥

ಹೇಗೆಂದರೆ, ಮತ್ತೆ 4 ಸಲ ತುಪ್ಪವನ್ನು ಸ್ವೀಕರಿಸಿ, **ಇಂದ್ರಸಾನಸಿ.....**, ಎಂಬ **ಪುರೋನುವಾಕ್ಯಾ** ಮಂತ್ರದ ಮೂಲಕ, **ಪ್ರಸಸಾಹಿಷೇ.....**, ಎಂಬ **ಯಾಜ್ಯಾ** ಮಂತ್ರದಿಂದ ಇಂದ್ರಯಾಜಿಗಳು ಇಂದ್ರನಿಗೆ ಹೋಮಿಸಬೇಕು । ಮಹೇಂದ್ರಯಾಜಿಗಳಾದರೋ, 4 ಸಲ ತುಪ್ಪವನ್ನು ಸ್ವೀಕರಿಸಿ, **ಮಹಾಗ್ಂ ಇಂದ್ರಃ.....**, ಎಂಬ **ಪುರೋನುವಾಕ್ಯಾ** ಮಂತ್ರದ ಮೂಲಕ **ಭುವನಮಿಂದ್ರ.....**, ಎಂಬ ಯಾಜ್ಯಾ ಮಂತ್ರದ ಮೂಲಕವಾಗಿ ಮಹೇಂದ್ರನಿಗೆ ಹೋಮಿಸಬೇಕು । ನಂತರ ಆಹವನೀಯಾಗ್ನಿಯನ್ನು ಬಿಡಬೇಕು ॥

ಯದಪರಪಕ್ಷೇ ಮರಣಂ ಶಂಕೇತ ತದಾ ಸಮನಂತರಾತಿಪನ್ನ ಪೂರ್ಣಮಾಸ ಪ್ರಧಾನ ದೇವತಾಭ್ಯಃ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ । ಆಹವನೀಯಂ ವಿಹೃತ್ಯ, ಚತುರ್ಗೃಹೀತೇನ, ಅಗ್ನಿರ್ಮೂರ್ಧಾ..... ಜಿನ್ವತೋಮ್ । ಭುವೋ ಯಜ್ಞಸ್ಯ..... ವಾಹಂ ಸ್ವಾಹಾ । ಆಹವನೀಯೇ ಜುಹೋತಿ । ಅಗ್ನಯ ಇದಂ । ಪುನಃ ಚತುರ್ಗೃಹೀತೇನ, ಇದಂ ವಿಷ್ಣುಃ..... ಸುರೋಮ್ । ತ್ರಿರ್ದೇವೀಪೃಥಿವೀ..... ಸ್ಥವಿರಸ್ಯ ನಾಮ ಸ್ವಾಹಾ । ವಿಷ್ಣವ ಇದಂ । ಇತಿ ವಿಷ್ಣುಯಾಗ ಪಕ್ಷೇ ॥

ಒಂದು ವೇಳೆ ಕೃಷ್ಣಪಕ್ಷದಲ್ಲಿ ಮರಣಶಂಕೆಯಾದರೆ, ಆಗ ತದನಂತರ ಅತಿಕ್ರಾಂತವಾದ ಪೂರ್ಣಮಾಸ ಪ್ರಧಾನದೇವತೆಗಳಿಗೆ ಸಮನಂತರಾತಿಪನ್ನ ಎಂದು ಮೇಲೆಹೇಳಿದಂತೆ ಸಂಕಲ್ಪಮಾಡಿ । ಆಹವನೀಯವನ್ನು ಬೇರೆಯಾಗಿಟ್ಟುಕೊಂಡು, 4 ಸಲ ತುಪ್ಪವನ್ನು ಸ್ವೀಕರಿಸಿ, ಅಗ್ನಿರ್ಮೂರ್ಧಾ....., ಎಂಬ ಪುರೋನುವಾಕ್ಯಾ ಮಂತ್ರದ ಮೂಲಕ, ಭುವೋ ಯಜ್ಞಸ್ಯ....., ಎಂಬ ಯಾಜ್ಯಾ ಮಂತ್ರದಿಂದ ಅಗ್ನಿಗೆ ಆಹವನೀಯದಲ್ಲಿ ಹೋಮಿಸಬೇಕು । ನಂತರ ಇದೇರೀತಿ ಇದಂವಿಷ್ಣುಃ....., ಎಂಬ ಪುರೋನುವಾಕ್ಯೆ ಮತ್ತು ತ್ರಿರ್ದೇವೀ....., ಎಂಬ ಯಾಜ್ಯಾ ಮಂತ್ರದಿಂದ ವಿಷ್ಣುವಿಗೆ ಹೋಮಿಸಬೇಕು, ವಿಷ್ಣುಯಾಗ ಪಕ್ಷದಲ್ಲಿ ॥

ಅಗ್ನಿಷ್ಟೋಮಯಾಗ ಪಕ್ಷೇ, ಪ್ರಾಜಾಪತ್ಯಯಾಗ ಪಕ್ಷೇ ಚ – ತತ್ ಪುರೋನುವಾಕ್ಯಾಂ ಅನೂಚ್ಯ ತತ್ ತದ್ಯಾಜ್ಯಯಾ ಜುಹುಯಾತ್ । ಪುನಶ್ಚತುರ್ಗೃಹೀತೇನ, ಅಗ್ನೀಷೋಮಾ ಸ ವೇದಸಾ..... ಬಭೂವಧೋಮ್ । ಯುವಮೇತಾನಿ.....ಗೃಭೀತಾಗ್ ಸ್ವಾಹಾ । ಅಗ್ನೀಷೋಮಾಭ್ಯಾಂ ಇದಂ । ನ ವೈಮೃಧಸ್ಯ ಪೂರ್ಣಾಹುತಿಃ ।

ಅಂಗತ್ವಾತ್ । ಅಸೋಮಯಾಜಿನಃ ಅಗ್ನೀಷೋಮೀಯ ಯಾಗೋ ನ ವಿದ್ಯತೇ । ತಮಗ್ನಿಂ ಪರಿತ್ಯಜ್ಯ । ಆಗಾಮಿ ದರ್ಶದೇವತಾಭ್ಯಃ ಪೂರ್ಣಾಹುತಿಂ ಹೋಷ್ಯಾಮೀತಿ ಸಂಕಲ್ಪ್ಯ । ಪೂರ್ವವತ್ ಪೂರ್ಣಾಹುತೀರ್ಜುಹುಯಾತ್ ॥

ಅಗ್ನಿಷ್ಟೋಮಯಾಗ ಮತ್ತು ಪ್ರಾಜಾಪತ್ಯಯಾಗ ಪಕ್ಷದಲ್ಲಿ, ಆಯಾಯಾ ದೇವತೆಗಳ ಪುರೋನುವಾಕ್ಯೆಗಳನ್ನು ಹೇಳಿಕೊಂಡು, ಆಯಾಯಾ ದೇವತೆಗಳ ಯಾಜ್ಯಾ ಮಂತ್ರಗಳಿಂದ ಈ ಹಿಂದಿನ ಕ್ರಮದಂತೆ ಅಗ್ನೀಷೋಮಾ....., ಎಂಬ ಪುರೋನುವಾಕ್ಯಾ ಮಂತ್ರದ ಮೂಲಕ, ಯುವಮೇತಾನಿ....., ಎಂಬ ಯಾಜ್ಯಾ ಮಂತ್ರದಿಂದ ಅಗ್ನೀಷೋಮ ದೇವತೆಗಳಿಗೆ ಹೋಮಿಸಬೇಕು । ಇದು ಅಗ್ನೀಷೋಮದೇವತೆಗಳಿಗೆ ಪೂರ್ಣಾಹುತಿಯೇ ಹೊರತು, ವೈಮೃಧದೇವತೆಗೆ ಪೂರ್ಣಾಹುತಿಯಲ್ಲ । ಅಂಗವಾಗಿರುವುದರಿಂದ । ಸೋಮಯಾಜಿಗಳಲ್ಲದವರಿಗೆ, ಅಗ್ನೀಷೋಮೀಯ ಯಾಗವು ಇರುವುದಿಲ್ಲ । ಆ ಆಹವನೀಯಾಗ್ನಿಯನ್ನು ಬಿಡಬೇಕು । ನಂತರ ಮುಂದೆಬರುವ ದರ್ಶದೇವತೆಗಳಿಗೆ 'ಆಗಾಮಿ ದರ್ಶದೇವತಾಭ್ಯಃ....., ಎಂಬುದೇ ಮುಂತಾಗಿ ಸಂಕಲ್ಪಿಸಿ' ಹಿಂದಿನಂತೆಯೇ ಪೂರ್ಣಾಹುತಿಯನ್ನು ಮಾಡಬೇಕು ॥

28. ಪಿಂಡ ಪಿತೃಯಜ್ಞ ಲೋಪೇ

(ಆಹಿತಾಗ್ನಿಗಳಿಗೆ=ಅಗ್ನಿಹೋತ್ರಿಗಳಿಗೆ)

ಪಿಂಡಪಿತೃಯಜ್ಞ ಲೋಪ ಪ್ರಾಯಶ್ಚಿತ್ತಾರ್ಥಂ ಸಪ್ತಹೋತಾರಂ ಹೋಷ್ಯಾಮೀತಿ ಸಂಕಲ್ಪ್ಯ ಆಹವನೀಯಂ ವಿಹೃತ್ಯ । ಚತುರ್ಗೃಹೀತೇನ ಆಜ್ಯೇನ, ಮಹಾಹವಿರ್ಹೋತಾ..... ನಮಃ, ನಮಃ ಪೃಥಿವ್ಯೈ ಸ್ವಾಹಾ । ವಾಚಸ್ಪತಯೇ ಬ್ರಹ್ಮಣ ಇದಂ । ಅಗ್ನಿಂ ಪರಿತ್ಯಜ್ಯ । ಪ್ರಾಚೀನಾವೀತಿ, ಪಿಂಡ

ಪಿತೃಯಜ್ಞ ಪ್ರಧಾನ ದೇವತಾಭ್ಯಃ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ । ದಕ್ಷಿಣಾಗ್ನಿಂ ವಿಹೃತ್ಯ । ಉಪವೀತಿ, ದ್ವಾದಶಗೃಹೀತೇನ – ಸೋಮಾಯ ಪಿತೃಪೀತಾಯ ಸ್ವಧಾ ನಮಃ । ಇತಿ ದಕ್ಷಿಣಾಗ್ನೌ ಜುಹೋತಿ, ಸೋಮಾಯ ಪಿತೃಪೀತಾಯ ಇದಂ ನಮಮ ॥

ಪಿಂಡಪಿತೃಯಜ್ಞಲೋಪದ ಪ್ರಾಯಶ್ಚಿತ್ತಕ್ಕಾಗಿ, **ಪಿಂಡಪಿತೃಯಜ್ಞಲೋಪ.....**, ಇತ್ಯಾದಿ ಮೇಲಿನಂತೆ ಸಂಕಲ್ಪಿಸಿ ಆಹವನೀಯವನ್ನು ಇಟ್ಟುಕೊಂಡು । ಚತುರ್ಗೃಹೀತ ಆಜ್ಯದಿಂದ **ಮಹಾಹವಿರ್ ಹೋತಾ..... ಮತ್ತು ನಮಃ ಪೃಥಿವ್ಯೈಸ್ವಾಹಾ** ಎಂದು ಹೋಮಿಸಬೇಕು । ವಾಚಸ್ಪತಿ ಬ್ರಹ್ಮದೇವತೆಗೆ । ನಂತರ ಅಗ್ನಿಯನ್ನು ಬಿಟ್ಟು । ಮತ್ತೆ ಪ್ರಾಚೀನಾವೀತಿಯಲ್ಲಿ **ಪಿಂಡಪಿತೃಯಜ್ಞ ಪ್ರಧಾನ.....** ಇತ್ಯಾದಿ ಸಂಕಲ್ಪಿಸಿ । ದಕ್ಷಿಣಾಗ್ನಿಯನ್ನು ಇಟ್ಟುಕೊಂಡು । ಅದರಲ್ಲಿ ಉಪವೀತಿಯಲ್ಲಿ ದ್ವಾದಶಗೃಹೀತದಿಂದ **ಸೋಮಾಯ ಪಿತೃಪೀತಾಯ.....** ಎಂದು ಹೋಮಿಸಬೇಕು, ಪಿತೃಪೀತನಾದ ಸೋಮದೇವತೆಗೆ ॥

ಪುನಃ ದ್ವಾದಶ ಗೃಹೀತೇನ – ಯಮಾಯಾಂಗಿರಸ್ವತೇ ಪಿತೃಮತೇ ಸ್ವಧಾ ನಮಃ । ಯಮಾಯಾಂಗಿರಸ್ವತೇ ಪಿತೃಮತ ಇದಂ । ಪುನಃ ದ್ವಾದಶ ಗೃಹೀತೇನ – ಅಗ್ನಯೇ ಕವ್ಯವಾಹನಾಯ ಸ್ವಧಾ ನಮಃ । ಅಗ್ನಯೇ ಕವ್ಯವಾಹನಾಯ ಇದಂ । ಅಗ್ನಿಂ ಪರಿತ್ಯಜ್ಯ ॥

ಮತ್ತೆ, ದ್ವಾದಶಗೃಹೀತದಿಂದ, **ಯಮಾಯಾಂಗಿರಸ್ವತೇ.....**, ಎಂದು ದಕ್ಷಿಣಾಗ್ನಿಯಲ್ಲಿ, ಅಂಗಿರಸ್ವಂತನಾದ, ಪಿತೃಮಂತನಾದ ಯಮನಿಗೆ ಹೋಮಿಸಬೇಕು । ನಂತರ ಪುನಃ, ದ್ವಾದಶಗೃಹೀತದಿಂದ, **ಅಗ್ನಯೇ ಕವ್ಯವಾಹನಾಯ.....**, ಎಂದು, ಕವ್ಯವಾಹನಾದ ಅಗ್ನಿಗೆ ಹೋಮಿಸಬೇಕು । ನಂತರ ದಕ್ಷಿಣಾಗ್ನಿಯನ್ನು ಬಿಡಬೇಕು ॥

29. ಅಥ ಪಶೋಃ ಪೂರ್ಣಾಹುತಿಃ
(ಆಹಿತಾಗ್ನಿಗಳಿಗೆ ಮಾತ್ರ)

ಪಶ್ವಕರಣ ಪ್ರಾಯಶ್ಚಿತ್ತಾರ್ಥಂ ಪಥಿಕೃತ್ ವೈಶ್ವಾನರೇಷ್ಟ್ಯೋಃ ಸ್ಥಾನೇ ಪೂರ್ಣಾಹುತಿಂ ಹೋಷ್ಯಾಮೀತಿ ಸಂಕಲ್ಪ್ಯ, ಪೂರ್ವವತ್ ಜುಹುಯಾತ್। ಪೂರ್ಣಾಹುತಿ ದ್ವಯಂ ಕುರ್ಯಾತ್ । ಪಶ್ವಕರಣೇ ತದ್ದೇವತಾಂ ಪುರೋಡಾಶ ಮಾಮಿಕ್ಷಾಂ ವಾ ಪೂರ್ಣಾಹುತಿಂ ಕುರ್ಯಾತ್ । ಪಶು ಪ್ರಧಾನ ದೇವತಾಯೈ ಪೂರ್ಣಾಹುತಿಂ ಹೋಷ್ಯಾಮೀತಿ ಸಂಕಲ್ಪ್ಯ । ಆಹವನೀಯಂ ವಿಹೃತ್ಯ । ಚತುರ್ಗೃಹೀತೇನ, ಆವೃತ್ರಹಣಾ..... ಉತ್ತಮೇಭೋಂ । ಶುಚಿನ್ನುಸ್ತೋಮಂ.....ಧೇಷ್ಮಾಗ್ ಸ್ವಾಹಾ । ಇಂದ್ರಾಗ್ನಿಭ್ಯಾಮಿದಂ । ಪುರೋಡಾಶಾದಿ ಅಂಗಾಹುತಿತ್ವಾನ್ನಾತಿಪತ್ತಿಃ ॥

ಪಶುವಿನ ಆಲಂಬನೆಯನ್ನು ಮಾಡದಿದ್ದಾಗ(ಪಶುಬಂಧಾದಿಗಳನ್ನು), ಪ್ರಾಯಶ್ಚಿತ್ತಾರ್ಥವಾಗಿ, ಪಥಿಕೃತ್ ಮತ್ತು ವೈಶ್ವಾನರ ಇಷ್ಟಿಗಳ ಸ್ಥಾನದಲ್ಲಿ **ಪಶ್ವಕರಣೇ.....**, ಇತ್ಯಾದಿ ಸಂಕಲ್ಪವನ್ನು ಮಾಡಿ, ಹಿಂದಿನಂತೆ ಹೋಮವನ್ನು ಮಾಡಬೇಕು । ಇಲ್ಲಿ 2 ಪೂರ್ಣಾಹುತಿಗಳನ್ನು ಮಾಡಬೇಕು । ಹೇಗೆಂದರೆ, ಮೊದಲ ಪೂರ್ಣಾಹುತಿಯನ್ನು ಪಶುವನ್ನು ಮಾಡದೇಇದ್ದಕ್ಕೆ, ಆ ದೇವತೆಯನ್ನು ಕುರಿತು, ಪುರೋಡಾಶದಿಂದ ಅಥವಾ ಆಮಿಕ್ಷೆಯಿಂದ ಮಾಡಬೇಕು । ಎರಡನೇ ಪೂರ್ಣಾಹುತಿಯನ್ನು ಪಶುಪ್ರಧಾನ ದೇವತೆಗೆ, **ಪಶುಪ್ರಧಾನ ದೇವತಾಯೈ.....**, ಎಂದು ಸಂಕಲ್ಪಿಸಿ । ಆಹವನೀಯಾಗ್ನಿಯನ್ನು ಇಟ್ಟುಕೊಂಡು, ಚತುರ್ಗೃಹೀತಾಜ್ಯದಿಂದ **ಆವೃತ್ರಹಣಾ.....**, ಇತ್ಯಾದಿ **ಪುರೋನುವಾಕ್ಯೆಯ** ಮೂಲಕ **ಶುಚಿನ್ನು ಸ್ತೋಮಂ.....**, ಎಂದು **ಯಾಜ್ಯೆ**ಯಿಂದ ಹೋಮಿಸಬೇಕು । ಇದಕ್ಕೆ ಇಂದ್ರಾಗ್ನಿಗಳೇ ದೇವತೆಗಳು । ಇಲ್ಲಿ ಪುರೋಡಾಶಾದಿಗಳು ಅಂಗಾಹುತಿಗಳಾಗಿರುವುದರಿಂದ ಅದರ ಲೋಪದೋಷವು(ಅತಿಕ್ರಾಂತ ದೋಷ) ಬರುವುದಿಲ್ಲ ॥

30. ಅಥ ಆಗ್ರಯಣ ಲೋಪ ಪ್ರಾಯಶ್ಚಿತ್ತಮ್ (ಆಹಿತಾಗ್ನಿಗಳಿಗೆ ಮಾತ್ರ)

ಆಗ್ರಯಣ ಲೋಪ ಪ್ರಾಯಶ್ಚಿತ್ತಂ, ಪಥಿಕೃತ್ ವೈಶ್ವಾನರೇಷ್ಟ್ಯೇಃ ಸ್ಥಾನೇ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ । ಪೂರ್ವವಜ್ಜುಹುಯಾತ್ । ಆಗ್ರಯಣಂ ಅಕೃತ್ವಾ ನವಾನ್ನಪ್ರಾಶನ ನಿಮಿತ್ತ ವೈಶ್ವಾನರೇಷ್ಟ್ಯೆ ಸ್ಥಾನೇ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ । ಪೂರ್ವವಜ್ಜುಹುಯಾತ್ । ಆಗ್ರಯಣ ಪ್ರಧಾನ ದೇವತಾಭ್ಯಃ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ ॥

ಆಗ್ರಯಣಲೋಪಪ್ರಾಯಶ್ಚಿತ್ತಕ್ಕಾಗಿ, **ಆಗ್ರಯಣ ಪ್ರಾಯಶ್ಚಿತ್ತಂ....,** ಎಂದು ಸಂಕಲ್ಪವನ್ನು ಮಾಡಿ । ಹಿಂದಿನಂತೆ ಹೋಮಿಸಬೇಕು । ನಂತರ **ಆಗ್ರಯಣಮಕೃತ್ವಾ.....,** ಎಂದು ಸಂಕಲ್ಪಿಸಿ, ಹಿಂದಿನಂತೆ ಹೋಮಿಸಬೇಕು । ನಂತರ, **ಆಗ್ರಯಣಪ್ರಧಾನ ದೇವತಾಭ್ಯಃ.....,** ಎಂದು ಸಂಕಲ್ಪಿಸಿ ॥

ಆಹವನೀಯಂ ವಿಹೃತ್ಯ । ಆಗ್ರಯಣಸ್ಯಾಂಗದೇವ(ತಾ)ತ್ವಾತ್ ನಾಸ್ತಿ ಪೂರ್ಣಾಹುತಿಃ । ಚತುರ್ಗೃಹೀತೇನ, ಇಂದ್ರಾಗ್ನೀ ಅವಸಾಗತಂ..... ಈಶತೋಮ್ । ಗೀರ್ಭಿರ್ವಿಪ್ರಃ..... ದೇಷ್ಣೇ ಸ್ವಾಹಾ । ಆಹವನೀಯೇ ಜುಹೋತಿ । ಇಂದ್ರಾಗ್ನಿಭ್ಯಾಮಿದಂ ॥

ಆಹವನೀಯವನ್ನು ಇಟ್ಟುಕೊಂಡು । (ಆಗ್ರಯಣವು ಅಂಗದೇವತೆಯಾಗಿ ಇರುವುದರಿಂದ ಪೂರ್ಣಾಹುತಿಯು ಇಲ್ಲ ।) ಚತುರ್ಗೃಹೀತ ಆಜ್ಯದಿಂದ, **ಇಂದ್ರಾಗ್ನೀ ಅವಸಾಗತಮ್.....,** ಎಂಬ ಪುರೋನುವಾಕ್ಯೆಯ ಮೂಲಕ, **ಗೀರ್ಭಿರ್ವಿಪ್ರಃ....,** ಎಂದು ಯಾಜ್ಯೆಯಿಂದ ಆಹವನೀಯದಲ್ಲಿ ಹೋಮಿಸಬೇಕು । ಇದಕ್ಕೆ ಇಂದ್ರಾಗ್ನಿಗಳೇ ದೇವತೆ ॥

ಪುನಶ್ಚತುರ್ಗೃಹೀತೇನ । ವಿಶ್ವೇದೇವಾಸ ಆಗತ..... ನಿಷೀದತೋಂ । ಏಕೇಚಜ್ಞಾಮಹಿನಃ... ದೇವಾಸ್ಸ್ವಾಹಾ । ವಿಶ್ವೇಭ್ಯೋ ದೇವೇಭ್ಯ ಇದಂ ॥

ಪುನಶ್ಚತುರ್ಗೃಹೀತೇನ – ಸೋಮಯಾಸ್ತೇ ಮಯೋಭುವಃ..... ಅವಿತಾಭವೋಮ್ । ಯಾತೇ ಧಾಮಾನಿ..... ಗೃಭಾಯ ಸ್ವಾಹಾ । ಸೋಮಾಯೇದಂ ॥

ಪುನಶ್ಚತುರ್ಗೃಹೀತೇನ – ಮಹೀದ್ಯೌಃ ಪೃಥಿವೀ..... ಮಭಿರೋಮ್ । ಪ್ರಪೂರ್ವಜೇ..... ವರೂಥಗ್ಂ ಸ್ವಾಹಾ । ದ್ಯಾವಾಪೃಥಿವೀಭ್ಯಾಮಿದಂ । ತಮಗ್ನಿಂ ಪರಿತ್ಯಜ್ಯ । ಏವಂ ಸರ್ವಾಸ್ವಾಪತ್ಸು ಇತಿ ವಚನಾತ್ ॥

ಮತ್ತೆ, ಚತುರ್ಗೃಹೀತಾಜ್ಯದಿಂದ, **ವಿಶ್ವೇದೇವಾಸ ಆಗತ.....**, ಎಂಬ **ಪುರೋನುವಾಕ್ಯೆಯಿಂದ, ಏಕೇಚಜ್ಞಾ ಮಹಿನಃ.....**, ಎಂದು ಯಾಜ್ಯೆಯಿಂದ ವಿಶ್ವೇದೇವತೆಗಳಿಗೆ ಹೋಮಿಸಬೇಕು ॥

ಮತ್ತೇ ಮೇಲಿನಂತೆ, **ಸೋಮಾಯಾಸ್ತೇ ಮಯೋಭುವಃ.....**, ಮತ್ತು **ಯಾತೇ ಧಾಮಾನಿ.....**, ಎಂದು ಪುರೋನುವಾಕ್ಯೆ, ಯಾಜ್ಯೆಯ ಮೂಲಕವಾಗಿ ಸೋಮನಿಗೆ ಹೋಮಿಸಬೇಕು ॥

ಮತ್ತೆ, ಮೇಲಿನಂತೆಯೇ, **ಮಹೀದ್ಯೌಃ ಪೃಥಿವೀ..... ಮತ್ತು ಪ್ರಪೂರ್ವಜೇ.....**, ಎಂದು ಪುರೋನುವಾಕ್ಯಾ ಯಾಜ್ಯೆಯ ಮೂಲಕ ದ್ಯಾವಾಪೃಥಿವೀದೇವತೆಗೆ ಹೋಮಿಸಬೇಕು । ನಂತರ ಆ ಅಗ್ನಿಯನ್ನು ಬಿಡಬೇಕು । ಹೀಗೆ ಎಲ್ಲಾ ಆಪತ್ತಿನಲ್ಲಿಯೂ ಮಾಡಬೇಕೆಂದು ವಚನವಿರುವುದರಿಂದ ಆಪತ್ತಿನಲ್ಲಿ ಈ ಕ್ರಮವನ್ನು ಅನುಸರಿಸಬೇಕು ॥

31. ಅಥ ನಕ್ಷತ್ರೇಷ್ಟಿ ಲೋಪಃ
(ಆಹಿತಾಗ್ನಿ=ಅಗ್ನಿಹೋತ್ರಿಗಳಿಗೆ ಮಾತ್ರ)

ಏವಮಾರಬ್ಧಾನಾಂ ನಕ್ಷತ್ರೇಷ್ಟಿನಾಂ ದಿವಶ್ಯೇನೀನಾಂ ಅಪಾಘಾನಾಂತು ರಾಯಣೇಷ್ಟ್ಯಾದೀನಾಂ ಮಧ್ಯೇ ಮರಣ ಶಂಕಾಯಾಂ ಅವಶಿಷ್ಟೇಷ್ಟಿ ಪ್ರಧಾನದೇವತಾಭ್ಯಃ ಚತುರ್ಗೃಹೀತೇನ ಆಜ್ಯೇನ ಏಕೈಕಸ್ಯೈ ಪ್ರಧಾನ ದೇವತಾಯೈ ತತ್ತತು ಪುರೋನುವಾಕ್ಯಾಂ ಅನೂಚ್ಯ ತತ್ತದ್ಯಾಜ್ಯಯಾ ಜುಹುಯಾತ್ ॥

ಹೀಗೆ, ಆರಂಭಿಸಿದ ನಕ್ಷತ್ರೇಷ್ಟಿಗಳಿಗೆ, ದಿವಶ್ಯೇನಿಗಳಿಗೆ, ಅಪಾಘಾ ಹಾಗೂ, ರಾಯಣೇಷ್ಟಿ ಕರ್ಮಗಳ, ಮಧ್ಯದಲ್ಲಿ ಮರಣ ಶಂಕೆಯುಂಟಾದರೆ, ಇನ್ನು ಬೇರೇ ಇಷ್ಟಿಗಳ ಮಧ್ಯೆ ಮರಣ ಶಂಕೆಯುಂಟಾದರೂ ಸಹ ಆಯಾಯಾ ಪ್ರಧಾನದೇವತೆಗಳಿಗೆ ಚತುರ್ಗೃಹೀತಾಜ್ಯದಿಂದ ಅದರದರ ಪುರೋನುವಾಕ್ಯೆ ಮತ್ತು ಯಾಜ್ಯ ಮಂತ್ರಗಳನ್ನು ಹೇಳಿ, ಪ್ರತ್ಯೇಕವಾಗಿ ಹೋಮಮಾಡಬೇಕು ॥

32. ಅಥ ಚಾತುರ್ಮಾಸ್ಯ ಲೋಪ ಪೂರಣಂ
(ಆಹಿತಾಗ್ನಿಗಳಿಗೆ ಮಾತ್ರ)

ಅಥ ಚಾತುರ್ಮಾಸ್ಯ ಮಧ್ಯೇ ವೈಶ್ವದೇವ ಪ್ರಭೃತಿ ಪರ್ವ ಚತುಷ್ಟಯ ಸಮಾಪ್ತೇಃಪ್ರಾಕ್ ಚಾತುರ್ಮಾಸ್ಯ ಮಧ್ಯೇ ತತ್ರ ಮರಣ ಸಂಶಯೇ ಇಷ್ಟ್ಯಾದ್ಯಭಾವೇ ಪ್ರಧಾನದೇವತಾಭ್ಯಃ ಚತುರ್ಗೃಹೀತೇನ ತತ್ತತ್ಪುರೋನುವಾಕ್ಯಾಮನೂಚ್ಯ ತತ್ತದ್ಯಾಜ್ಯಯಾ ಜುಹುಯಾತ್ । ವೈಶ್ವದೇವ ಪ್ರಭೃತಿ ಉತ್ತರಕಾಲಮಪರಪಕ್ಷೇ ಮರಣಸಂಶಯೇ

ಪೂರ್ವವದೇವ ಸಾಯಂ ಪ್ರಾತರಾಹುತಿಭಿರೇನಂ ಪೂರ್ವಪಕ್ಷಂ ನೀತ್ವಾ ದರ್ಶಪೂರ್ಣಮಾಸಾಭ್ಯಾಂ ಚೇಷ್ಟ್ವಾ ಅವಶಿಷ್ಟ ಪರ್ವಣ್ಯಾನೀಯ ಗಣಯಿತ್ವಾ ಪ್ರತ್ಯಾಮ್ನಾಯ ರೂಪೇಣ ಕುರ್ಯಾತ್ । ಪ್ರತಿ ಪೂರ್ವಪಕ್ಷೇ ಪ್ರತ್ಯಾಮ್ನಾಯ ದರ್ಶಪೂರ್ಣಮಾಸಾ ಸಂಭವೇ ಪೂರ್ವವತ್ ಪ್ರಧಾನ ದೇವತಾಭ್ಯಃ ಚತುರ್ಗೃಹೀತೇನೇತ್ಯಾದಿ ಸರ್ವಂ ಪೂರ್ವವತ್ ॥

ಈಗ ಚಾತುರ್ಮಾಸ್ಯ ಯಾಗದ ಮಧ್ಯದಲ್ಲಿ ವೈಶ್ವದೇವದಿಂದ ಆರಂಭಿಸಿ, ಪರ್ವಚತುಷ್ಟಯವು ಸಮಾಪ್ತಿಯಾಗುವುದಕ್ಕಿಂತ ಮುಂಚೆ ಮಧ್ಯದಲ್ಲಿಯೇ ಮರಣಸಂಶಯ ಉಂಟಾದರೆ, ಆಗ ಆಯಾಯಾ ಇಷ್ಟಿಗಳ ಅಭಾವವು ಪ್ರಾಪ್ತವಾಗಲಾಗಿ(ಲೋಪವು) ಆಯಾಯಾ ಪ್ರಧಾನ ದೇವತೆಗಳಿಗೆ ಚತುರ್ಗೃಹೀತಾಜ್ಯದಿಂದ ಪ್ರತ್ಯೇಕವಾಗಿ ಆಯಾಯಾ ಪುರೋನುವಾಕ್ಯ – ಯಾಜ್ಯೆಗಳಿಂದ ಹೋಮಿಸಬೇಕು । ವೈಶ್ವದೇವದಿಂದ ಆರಂಭಿಸಿ, ಮುಂದಿನ ಕಾಲವಾದ ಕೃಷ್ಣಪಕ್ಷದಲ್ಲಿ ಮರಣಸಂಶಯವು ಉಂಟಾದರೆ, ಕೃಷ್ಣಪಕ್ಷದ ಪ್ರಾರಂಭದ ಹಿಂದಿನ ಸಾಯಂಕಾಲವೇ ಬೆಳಗಿನ ಆಹುತಿಗಳನ್ನು ಕೊಟ್ಟು, ಪೂರ್ವಪಕ್ಷಕ್ಕೆ ಆ ಆಹುತಿಗಳು ಕೊಟ್ಟಂತೆ ಮಾಡಿಕೊಂಡು, ಆಗಲೇ ದರ್ಶಪೂರ್ಣಮಾಸ ಇಷ್ಟಿಗಳನ್ನು ಮಾಡಿ, ಉಳಿದ ಪರ್ವಗಳನ್ನು (ಆ ವರ್ಷದ ದರ್ಶಪೂರ್ಣಮಾಸಗಳನ್ನು) ಲೆಕ್ಕಮಾಡಿ, ಅದರ ಪ್ರತ್ಯಾಮ್ನಾಯ ರೂಪದಿಂದ ಈ ದರ್ಶಪೂರ್ಣಮಾಸೇಷ್ಟಿಯನ್ನು ಮಾಡಬೇಕು । ಪ್ರತಿ ಪೂರ್ವಪಕ್ಷದಲ್ಲಿ (ಶುಕ್ಲ) ಪ್ರತ್ಯಾಮ್ನಾಯ ದರ್ಶಪೂರ್ಣಮಾಸಗಳು ಸಂಭವಿಸುವುದಾದ್ದರಿಂದ ಹಿಂದಿನಂತೆ, ಪ್ರಧಾನದೇವತೆಗಳಿಗೆ **ಚತುರ್ಗೃಹೀತಾಜ್ಯದಿಂದ** ....., ಎಂಬಿತ್ಯಾದಿ ಎಲ್ಲವನ್ನೂ ಸಹ ಮಾಡಬೇಕು ॥

ಆಶ್ವಲಾಯನ ಸೂತ್ರೇಣ ಏಷಾಂ ಹೋತ್ರಂ ಕ್ರಿಯತೇ ತೇಷಾಂ ಪೂರ್ವೋಕ್ತಾಭಿಃ ಯಾಜ್ಯಾ ಪುರೋನುವಾಕ್ಯಾಭಿಃ ಪೂರ್ಣಾಹುತಿರ್ಹೋತವ್ಯಾ । ಏಷಾಂ ಆಪಸ್ತಂಬ ಸೂತ್ರೇಣ ಹೋತ್ರಂ

ಕ್ರಿಯತೇ ತೇಷಾಂ ತತ್ಸೂತ್ರೋಕ್ತಾಭಿಃ ಯಾಜ್ಯಾಪುರೋನುವಾಕ್ಯಾಭಿಃ ಪೂರ್ಣಾಹುತಿರ್ಹೋತವ್ಯಾ ಇತಿ ವ್ಯವಸ್ಥಾ ॥

ಆಶ್ವಲಾಯನ ಸೂತ್ರದ ಕ್ರಮದಿಂದ, ಇವುಗಳ ಹೋಮವು ಮಾಡಲ್ಪಡುತ್ತದೆ, ಅವುಗಳಿಗೆ ಹಿಂದೆ ಹೇಳಿದ ಯಾಜ್ಯಾ–ಪುರೋನುವಾಕ್ಯೆಗಳಿಂದ ಪೂರ್ಣಾಹುತಿಯು ಮಾಡಲ್ಪಡಬೇಕು । ಇವುಗಳಿಗೆ ಆಪಸ್ತಂಬಸೂತ್ರದ ಪ್ರಕಾರವಾಗಿ, ಹೋಮವು ಮಾಡಲ್ಪಡುತ್ತದೆ, ಅವುಗಳಿಗೆ ಆ ಆಪಸ್ತಂಬ ಸೂತ್ರದಲ್ಲಿ ಹೇಳಿದಂತಹ ಯಾಜ್ಯಾ–ಪುರೋನುವಾಕ್ಯಗಳಿಂದ ಪೂರ್ಣಾಹುತಿಯು ಮಾಡಲ್ಪಡಬೇಕು, ಹೀಗೆ ವ್ಯವಸ್ಥೆಯನ್ನು(ನಿಯಮ) ಮಾಡಿದ್ದಾರೆ ॥

33. ಇಷ್ಟಿಮಧ್ಯೇ ಮೃತಿಃ (ಆಹಿತಾಗ್ನಿಗಳಿಗೆ ಮಾತ್ರ)

ಇಷ್ಟಿಮಧ್ಯೇ ಹವಿರ್ನಿರ್ವಪಣಾತ್ ಪೂರ್ವಂ ತದೂರ್ಧ್ವಮಾಸನ್ನೇಷು ಹವಿಷ್ಸುವಾಮ್ರಿಯೇತ ಸರ್ವೇಭ್ಯಃ ಪ್ರಧಾನ ಹವಿರ್ಭ್ಯಃ ಜುಹ್ವಂ ಸರ್ವಮೇಕಸ್ಥಾನೇ ಗೃಹೀತ್ವಾ ಸರ್ವಾ ದೇವತಾಶ್ಚತುರ್ಥ್ಯಂ ತೇನ ಶಬ್ದೇನಾನೂಧೃತ್ಯ ಸ್ವಾಹಾಕಾರೇಣ ಜುಹೋತಿ । ಸರ್ವಾಂತೇ ಸ್ವಾಹಾಕಾರಃ । ಅಗ್ನಯೇ – ವಿಷ್ಣವೇ – ಅಗ್ನೀಷೋಮಾಭ್ಯಾಗ್ ಸ್ವಾಹೇತಿ ಪೌರ್ಣಮಾಸ್ಯಾಂ – ಅಗ್ನಯೇ – ವಿಷ್ಣವೇ – ಸ್ವಾಹೇತಿ ಅಸೋಮಯಾಜಿನಃ । ಅಮಾವಾಸ್ಯಾಂ ಯಾಂತು ಅಗ್ನಯೇ ಇಂದ್ರಾಗ್ನಿಭ್ಯಾಂ ಸ್ವಾಹೇತಿ ಅಸೋಮಯಾಜಿನಃ। ಅಗ್ನಯ – ಇಂದ್ರಾಯ ಸ್ವಾಹೇತಿ ಇಂದ್ರಯಾಜಿನಃ । ಅಗ್ನಯೇ ಮಹೇಂದ್ರಾಯ ಸ್ವಾಹೇತಿ ಮಹೇಂದ್ರಯಾಜಿನಃ ॥

ಇಷ್ಟಿಮಧ್ಯದಲ್ಲಿ, ಹವಿರ್ನಿರ್ವಾಪದ(ಭತ್ತವನ್ನು ಅಕ್ಕಿಯನ್ನಾಗಿ ಮಾಡಲು ಹಾಕಿಕೊಳ್ಳುವಿಕೆ) ಮೊದಲು ಅಥವಾ ಹವಿಸ್ಸನ್ನು ಆಸಾದನೆ ಮಾಡಿದಮೇಲೆ, ಯಜಮಾನನು ಮೃತಿಯನ್ನು ಹೊಂದಿದರೆ(ಸತ್ತರೆ), ಆಗ ಎಲ್ಲಾ ಪ್ರಧಾನಹವಿಸ್ಸುಗಳಿಂದ ಜುಹುವಿನಲ್ಲಿ ಒಂದೇಸ್ಥಾನದಲ್ಲಿ, ಒಂದೇಸಲ, ಸಂಪೂರ್ಣ ಅವದಾನಮಾಡಿಕೊಂಡು, ಎಲ್ಲಾ ಇಷ್ಟಿಪ್ರಧಾನ ದೇವತೆಗಳನ್ನೂ ಚತುರ್ಥೀವಿಭಕ್ತಿಯಿಂದ ಉದ್ಧರಣ ಮಾಡಿಕೊಂಡು, ಸ್ವಾಹಾಕಾರದಿಂದ ಹೋಮಿಸಬೇಕು । ಎಲ್ಲಾ ದೇವತೆಗಳ ಕೊನೆಗೆ ಒಂದುಸಲ ಸ್ವಾಹಾಕಾರವು । ಹೇಗೆಂದರೆ, ಅಗ್ನಯೇ – ವಿಷ್ಣವೇ – ಅಗ್ನೀಷೋಮಾಭ್ಯಾಂ ಸ್ವಾಹಾ ಎಂದು ಪೌರ್ಣಮಾಸ್ಯೇಷ್ಟಿಯಲ್ಲಿ । ಅಗ್ನಯೇ – ವಿಷ್ಣವೇ ಎಂದು ಸೋಮಯಾಜಿಗಳಲ್ಲದವರು । ಅಮಾವಾಸ್ಯೆಯ ಇಷ್ಟಿಯಲ್ಲಾದರೋ, ಅಗ್ನಯೇ – ಇಂದ್ರಾಗ್ನಿಭ್ಯಾಂ ಸ್ವಾಹಾ ಎಂದು ಸೋಮಯಾಜಿಗಳಲ್ಲದವರು । ಅಗ್ನಯೇ ಇಂದ್ರಾಯಸ್ವಾಹಾ ಎಂದು ಇಂದ್ರಯಾಜಿಗಳು । ಅಗ್ನಯೇ ಮಹೇಂದ್ರಾಯ ಸ್ವಾಹಾ ಎಂದು ಮಹೇಂದ್ರಯಾಜಿಗಳು ॥

ಅಥೈವೋದ್ದೇಶ ತ್ಯಾಗಃ – ಉತ್ತರೇದ್ಯುರನಿಷ್ಪನ್ನೇಷು ಹವಿಷ್ಷು ವಾ ಮ್ರಿಯೇತ ತೂಷ್ಣೀಂ ಉಪಚಾರೇಣ ಪ್ರಧಾನಹವಿಃ ಸಂಪಾದ್ಯ ಸರ್ವತಃ ಸಮವದಾಯ ಪೂರ್ವವಜ್ಜುಹುಯಾತ್ । ಪತ್ನ್ಯಾ ಅಪ್ಯೇವಂ ಸ್ವಾಮಿತ್ವಾ ವಿಶೇಷಾತ್ । ಉದೀಚ್ಯಾಂಗಸ್ಯ ಸರ್ವಸ್ಯ ನಿವೃತ್ತಿಃ ಪ್ರಧಾನಸ್ಯ ನಿಷ್ಪನ್ನತ್ವಾತ್ । ಕೇಚಿದಮಂತ್ರಕಂ ಸಮಾಪ್ನುವಂತಿ । ಇಷ್ಟಿವತ್ ಪಶುಬಂಧಾದಿಷು ಚ ॥

ನಂತರ, ದೇವ(ಉದ್ದೇಶ)ತ್ಯಾಗವು । ಮರುದಿನ ಹವಿಸ್ಸುಗಳು ಸಿದ್ಧವಾಗುವ ಮೊದಲೇ ಯಜಮಾನನು ಸತ್ತರೆ, ಆಗ ಅಮಂತ್ರಕವಾಗಿ ಉಪಚಾರರೂಪದಿಂದ ಪ್ರಧಾನಹವಿಸ್ಸನ್ನು ಮಾಡಿಕೊಂಡು, ಸಂಪೂರ್ಣ ಅವದಾನಮಾಡಿಕೊಂಡು, ಹಿಂದಿನಂತೆ ಹೋಮಿಸಬೇಕು । ಏಕೆಂದರೆ, ಪತ್ನಿಗೂಕೂಡ ಸ್ವಾಮಿತ್ವವು

(ಯಜಮಾನಿಕೆ) ಯಜಮಾನನಿಗೆ ಸಮನಾಗಿ ಇರುವುದರಿಂದ । ಇಷ್ಟಿಯ ಉತ್ತರಾಂಗವು ಇಲ್ಲ (ಉತ್ತರಾಂಗವನ್ನು ಮಾಡುವ ಅವಶ್ಯಕತೆ ಇಲ್ಲ) ಏಕೆಂದರೆ, ಪ್ರಧಾನ ಹೋಮವು ಆಗಿರುವುದರಿಂದ । ಆದರೆ ಕೆಲವರು ಅಮಂತ್ರಕವಾಗಿ ಉತ್ತರಾಂಗವನ್ನು ಸಮಾಪ್ತಿಗೊಳಿಸುತ್ತಾರೆ । ಹೀಗೆಯೇ ಇಷ್ಟಿಯಂತೆ ಪಶುಬಂಧಾದಿಗಳಲ್ಲೂ ಮಾಡಬೇಕು ॥

34. ಪುನರಾಧೇಯ ಕಾಲಾಃ

(ಆಹಿತಾಗ್ನಿಗಳಿಗೆ ಮಾತ್ರ)

ಕಾತ್ಯಾಯನಃ –

ಉತ್ಸರ್ಗೇಷ್ಟ್ಯ ಉತ್ಸನ್ನಾಗ್ನೇಃ ಪುನರಾಧೇಯ ಸಂಕಲ್ಪಿತ ಕಾಲಾತ್ ಪ್ರಾಕ್ ಮರಣ ಶಂಕಾಯಾಂ ಯದ್ಯಪಿ ನಾರ್ವಾಕ್ ತ್ರಿರಾತ್ರಾತ್ಪುನರಾಧೇಯಮ್ ॥

ತಥಾಪಿ ಅಗ್ನಿಭಿರ್ವಿನಾ ಮೃತಸ್ಯ ಸಂಸ್ಕಾರಂ ಕರ್ತುಮಶಕ್ಯತ್ವಾತ್ ಮರಣ ಸಂಶಯ ಏವ ತ್ರಿರಾತ್ರಾದರ್ವಾಗಪಿ ಪುನರಾಧೇಯಂ ಕಾರ್ಯಂ ॥

ಇಷ್ಟಿಗಳನ್ನು ಅಥವಾ ಅಗ್ನಿಯನ್ನು ಬಿಟ್ಟಿದ್ದರೆ, ಪುನರಾಧೇಯದ ಸಂಕಲ್ಪಿತವಾದ (ವಿಧಿಸಿದ) ಕಾಲಕ್ಕಿಂತ ಮುಂಚೆಯೇ ಮರಣಶಂಕೆಯುಂಟಾದರೆ, ಪುನರಾಧೇಯದ ಕಾಲಕ್ಕಿಂತ 3 ದಿವಸ ಮುಂಚೆಯೂ ಕೂಡ ಪುನರಾಧೇಯವನ್ನು ಮಾಡಬಾರದು (3 ದಿವಸಕ್ಕಿಂತ ಮುಂಚೆ ಪುನರಾಧೇಯವನ್ನು ಮಾಡಬಾರದು) ಎಂದು ಕಾತ್ಯಾಯನ ಮಹರ್ಷಿಗಳ ವಚನವಿದ್ದರೂ ಕೂಡ ॥

ಅಗ್ನಿಯಿಲ್ಲದೇ, ಸತ್ತವನ ಸಂಸ್ಕಾರವನ್ನು ಮಾಡುವುದಕ್ಕೆ ಅಶಕ್ಯವಾಗಿರುವುದರಿಂದ, ಮರಣಸಂಶಯದಲ್ಲಿ 3 ರಾತ್ರಿಗಳಿಗಿಂತ ಮುಂಚೆಯೂ ಕೂಡ ಪುನರಾಧೇಯವನ್ನು ಮಾಡಬಹುದು ॥

ತದಾಹ ತ್ರಿಕಾಂಡಿಃ –

ಉತ್ಸೃಜ್ಯ ಪುನರಾಧೇಯಂ ಸದ್ಯ ಏವಾರಭೇತ ವಾ ।
ಸದ್ಯಃ ಕಾಲಂ ವದಂತ್ಯೇಕೇ ಪುನರಾಧೇಯಮಾತುರೇ ॥

ಮ್ರಿಯಮಾಣಸ್ಯೇವಂ ನ ಯಜ್ಞಲೋಪೋ ಭವತೀತಿ ವಿಜ್ಞಾಯತ ಇತಿ ವಚನಾತ್ । ಏವಂ ಸರ್ವಾಸ್ವಾಪತ್ಸು ಇತಿ ವಚನಾಚ್ಚ । ಮರಣ ಸಂಶಯ ಏವ ಸೇಷ್ಟಿಕಂ ಪುನರಾಧೇಯಂ ಕೃತ್ವಾ ಕಾಲಾಪರಾಧದೋಷ ಪ್ರಾಯಶ್ಚಿತ್ತಾರ್ಥಂ ಸರ್ವ ಪ್ರಾಯಶ್ಚಿತ್ತಂ ಕೃತ್ವಾ ಸಾಯಂ ಅಗ್ನಿಹೋತ್ರಾದಿ ಕುರ್ಯಾತ್ ॥

ಅಗ್ನಿಯನ್ನು ಬಿಟ್ಟು, ಆ ದಿನವೇ ಪುನರಾಧೇಯವನ್ನು ಆರಂಭಿಸಬೇಕು ಎಂದು । ಸದ್ಯಸ್ಕಾಲ(ಆ ಕಾಲದಲ್ಲಿಯೇ)ವನ್ನು ಪುನರಾಧೇಯಕ್ಕೆ ಆಪತ್ಕಾಲದಲ್ಲಿ (ಮರಣ ಸಂಶಯ ಕಾಲದಲ್ಲಿ) ಕೆಲವರು ಹೇಳುತ್ತಾರೆ । ಏಕೆಂದರೆ, ಸಾಯುತ್ತಿರುವವನಿಗೆ ಈ ಮೇಲೆಹೇಳಿದ ರೀತಿಯಲ್ಲಿ ಯಜ್ಞಲೋಪವು ಉಂಟಾಗುವುದಿಲ್ಲ ಎಂದು ವಚನವಿರುವುದರಿಂದ । ಹೀಗೆಯೇ ಎಲ್ಲಾ ಆಪತ್ಕಾಲಗಳಲ್ಲೂ ಮಾಡಬೇಕು ಎಂದು ಈ ವಚನದಿಂದ ತಿಳಿದುಬರುತ್ತದೆ । ಮರಣಸಂಶಯ ಕಾಲದಲ್ಲಿ ಇಷ್ಟಿಸಹಿತವಾಗಿ ಪುನರಾಧೇಯವನ್ನು ಮಾಡಿ, "ಕಾಲಾಪರಾಧದೋಷ ಪ್ರಾಯಶ್ಚಿತ್ತಾರ್ಥಂ ಸರ್ವಪ್ರಾಯಶ್ಚಿತ್ತಂ ಕರಿಷ್ಯೇ" ಎಂದು ಕಾಲಾಪರಾಧದೋಷ ಪ್ರಾಯಶ್ಚಿತ್ತವನ್ನು ಮಾಡಿ, ಸಾಯಂ ಅಗ್ನಿಹೋತ್ರಾದಿಗಳನ್ನು ಮಾಡಬೇಕು ॥

ಯದಿ ಪೂರ್ವಪಕ್ಷೇ ಮರಣ ಶಂಕೇತ ಸೇಷ್ಟಿಕಂ ಪುನರಾಧೇಯಂ ಕೃತ್ವಾ ಕಾಲಾಪರಾಧ ದೋಷ ಪ್ರಾಯಶ್ಚಿತ್ತಂ ಕೃತ್ವಾ ಪ್ರಾತರಗ್ನಿಹೋತ್ರಮಕೃತ್ವೈವ ಸಮನಂತರಾತಿಪನ್ನ ದರ್ಶಯಾಗಂ ಕೃತ್ವಾ ಸಾಯಮಗ್ನಿಹೋತ್ರಾದಿ ಕುರ್ಯಾತ್ ।

ಒಂದುವೇಳೆ, ಶುಕ್ಲಪಕ್ಷದಲ್ಲಿ ಮರಣ ಸಂಶಯವು ಬಂದರೆ – ಇಷ್ಟಿಸಹಿತವಾಗಿ ಪುನರಾಧೇಯವನ್ನು ಮಾಡಿ ಮೇಲೆ ಹೇಳಿದ ರೀತಿಯಲ್ಲಿ ಕಾಲಾಪರಾಧದೋಷ ಪ್ರಾಯಶ್ಚಿತ್ತವನ್ನು ಮಾಡಿ, ಪ್ರಾತರಗ್ನಿಹೋತ್ರವನ್ನು ಮಾಡದೆಯೇ, ನಂತರ ಬರುವಂತಹ ದರ್ಶ(ಅಮಾವಾಸ್ಯೆಯಇಷ್ಟಿ)ಯಾಗವನ್ನು ಮಾಡಿ ಸಾಯಮಗ್ನಿಹೋತ್ರಾದಿಗಳನ್ನು ಮಾಡಬೇಕು ।

ಯದ್ಯಪರಪಕ್ಷೇ ಮರಣಂಶಂಕೇತ ಸೇಷ್ಟಿಕಂ ಪುನರಾಧೇಯಂ ಕೃತ್ವಾ ಕಾಲಾಪರಾಧ ದೋಷ ಪ್ರಾಯಶ್ಚಿತ್ತಂ ಕೃತ್ವಾ ಪ್ರಾತರಗ್ನಿಹೋತ್ರ ಸಮನಂತರಾತಿಪನ್ನ ಪೂರ್ಣಮಾಸಂ ಚ ನ ಕರ್ತವ್ಯಮ್ । ಪೌರ್ಣಮಾಸೀಮಿಷ್ಟ್ವಾ ಜ್ವಲತೋಗ್ನೀನುತ್ಸೃಜತ ಇತಿ ವಚನಾತ್ ಸಾಯಂ ಪ್ರಾತರಾಹುತಿಭಿಃ ಪೂರ್ವಪಕ್ಷನಯನಂ ಆಗಾಮಿ ದರ್ಶದೇವತಾಭ್ಯಾಂ ಪೂರ್ಣಾಹುತೀರ್ಜುಹುಯಾತ್ । ಉತ್ಸೃಷ್ಟಾಗ್ನೇಃ ಪುನರಾಧೇಯ ಸಂಕಲ್ಪಿತ ಕಾಲಾತ್ ಪ್ರಾಗೇವ ಮೃತಸ್ಯಾಹಿತಾಗ್ನೇಃ ಪ್ರೇತಾಧಾನಾನಂತರಂ ಸಮನಂತರ ಪೌರ್ಣಮಾಸಾಕರಣ ಪ್ರಾಯಶ್ಚಿತ್ತಂ ತದನುಷ್ಠಾನಂ ಚ ನ ಕರ್ತವ್ಯಂ । ಪೌರ್ಣಮಾಸೀಮಿಷ್ಟ್ವಾ ಜ್ವಲತೋಗ್ನೀನುತ್ಸೃಜತೀತಿ ವಚನಾತ್ । ತಥೈವಾಗ್ನಿಹೋತ್ರಸ್ಯ ಪ್ರತಿಷೇಧೇ ಪ್ರಾಪ್ತೇ ತತ್ರ ಆಹ ಭಾಷ್ಯಕಾರಃ ॥

ಒಂದು ವೇಳೆ, ಕೃಷ್ಣಪಕ್ಷದಲ್ಲಿ ಮರಣ ಸಂಶಯವು ಬಂದರೆ – ಇಷ್ಟಿಸಹಿತವಾಗಿ ಪುನರಾಧೇಯವನ್ನು ಮಾಡಿ, ಕಾಲಾಪರಾಧದೋಷ ಪ್ರಾಯಶ್ಚಿತ್ತವನ್ನು ಮಾಡಿ, ಪ್ರಾತರಗ್ನಿಹೋತ್ರ ಮತ್ತು ಹಿಂದೆ ಹೋದ ಪೂರ್ಣಮಾಸೇಷ್ಟಿಯನ್ನು ಮಾಡಬಾರದು । ಪೂರ್ಣಮಾಸೀಷ್ಟಿಯನ್ನು ಮಾಡಿ, **'ಜ್ವಲತಃ ಅಗ್ನೀನ್ ಉತ್ಸೃಜತ'** ಎಂಬ ವಚನವಿರುವುದರಿಂದ ಸಂಜೆ ಮತ್ತು ಬೆಳಿಗ್ಗಿನ ಆಹುತಿಗಳನ್ನು ಶುಕ್ಲಪಕ್ಷದವರೆಗೆ, ಒಯ್ಯುವುದು ಮತ್ತು ಮುಂದೆಬರುವ ದರ್ಶ(ಅಮಾವಾಸ್ಯೆ) ದೇವತೆಗಳಿಗೆ ಪೂರ್ಣಾಹುತಿಗಳನ್ನು ಮಾಡಬೇಕು । ಅಗ್ನಿಯನ್ನು ಬಿಟ್ಟ ಕಾಲದಿಂದ ಸಂಕಲ್ಪಿತವಾದ ಪುನರಾಧೇಯ ಕಾಲಕ್ಕಿಂತ ಮೊದಲೇ ಸತ್ತಂತಹ ಆಹಿತಾಗ್ನಿಯ ಪ್ರೇತಾಧಾನದ ನಂತರ, ಅನಂತರ ಕಾಲದಲ್ಲಿ ಬರುವ ಪೌರ್ಣಮಾಸೀಷ್ಟಿಯ ಅಕರಣದ(ಮಾಡದಿರುವ) ಪ್ರಾಯಶ್ಚಿತ್ತವು ಮತ್ತು ಅದರ ಅನುಷ್ಠಾನವು ಮಾಡತಕ್ಕದ್ದಲ್ಲ(ಮಾಡಬಾರದು) । ಪೌರ್ಣಮಾಸೀಷ್ಟಿಯನ್ನು ಮಾಡಿ, **'ಜ್ವಲತೋ ಅಗ್ನೀನ್ ಉತ್ಸೃಜತಿ'** ಅಂದರೆ, ಅಗ್ನಿಯನ್ನು ಜ್ವಲನೆಮಾಡಿ ಬಿಡುವುದು ಎಂಬರ್ಥದ ವಚನವಿರುವುದರಿಂದ । ಹಾಗೆಯೇ ಅಗ್ನಿಹೋತ್ರದ ಪ್ರತಿಷೇಧವು(ನಿಷೇಧ) ಪ್ರಾಪ್ತವಾಗಲಾಗಿ ಅಲ್ಲಿ ಭಾಷ್ಯಕಾರರು ಈ ರೀತಿಯಾಗಿ ಹೇಳಿದ್ದಾರೆ ॥

ಹುತ್ವಾ ಪ್ರೇತೇಮಾತ್ಯ ಇತ್ಯಾದಿ ಪುನರ್ವಚನಂ ಪ್ರಾಯಶ್ಚಿತ್ತ ನಿವೃತ್ಯರ್ಥಮಿತಿ ವಿಹರಣಾದಿ ಸಮಾನಮಿತ್ಯತ್ರ ಮೃತಹೋಮಾನಂತರಂ ಸಮಾನಮಿತ್ಯರ್ಥಃ । ಇತಿ ಸರ್ವೇಷು ವಿಧಿಷು ಮೃತ ಹೋಮಸ್ಯ ನಿತ್ಯತ್ವಾದಿತಿ ಅಗ್ನಿಗುಪ್ತ್ಯರ್ಥಂ ಅಗ್ನಿಹೋತ್ರಂ ಕರ್ತವ್ಯಮಿತಿ ಚ ಸರ್ವೇಷು ಸ್ಥಲೇ ಮೃತಾಗ್ನಿಹೋತ್ರಂ ಕರ್ತವ್ಯಮಿತಿ ಕಪರ್ದಿಸ್ವಾಮಿನೋಕ್ತತ್ವಾತ್ ಮೃತಾಗ್ನಿಹೋತ್ರ ಕ್ರಮಃ ಪ್ರೇತಾಧಾನಾನಂತರ ಅಗ್ನಿಹೋತ್ರ ಲೋಪ ಪ್ರಾಯಶ್ಚಿತ್ತ ವರ್ಜಂ ಮೃತಾಗ್ನಿಹೋತ್ರಂ ಕರ್ತವ್ಯಮ್ । ಪುನರಾಧೇಯ

ಸಂಕಲ್ಪಿತ ಕಾಲಾತಿಕ್ರಮಾನಂತರಂ ಮೃತೇ ಪ್ರೇತಾಧಾನಂ ಕೃತ್ವಾ ಅಗ್ನಿಹೋತ್ರಲೋಪ ಪ್ರಾಯಶ್ಚಿತ್ತ ವರ್ಜಂ ಮೃತಾಗ್ನಿಹೋತ್ರಂ ಕೃತ್ವಾ ದರ್ಶಪೂರ್ಣಮಾಸಾದೀನಾಂ ಕಾಲಾತಿಕ್ರಮ ಪ್ರಾಯಶ್ಚಿತ್ತಂ ಕೃತ್ವಾ ಪೂರ್ಣಾಹುತೇಶ್ಚ ಜುಹುಯಾತ್ ಇತಿ ಕೇಚಿತ್ ॥

'ಹುತ್ವಾ ಪ್ರೇತೇಮಾತ್ಯಾ' ಎಂಬಿತ್ಯಾದಿ ಪುನರ್ವಚನವು ಪ್ರಾಯಶ್ಚಿತ್ತ ನಿವೃತ್ತಿಗೋಸ್ಕರವಾಗಿರುವುದರಿಂದ, ವಿಹರಣಾದಿಗಳು ಸಮಾನ ಎಂಬ ವಿಷಯದಲ್ಲಿ ಮೃತಹೋಮಾನಂತರ ಕಾಲದ ಕರ್ಮಗಳು ಸಮಾನ ಎಂದರ್ಥ। ಹೀಗೆ ಎಲ್ಲಾ ವಿಧಿಗಳಲ್ಲಿ ಮೃತಹೋಮವು ನಿತ್ಯವಾಗಿರುವುದರಿಂದ ಅಗ್ನಿರಕ್ಷಣೆಗಾಗಿ ಸತ್ತ ಯಜಮಾನನ ಅಗ್ನಿಹೋತ್ರವನ್ನು ಮಾಡಬೇಕು ಮತ್ತು ಎಲ್ಲಾ ಸ್ಥಳಗಳಲ್ಲೂ ಮೃತಾಗ್ನಿಹೋತ್ರವನ್ನು ಮಾಡಬೇಕು ಎಂದು ಕಪರ್ದಿಸ್ವಾಮಿಗಳು ಹೇಳಿರುವುದರಿಂದ ಮೃತಾಗ್ನಿಹೋತ್ರ ಕ್ರಮವು, ಪ್ರೇತಾಧಾನಾ ನಂತರದ ಅಗ್ನಿಹೋತ್ರಲೋಪ ಪ್ರಾಯಶ್ಚಿತ್ತವನ್ನು ಬಿಟ್ಟು, ಮೃತಾಗ್ನಿಹೋತ್ರವನ್ನು ಮಾಡಬೇಕು ಎಂದರ್ಥವಾಗಿದೆ । ಪುನರಾಧೇಯದ ಸಂಕಲ್ಪಿತ ಕಾಲವು ಅತಿಕ್ರಮವಾದಮೇಲೆ ಯಜಮಾನನು ಸಾಯಲಾಗಿ, ಪ್ರೇತಾಧಾನವನ್ನು ಮಾಡಿಕೊಂಡು ಅಗ್ನಿಹೋತ್ರಲೋಪ ಪ್ರಾಯಶ್ಚಿತ್ತವನ್ನು ಬಿಟ್ಟು, ಉಳಿದ ಮೃತಾಗ್ನಿಹೋತ್ರದ ಕರ್ಮವನ್ನು ಮಾಡಿ ದರ್ಶಪೂರ್ಣಮಾಸಾದಿಗಳ ಕಾಲಾತಿಕ್ರಮ ಪ್ರಾಯಶ್ಚಿತ್ತವನ್ನು ಮಾಡಿ ಪೂರ್ಣಾಹುತಿಯನ್ನು ಮಾಡಬೇಕು ಎಂದು ಕೆಲವರು ಹೇಳುತ್ತಾರೆ ॥

ಪುನರಾಧೇಯ ಸಂಕಲ್ಪಿತ ಕಾಲಾತ್ ಪ್ರಾಗೂರ್ಧ್ವಂ ಚ ಕೃಷ್ಣಪಕ್ಷ ಮರಣೇ ಸಾಯಂಪ್ರಾತರಾಹುತಿಭಿಃ ಪೂರ್ವಪಕ್ಷ ನಯನಂ ಆಗಾಮಿ ದರ್ಶಂ ಚ ಕರ್ತವ್ಯಮಿತಿ ಕೇಚಿತ್ । ಪತ್ನ್ಯಾ ಅಪ್ಯೇವಂ ಸ್ವಾಮಿತ್ವಾ ವಿಶೇಷಾತ್ । ಅಗ್ನಿಹೋತ್ರೇ ಪೂರ್ಣಾಹುತೇಃಪೂರ್ವಂ ಯಜಮಾನ ಮರಣೇ

ಪೂರ್ಣಾಹುತಿ ಪ್ರಭೃತಿ ಮೃತಾಗ್ನಿ ಹೋತ್ರವತ್ । ಸರ್ವಂ ಕರ್ತವ್ಯಂ ಯದಿ ಪೂರ್ವಸ್ಯಾಮಾಹುತ್ಯಾಂ ಹುತಾಯಾಂ ಯಜಮಾನೋ ಮ್ರಿಯೇತ ಆಹವನೀಯ ದಕ್ಷಿಣಾರ್ಧೇ ಶೀತೇ ಭಸ್ಮನ್ಯುತ್ತರಾಹುತಿಂ ಅಗ್ನಯೇ ಕವ್ಯವಾಹನಾಯ ಸ್ವಾಹೇತಿ ನಿನಯೇತ್, ಪ್ರಾಶನಾದಿ ವರ್ಜಂ। ಮೃತಾಗ್ನಿಹೋತ್ರಂ ನ್ಯಾಯೇನ ತೃಣ ಪ್ರಹರಣಾನಂತರಂ ಅಗ್ನಿಹೋತ್ರಂ ಸಮಾಪ್ಯ ಪಿತೃಮೇಧಃ ಕರ್ತವ್ಯಃ ॥

ಸಂಕಲ್ಪಿಸಿದ ಪುನರಾಧೇಯವನ್ನು ಮಾಡುವ, ಕಾಲಕ್ಕಿಂತ ಮೊದಲು ಅಥವಾ ಆಮೇಲೆ ಕೃಷ್ಣಪಕ್ಷದಲ್ಲಿ ಮರಣವು ಉಂಟಾಗಲಾಗಿ, ಹಿಂದಿನ ಶುಕ್ಲಪಕ್ಷದ ಸಾಯಂ ಪ್ರಾತಃಕಾಲದ ಅಗ್ನಿಹೋತ್ರದ ಆಹುತಿಗಳನ್ನು ಕೊಟ್ಟು, ಮುಂದಿನ ಕೃಷ್ಣಪಕ್ಷದ ದರ್ಶೇಷ್ಟಿಯನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ। ಹೀಗೆಯೇ ಪತ್ನಿಗೂ ಕೂಡ ಮರಣಶಂಕೆಯುಂಟಾದರೆ, ಸ್ವಾಮಿತ್ವವು(ಯಜಮಾನಿಕೆಯು) ಸಮಾನವಾಗಿರುವುದರಿಂದ ಮಾಡಬೇಕು । ಅಗ್ನಿಹೋತ್ರದಲ್ಲಿ ಪೂರ್ಣಾಹುತಿಗೆ ಮೊದಲು, ಯಜಮಾನನು ಮರಣಹೊಂದಿದರೆ, ಪೂರ್ಣಾಹುತಿಯಿಂದ ಮುಂದಕ್ಕೆ ಮೃತಾಗ್ನಿಹೋತ್ರದಂತೆ ಮಾಡಬೇಕು । ಒಂದುವೇಳೆ, ಮೊದಲಿನ ಪ್ರಧಾನಾಹುತಿಯನ್ನು ಕೊಟ್ಟಮೇಲೆ ಯಜಮಾನನು ಮರಣಹೊಂದಲಾಗಿ, ಆಹವನೀಯದ ದಕ್ಷಿಣಾರ್ಧದಲ್ಲಿ ಬಿಸಿಯಿಲ್ಲದ ಭಸ್ಮದಮೇಲೆ ಅಗ್ನಯೇ ಕವ್ಯವಾಹನಾಯ ಸ್ವಾಹಾ ಎಂದು ಉತ್ತರಾಹುತಿಯನ್ನು ಕೊಡಬೇಕು, ಹೀಗೆ ಪ್ರಾಶನಾದಿಗಳನ್ನು ಬಿಟ್ಟು, ಉಳಿದೆಲ್ಲವನ್ನೂ ಮಾಡಬೇಕು। ಮೃತಾಗ್ನಿಹೋತ್ರವನ್ನು ಶಾಸ್ತ್ರದಂತೆ ನ್ಯಾಯಯುತವಾಗಿ ತೃಣ ಪ್ರಹರಣದ ನಂತರದ ಅಗ್ನಿಹೋತ್ರದ ಕಲಾಪಗಳನ್ನು ಸಮಾಪ್ತಿಗೊಳಿಸಿ, ಪಿತೃಮೇಧ ಇಷ್ಟಿಯನ್ನು ಮಾಡಬೇಕು ॥

ಅಪಿ ವಾ ನೋತ್ತರಾಹುತಿಃ । ಪ್ರೇತೇಮಾತ್ಯಾ ಇತ್ಯಾರಭ್ಯ ಅನ್ವಾರಬ್ಧೇ ಮೃತೇ ಪರೇಯುರ್ವಾಗ್ಂಸಮಿತಿ ಸ್ರುವಾಹುತಿ ಮೇವೋತ್ತರಾಹುತಿ ಸ್ಥಾನೇ

ಹುತ್ವಾ ಪಿತೃಮೇಧ ಏವ ನಾಗ್ನಿಹೋತ್ರ ಸಮಾಪ್ತಿಃ । ಕೃಷ್ಣಪಕ್ಷಶ್ಚೇತ್ತಿಥಿಭಿಃ ಕೇಚಿದಾಹುಃ ಪೂರ್ವಪಕ್ಷಾದಿ ನಯನಂ ವಿದ್ಯತೇ । ಸಾಮಾನ್ಯಸ್ಯ ವಿಶೇಷಾಭಾವಾತ್ । ಪತ್ನ್ಯಾ ಅಪ್ಯೇವಂ ಸ್ವಾಮಿತ್ವಾ ವಿಶೇಷಾತ್ ॥

ಅಥವಾ ಉತ್ತರಾಹುತಿಯನ್ನು ಬಿಟ್ಟು, ಉಳಿದ ಕಲಾಪಗಳನ್ನು ಮಾಡಬೇಕು । **ಪ್ರೇತೇ ಅಮಾತ್ಯಾಃ.....,** ಎಂದು ಆರಂಭಿಸಿ, ಮೃತನಾದ ಯಜಮಾನನನ್ನು ದರ್ಭೆಯಿಂದ ಮುಟ್ಟಿಕೊಂಡು, **ಪರೇಯುವಾಗ್ಂ ಸಂ.....,** ಎಂಬ ಮಂತ್ರದಿಂದ ಸ್ರುವಾಹುತಿಯನ್ನು ಉತ್ತರಾಹುತಿಯ ಸ್ಥಾನದಲ್ಲಿ ಹೋಮಮಾಡಿ, ಪಿತೃಮೇಧಇಷ್ಟಿಯ ಕಲಾಪವನ್ನೇ ಮಾಡಬೇಕು, ಅಗ್ನಿಹೋತ್ರದ ಸಮಾಪ್ತಿಯನ್ನು ಮಾಡಬಾರದು । ತಿಥಿಗಳಿಂದ ಪೂರ್ವಪಕ್ಷಾದಿ ನಯನವು ಇರುತ್ತದೆ । ಸಾಮಾನ್ಯವಾಗಿರುವುದರಿಂದ ಮತ್ತು ಯಾವ ವಿಶೇಷವೂ ಇಲ್ಲದಿರುವುದರಿಂದ । ಪತ್ನಿಗೂ ಕೂಡ ಸ್ವಾಮಿತ್ವವು ಅವಿಶೇಷವಾಗಿರುವುದರಿಂದ ॥

35. ಅಥ ಪ್ರತಿವಸಂತ ಸೋಮಯಾಗ ಪಕ್ಷಃ (ಆಹಿತಾಗ್ನಿಗಳಿಗೆ ಮಾತ್ರ)

ಪ್ರತಿವಸಂತ ಸೋಮಯಾಗಪಕ್ಷೇ ವಸಂತ ಸಂಯೋಗೇ ಅಕೃತೇ ಸೋಮೇ ಸವನಸೋಮದೇವತಾಭ್ಯಃ ಚತುರ್ಗೃಹೀತೇನಾಜ್ಯೇನ ಪೂರ್ಣಾಹುತೀಃ ಜುಹುಯಾತ್ । ತತ್ರ ಸೂತ್ರಕಾರೇಣ ಸವನ ಸೋಮ ದೇವತಾನಾಂ ಪುರೋನುವಾಕ್ಯಾನಾಂ ಅಪಠಿತತ್ವಾತ್ ಕೇವಲ ಯಾಜ್ಯಾಭಿಃ ಜುಹುಯಾತ್ । ಸವನ ಸೋಮದೇವತಾಭ್ಯಃ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ ।

ಪ್ರತಿ ವಸಂತಋತುವಿನಲ್ಲಿ, ಸೋಮಯಾಗವನ್ನು ಮಾಡಬೇಕೆನ್ನುವ ಪಕ್ಷದಲ್ಲಿ ವಸಂತಋತುವಿನ ಕಾಲದಲ್ಲಿ ಸೋಮಯಾಗವನ್ನು ಮಾಡದೇ ಇದ್ದಾಗ, ಸವನಸೋಮದೇವತೆಗಳಿಗೆ ಚತುರ್ಗೃಹೀತ ಆಜ್ಯದಿಂದ ಪೂರ್ಣಾಹುತಿಯನ್ನು ಮಾಡಬೇಕು । ಅಲ್ಲಿ ಸೂತ್ರಕಾರರಿಂದ ಸವನಸೋಮದೇವತೆಗಳಿಗೆ ಪುರೋನುವಾಕ್ಯೆಯನ್ನು ಹೇಳದೇ ಇರುವುದರಿಂದ ಕೇವಲ ಯಾಜ್ಯೆಗಳಿಂದಲೇ ಹೋಮ ಮಾಡಬೇಕು । ಸವನಸೋಮದೇವತೆಗಳ ಪೂರ್ಣಾಹುತಿಯನ್ನು ಮಾಡುತ್ತೇನೆ ಎಂದು ಸಂಕಲ್ಪಮಾಡಬೇಕು ।

ಆಹವನೀಯಂ ವಿಹೃತ್ಯ, ಚತುರ್ಗೃಹೀತೇನಾಜ್ಯೇನ ಇದಂ ತೇ ಸೌಮ್ಯಂ ಮಧುಮತ್ವಂ.....ತತ್ಪಿಬ ಸ್ವಾಹಾ । ಆಹವನೀಯೇ ಜುಹೋತಿ । ಇಂದ್ರಾಯ ವಸುಮತ ಇದಂ ।

ಪುನಶ್ಚತುರ್ಗೃಹೀತೇನ, ಪಿಬಾಸೋಮಮಭೀಯ..... ಶವೋಭಿಸ್ತ್ವಾಹಾ । ಇಂದ್ರಾಯ ರುದ್ರವತ ಇದಂ ।

ಪುನಶ್ಚತುರ್ಗೃಹೀತೇನಾಜ್ಯೇನ, ಇಂದ್ರಋಭುರ್ಜಹಿ ಜವದ್ಭಿ ಸಮುಕ್ಷತಂ.....ಮತ್ಸ್ವಾನೃಭಿಸ್ತ್ವಾಹಾ । ಇಂದ್ರಾಯಾದಿತ್ಯವತೇ ಋಭುಮತ (ವಾಜಿಮತೇ ಬೃಹಸ್ಪತವತೇ ವಿಶ್ವದೇವ್ಯಾವತ) ಇದಂ ತಮಗ್ನಿಂ ಪರಿತ್ಯಜ್ಯ ।

ನಂತರ, ಆಹವನೀಯವನ್ನು ವಿಹರಣ(ಅನ್ವಾಧಾನ=ಗಾರ್ಹಪತ್ಯದಿಂದ ಬೇರೆಯಾಗಿ ತೆಗೆದು ಇಟ್ಟುಕೊಳ್ಳುವಿಕೆ) ಮಾಡಿಕೊಂಡು, ಚತುರ್ಗೃಹೀತ ಆಜ್ಯದಿಂದ, **ಇದಂ ತೇ ಸೌಮ್ಯಂ..... ಪಿಬಸ್ವಾಹಾ – ಇಂದ್ರಾಯ ವಸುಮತ ಇದಂ ನಮಮ ।** ಎಂದು ಆಹವನೀಯದಲ್ಲಿ ಹೋಮಿಸಬೇಕು ॥

ಮತ್ತೆ, ಚತುರ್ಗೃಹೀತ ಆಜ್ಯದಿಂದ, ಪಿಬಾಸೋಮಮಭೀಯ.....ಶವೋಭಿಃ ಸ್ವಾಹಾ – ಇಂದ್ರಾಯ ರುದ್ರವತ ಇದಂ ನಮಮ । ಎಂದು ಆಹವನೀಯದಲ್ಲಿ ಹೋಮಿಸಬೇಕು ॥

ಮತ್ತೆ, ಚತುರ್ಗೃಹೀತ ಆಜ್ಯದಿಂದ, ಇಂದ್ರಯಭುರ್ಜಹಿ.....ನೃಭಿಃ ಸ್ವಾಹಾ – ಇಂದ್ರಾಯ ಆದಿತ್ಯವತ ಋಭುಮತ (ವಾಜಿವತೇ ಬೃಹಸ್ಪತವತೇ ವಿಶ್ವದೇವ್ಯಾವತೇ) ಇದಂ ನಮಮ ಎಂದು ಹೋಮಿಸಿ, ಆ ಆಹವನೀಯಾಗ್ನಿಯನ್ನು ಬಿಡಬೇಕು ॥

ಉತ್ಸೃಷ್ಟಾಗ್ನೇಃ ಪುನರಾಧೇಯ ಸಂಕಲ್ಪಿತ ಕಾಲಾತಿಕ್ರಮ ಪ್ರತಿವಸಂತ ಸೋಮಯಾಗಪಕ್ಷೇ ಅಕೃತೇ ಸೋಮೇ ವಸಂತ ಕಾಲಾತಿಕ್ರಮ ಪ್ರಾಯಶ್ಚಿತ್ತಾರ್ಥಂ ಸಪ್ತದಶಾಗ್ನಿಷ್ಟುತ್ ಸ್ಥಾನೇ ಸವನ ಸೋಮದೇವತಾಭ್ಯಃ ಪೂರ್ಣಾಹುತೀಃ ಹೋಷ್ಯಾಮೀತಿ ಸಂಕಲ್ಪ್ಯ, ಪೂರ್ವವತ್ ಪೂರ್ಣಾಹುತೀಃ ಜುಹುಯಾತ್ । ತತಃ ಸಮನಂತರಾತಿಪನ್ನ ಪ್ರತಿವಸಂತ ಸವನಸೋಮದೇವತಾಭ್ಯಃ ಪೂರ್ಣಾಹುತಿಂ ಹೋಷ್ಯಾಮೀತಿ ಸಂಕಲ್ಪ್ಯ । ಪೂರ್ವವತ್ ಪೂರ್ಣಾಹುತೀರ್ಜುಹುಯಾತ್ । ಮರಣಾನಂತರಮೇವಂ ಕರ್ತವ್ಯಮಿತಿ ಕೇಚಿತ್ । ಪತ್ನ್ಯಾ ಅಪ್ಯೇವಂ ಸ್ವಾಮಿತ್ವಾ ವಿಶೇಷಾತ್ ಮ್ರಿಯಮಾಣಸ್ಯೇವಂ ನ ಯಜ್ಞಲೋಪೋ ಭವತೀತಿ ವಿಜ್ಞಾಯತೇ ।

ಬಿಟ್ಟ ಅಗ್ನಿಯ, ಪುನರಾಧೇಯದ ಸಂಕಲ್ಪಿತ ಕಾಲವು ಅತಿಕ್ರಮಿಸಿದರೆ, ಪ್ರತಿವಸಂತ ಸೋಮಯಾಗಪಕ್ಷದಲ್ಲಿ ಸೋಮಯಾಗವನ್ನು ಮಾಡದೇ, ಕಾಲಾತಿಕ್ರಮವಾದರೆ ಅದರ ಪ್ರಾಯಶ್ಚಿತ್ತಾರ್ಥವಾಗಿ ಸಪ್ತದಶ ಅಗ್ನಿಷ್ಟುತ್ ಸ್ಥಾನದಲ್ಲಿ ಸವನಸೋಮ ದೇವತೆಗಳಿಗೆ ಪೂರ್ಣಾಹುತಿಯನ್ನು ಮಾಡುತ್ತೇನೆ (ಸಪ್ತದಶಾಗ್ನಿಷ್ಟುತ್ ಸ್ಥಾನೇ ಸವನಸೋಮದೇವತಾಭ್ಯಃ ಪೂರ್ಣಾಹುತೀಃ ಹೋಷ್ಯಾಮಿ) ಎಂದು ಸಂಕಲ್ಪಿಸಿ, ಮೇಲೆ ಹೇಳಿದಂತೆಯೇ ಪೂರ್ಣಾಹುತಿಯನ್ನು

ಹೋಮಿಸಬೇಕು । ತದನಂತರ ಬಂದಂತಹ ಪ್ರತಿವಸಂತ ಸೋಮದೇವತೆಗಳಿಗೆ ಪೂರ್ಣಾಹುತಿಯನ್ನು ಮಾಡುತ್ತೇನೆ(ಸಮನಂತರಾತಿಪನ್ನ ಪ್ರತಿವಸಂತ ಸವನಸೋಮದೇವತಾಭ್ಯಃ ಪೂರ್ಣಾಹುತಿಂ ಹೋಷ್ಯಾಮಿ) ಎಂದು ಸಂಕಲ್ಪಿಸಿ, ಮೇಲೆಹೇಳಿದಂತೆಯೇ ಪೂರ್ಣಾಹುತಿಯನ್ನು ಮಾಡಬೇಕು । ಯಜಮಾನನ ಮರಣಾನಂತರ ಹೀಗೆ ಮಾಡಬೇಕೆಂದು ಕೆಲವರು ಹೇಳುತ್ತಾರೆ । ಪತ್ನಿಗೂಕೂಡ ಸ್ವಾಮಿತ್ವವು(ಯಜಮಾನಿಕೆಯು) ಸಮಾನವಾಗಿರುವುದರಿಂದ ಅವಳು ಮರಣವನ್ನು ಹೊಂದಿದರೂ, ಮೇಲೆಹೇಳಿದ ರೀತಿಯಲ್ಲಿ ಯಜ್ಞಲೋಪವು ಬರುವುದಿಲ್ಲ ಎಂದು ತಿಳಿದುಬರುತ್ತದೆ ।

ಇತ್ಯಾದೇಸ್ತತ್ಸರ್ವಂ ಮರಣಶಂಕಯಾಮೇವ ಸ ಮರಣೋತ್ತರ ಕಾಲೇ । ಅಗ್ನಿಹೋತ್ರೇಪಿ ಪಶೂನಾಂ ಮರಣಶಂಕಾಯಾಮೇವ ವಿಧಾನಾತ್ । ಮೃತಸ್ಯಾನಧಿಕಾರಾತ್ । ಪ್ರತಿನಿಧೀಯಮಾನಾನಿ ಕರ್ಮಾಣಿ ಕೃತ್ವಾ ಯದಿ ಮ್ರಿಯಮಾಣೋ ಭವತಿ ನ ತದಾ ಯಜ್ಞವೈ ಗುಣ್ಯಂ ಭವತಿ । ಜೀವತೋಪಿ ತಥೈವ । ಯದಿ ಪ್ರತಿನಿಧೀಯಮಾನೇ ಕರ್ಮಣಿ ಮಧ್ಯೇ । ಮ್ರಿಯೇತ ತದಾ ಮರಣಾಂತ ಯಜ್ಞಾಸ್ತಾವತಿ ತಥಾಕೃತ ಯಜ್ಞ ಏವ ಭವತಿ । ಮರಣೇನ ಸಮಾಪ್ಯತ್ವಾತ್ ಅವಭೃಥವತ್ ಕರ್ಮಣಿ ದಹನಮೇವಾವಭೃಥಃ ॥

ಈ ರೀತಿ ಮೊದಲಾದವುಗಳು, ಎಲ್ಲವೂ ಕೂಡ ಮರಣಶಂಕೆಯಲ್ಲಿ ಅಥವ ಮರಣೋತ್ತರ ಕಾಲದಲ್ಲಿಯೇ । ಅಗ್ನಿಹೋತ್ರದಲ್ಲೂ ಕೂಡ ಪಶುಗಳ ಮರಣಶಂಕೆಯುಂಟಾದರೆ, ಈ ರೀತಿಯಾಗಿ ವಿಧಾನಮಾಡಿರುವುದರಿಂದ । ಮೃತನಿಗೆ ಕರ್ಮ ಮಾಡುವ ಯೋಗ್ಯತೆ(ಸಂಭವ) ಇಲ್ಲದಿರುವುದರಿಂದ । ಅವನ ಪ್ರತಿನಿಧಿಯಾಗಿ ಕರ್ಮಗಳನ್ನು ಮಾಡಿ ಒಂದುವೇಳೆ ಸಾಯುತ್ತಿದ್ದರೆ, ಆಗ ಯಜ್ಞದ ವೈಗುಣ್ಯವು(ಲೋಪ) ಸಂಭವಿಸುವುದಿಲ್ಲ(ಮುಂದಿನ ಕರ್ಮಗಳೆಲ್ಲವನ್ನೂ

ಸೇರಿಸಿಕೊಂಡು, ಮಾಡಿದರೆ) । ಜೀವಿಸಿರುವವನಿಗೂ ಹೀಗೆಯೇ । ಒಂದುವೇಳೆ, ಹೀಗೆ ಆಪತ್ಕರ್ಮದ ಮಧ್ಯದಲ್ಲಿ(ಸಾಯುತ್ತಿರುವವನಿಗೆ ಯಾವ ಅಗ್ನಿಹೋತ್ರಾದಿ ಕರ್ಮಗಳನ್ನು ಯಾವ ರೀತಿಯಾಗಿ ವಿಧಿಸಿದ್ದಾರೋ ಆ ಕರ್ಮವನ್ನು ಮಾಡುವ ಮಧ್ಯದಲ್ಲಿ) ಮೃತನಾದರೆ, ಅವನ ಮರಣಾಂತದವರೆಗೆ ಆ ಕರ್ಮವು ಯಜ್ಞ ಸ್ವರೂಪವಾಗಿರುತ್ತದೆ, ಆ ಮರಣಾಂತದವರೆಗೆ ಮಾಡಿದ ಕರ್ಮವು ಯಜ್ಞವೇ ಆಗಿರುತ್ತದೆ । ಕರ್ಮಗಳಲ್ಲಿ ಅವಭೃಥವು ಹೇಗೆ ಕರ್ಮಸಮಾಪನೆಯಾಗಿದೆಯೋ, ಹಾಗೆಯೇ ಇವನ ಮರಣದಿಂದ ಕರ್ಮವು ಸಮಾಪ್ತಿಯಾಗಿರುವುದರಿಂದ ಈ ಯಜಮಾನನ ದಹನವೇ ಆ ಕರ್ಮದ ಅವಭೃಥವು ॥

36. ದೇಶಾಂತರ ಮರಣೇ
(ಆಹಿತಾಗ್ನಿಗಳಿಗೆ ಮಾತ್ರ)

ಪಥಿಕೃದೇಷ್ಟಿಃ –

ಯದಾ ಗೃಹೇ ವಿದ್ಯಮಾನೇಷ್ವಗ್ನಿಷು ದೇಶಾಂತರ ಮೃತಸ್ಯಾತ್ ತದಾ ಮರಣ ವಾರ್ತಾ ಶ್ರವಣಾನಂತರಂ ಪತ್ನೀ ಸ್ನಾತ್ವಾಚಮ್ಯ ದೇಶಕಾಲೌ ಸಂಕೀರ್ತ್ಯ । ದೇಶಾಂತರ ಮರಣ ಶ್ರವಣ ನಿಮಿತ್ತ ಪಥಿಕೃದೇಷ್ಟ್ಯಾ ಯಕ್ಷ್ಯೇ ಇತಿ ಸಂಕಲ್ಪ್ಯ ।

ಒಂದುವೇಳೆ, ಮನೆಯಲ್ಲಿ ತ್ರೇತಾಗ್ನಿಯು ನಿತ್ಯಧಾರ್ಯವಾಗಿ ಇರಲಾಗಿ ದೇಶಾಂತರದಲ್ಲಿ ಯಜಮಾನನು ಮರಣವನ್ನು ಹೊಂದಿದರೆ, ಆಗ ಮರಣವಾರ್ತೆಯ ಶ್ರವಣದ ನಂತರ ಪತ್ನಿಯು ಸ್ನಾನಮಾಡಿ, ಆಚಮನ ಮಾಡಿ, ದೇಶಕಾಲಾದಿಗಳನ್ನು ಸಂಕಲ್ಪಿಸಿ । ದೇಶಾಂತರ ಮರಣಶ್ರವಣ ನಿಮಿತ್ತ, ಪಥಿಕೃದೇಷ್ಟ್ಯಾ ಯಕ್ಷ್ಯೇ ಎಂದು ಸಂಕಲ್ಪಿಸಿ ।

ವಿದ್ಯುದಸಿ – ಅಸ್ಯಾಮಿಷ್ಟ್ಯಾಮಧ್ವರ್ಯುಂ ತ್ವಾಂ ವೃಣೇಮಹ ಇತಿ ಪುತ್ರಾದಿಮಧ್ವರ್ಯುಂ ವೃಣುಯಾತ್ । ಪತ್ನೀ ಪ್ರವೃತ್ತೈ ಋತ್ವಿಗ್ಭಿಃ ಪಥಿಕೃದೇಷ್ಟಿಃ ಕಾರ್ಯಾ । ಪತ್ನ್ಯನುಮತ್ಯಾ ಅಧ್ವರ್ಯುಃ ಉದ್ದೇಶತ್ಯಾಗಂ ಕುರ್ಯಾತ್ । ಸರ್ವಸ್ವಾದರ್ಥಾದ್ವಾ ತದುಪರಿತನ ಯಾಗವತ್ ಪತ್ನ್ಯೈವ ದಕ್ಷಿಣಾಂ ದದಾತಿ । ಇಡಾಸೂಕ್ತ ವಾಕ್ಯಾದಿಷ್ವಾಶಿಷಾಂ ನಿವೃತ್ತಿಂ । ಕೇಚಿತ್ ಯಾಜಮಾನೇಷು ಕರ್ಮಸು ಮಂತ್ರಾನಧ್ವರ್ಯುಃ ಕುರ್ಯಾದಿತ್ಯಾಹುಃ । ಬ್ರಾಹ್ಮಣ ತರ್ಪಣಾಂತೇ ದೇಶಾಂತರೇ ಪ್ರಮೀತಸ್ಯ ಶರೀರಸ್ಯಾಗ್ನಿಭಿರಿತಿ ದೇಶಾಂತರ ಮೃತಿ ನಿಮಿತ್ತ ಪ್ರಯೋಗಸ್ಯಾಗ್ನಿರ್ದಾಹ ಪರ್ಯಂತತ್ವಾತ್ ಪಾಥಿಕೃತಾಗ್ನಿ ಹೋತ್ರಾದೀನಾಮಪಿ ತತ್ ಪ್ರಯೋಗ ವಿಶೇಷರೂಪತ್ವಾತ್ – ಪಥಿಕೃದ್ವಿಹಾರ ಏವ । ಪಿತೃಮೇಧಾಂತರೇ ಕರ್ತವ್ಯಂ । ಅತಃ ಪಥಿಕೃತ್ ಪ್ರಭೃತಿ ಆಹವನೀಯಾದೇರಪಿ ಧಾರಣಂ । ತಥಾ ಪಿತೃಮೇಧೇಷ್ಯೇಷ ತಸ್ಮಿನ್ನೇವ ವಿಹಾರ ಇತಿ ವಕ್ಷ್ಯತಿ । ಪಾಥಿಕೃತೇ ಅಧ್ವರ್ಯುರೇವ ಪಿತೃಮೇಧಾಂತಂ ಕುರ್ಯಾತ್ । ಇಷ್ಟಿಕರಣಾಸಂಭವೇ ದೇಶಾಂತರ ಮರಣ ಶ್ರವಣ ನಿಮಿತ್ತ ಪಾಥಿಕೃದೇಷ್ಟ್ಯಾ ಸ್ಥಾನೇ ಪೂರ್ಣಾಹುತಿಂ ಹೋಷ್ಯಾಮಿತಿ ಸಂಕಲ್ಪ್ಯ ।

ವಿದ್ಯುದಸಿ....., ಎಂದು ಆರಂಭಿಸಿ, ಈ ಇಷ್ಟಿಗೆ ಅಧ್ವರ್ಯುವಾಗಿ ನಿನ್ನನ್ನು ವರಿಸುತ್ತೇನೆ(ಆಹ್ವಾನಿಸುತ್ತೇನೆ) ಎಂದು ತನ್ನ ಪುತ್ರಾದಿಗಳನ್ನು ಅಧ್ವರ್ಯುವಾಗಿ ಸ್ವೀಕರಿಸಬೇಕು । ಹೀಗೆ ಈ ಋತ್ವಿಜರಿಂದ ಕೂಡಿದವಳಾಗಿ, ಪಥಿಕೃದಿಷ್ಟಿಯನ್ನು ಮಾಡಬೇಕು । ಈ ಕರ್ಮದಲ್ಲಿ ಪತ್ನಿಯ ಅನುಮತಿಯನ್ನು ಪಡೆದು, ಅಧ್ವರ್ಯುವು ಉದ್ದೇಶತ್ಯಾಗವನ್ನು ಹೇಳಬೇಕು । ಈ ಕರ್ಮದಲ್ಲಿ ಪತ್ನಿಯೇ ಯಜಮಾನನಿಗೆ ಸಂಬಂಧಿಸಿದ ಸಂಪೂರ್ಣ ಐಶ್ವರ್ಯವನ್ನೇ ಸರ್ವಸ್ವ

ದಕ್ಷಿಣೆಯನ್ನು ಕೊಡುವ ಯಾಗದಂತೆ ದಕ್ಷಿಣೆಯಾಗಿ ಪುತ್ರಾದಿಗಳಿಗೆ ಕೊಡಬೇಕು। ಇಡಾಸೂಕ್ತ, ಶಯ್ಯುವಾಕ್ಯಾದಿಗಳನ್ನು ಮತ್ತು ಸೂಕ್ತವಾಕ್ಯಾದಿಗಳನ್ನು ಮಾಡಬಾರದು। ಕೆಲವರು ಯಜಮಾನನ ಕರ್ಮಗಳನ್ನು ಮತ್ತು ಮಂತ್ರಗಳನ್ನು ಅಧ್ವರ್ಯುವು ಮಾಡಬೇಕೆಂದು ಹೇಳುತ್ತಾರೆ । ಬ್ರಾಹ್ಮಣ ತರ್ಪಣಾಂತದಲ್ಲಿ, ದೇಶಾಂತರದಲ್ಲಿ ಮರಣಹೊಂದಿದ ಯಜಮಾನನ ಶರೀರದ ಅಗ್ನಿಗಳಿಂದ ದೇಶಾಂತರದಲ್ಲಿ ಮರಣಹೊಂದಿದ ನಿಮಿತ್ತದ ಪ್ರಯೋಗವು ಅಗ್ನಿದಾಹಪರ್ಯಂತವಾಗಿರುವುದರಿಂದ ಪಥಿಕೃತಾಗ್ನಿಹೋತ್ರಾದಿಗಳನ್ನು ಕೂಡ ಆ ಪ್ರಯೋಗದ ವಿಶೇಷರೂಪವಾಗಿರುವುದರಿಂದ ಪಥಿಕೃತ್ ಇಷ್ಟಿಯ ವಿಹಾರವೇ ಅವುಗಳಿಗೂ ಕೂಡ ।

ಪುತ್ರಾದಿಮಧ್ವರ್ಯುಂ ವೃಣುಯಾತ್ । ಅಧ್ವರ್ಯುಃ ಪ್ರಾಚೀನಾವೀತೀ ಅಗ್ನೀನ್ ವಿಹೃತ್ಯ ಚತುರ್ಗೃಹೀತೇನ ಆಜ್ಯೇನ ಪೂರ್ವವತ್ ಪೂರ್ಣಾಹುತಿಂ ಜುಹುಯಾತ್ । ಏತಾನಗ್ನೀನ್ ಪಿತೃಮೇಧಾಂತಂ ಅಜಸ್ರಾನ್ ಕುರ್ಯಾತ್ । ಯದ್ಯೇಕಸ್ಮಿನ್ನಹನಿ ಶರೀರಾಣ್ಯಾಹರಂತಿ ಯದನ್ಯಸ್ಮಿನ್ ತದಾ ತೇಷ್ವೇವಾಗ್ನಿಷು ಅಗ್ನಿಹೋತ್ರ ಹೋಮಕಾಲೇ ಪ್ರಾಪ್ತೇ ಮೃತಾಗ್ನಿಹೋತ್ರ ವಿಧಾನೇನ ಅಪಿವಾನ್ಯವತ್ಸಾಯ ಪಯಸಾ ಕೇವಲೇನ ವಾ ಗೋಪಯಸಾ ಸಾಯಂ ಪ್ರಾತಶ್ಚ ಅಗ್ನಿಗುಪ್ತ್ಯರ್ಥಂ ಅಗ್ನಿಹೋತ್ರಂ ಜುಹುಯಾತ್ ॥

ಪುತ್ರ ಮೊದಲಾದ ಕರ್ತೃಗಳನ್ನು ಅಧ್ವರ್ಯುವಾಗಿ ವರಣೆ ಮಾಡಬೇಕು । ಅಧ್ವರ್ಯುವು ಪ್ರಾಚೀನಾವೀತಿಯಾಗಿ 3 ಅಗ್ನಿಗಳನ್ನು ವಿಹರಣ ಮಾಡಿ(ಬೇರೆಬೇರೆ ಮಾಡಿ), ಚತುರ್ಗೃಹೀತ ಆಜ್ಯದಿಂದ ಹಿಂದಿನಂತೆ ಪೂರ್ಣಾಹುತಿಯನ್ನು ಮಾಡಬೇಕು । ಈ ಅಗ್ನಿಗಳನ್ನು ಪಿತೃಮೇಧದ ಕೊನೆಯವರೆಗೆ(ದಹನದವರೆಗೆ) ಅಜಸ್ರ(ನಿರಂತರ)ಧಾರಣೆ ಮಾಡಬೇಕು । ಒಂದುವೇಳೆ ಒಂದೇದಿನದಲ್ಲಿ

ಯಜಮಾನನ ಮೃತಶರೀರವನ್ನು ತಂದರೆ, ಆಗ ಆ ಅಗ್ನಿಗಳಲ್ಲಿ ಅಗ್ನಿಹೋತ್ರದ ಹೋಮಕಾಲವು ಪ್ರಾಪ್ತವಾಗಲಾಗಿ, ಮೃತಾಗ್ನಿಹೋತ್ರವಿಧಾನದಿಂದ ಅಥವಾ ಬೇರೆ ಹಸುವಿನ ಕರುವನ್ನು ಹೊಂದಿದ ಹಸುವಿನ ಹಾಲನ್ನು ಅಥವಾ ಕರುಸತ್ತ ಹಸುವಿನ ಹಾಲನ್ನು ಸಂಜೆ ಮತ್ತು ಬೆಳಿಗ್ಗೆ ಅಗ್ನಿರಕ್ಷಣೆಗಾಗಿ ತೂಷ್ಣೀಂ(ಅಮಂತ್ರಕವಾಗಿ) ಹೋಮ ಮಾಡಬೇಕು । ಹೀಗೆ ಮೃತಯಜಮಾನನ ಶರೀರವನ್ನು ತರುವವರೆಗೆ ಹೋಮಮಾಡಬೇಕು ॥

ಈ ಗ್ರಂಥದ ಉಳಿದ ವಿಷಯಗಳು ಮುಂದಿನ ಸಂಚಿಕೆಯಲ್ಲಿ

* * * * *

ಶ್ರೀ ವೆಂಕಟರಾಮಾವಧಾನೀಯ
ಯಜುರ್ವೇದ ಅಪರಪ್ರಯೋಗ ರತ್ನಾಕರಃ

1. ಮರಣಕಾಲೇಯಾ ತಿಥಿಃ

ಮರಣಕಾಲೇ ಯಾ ತಿಥಿಃ ಸೈವ ಶ್ರಾದ್ಧಾದೌ ಜ್ಞೇಯಾ ।
ಉತ್ಪತ್ತೌ ಚ ವಿಪತ್ತೌ ಚ ಮೈಥುನೇ ದಂತಧಾವನೇ ।
ಅಭ್ಯಂಗೇऽಪ್ಯುದಧಿಸ್ನಾನೇ ತಿಥಿಸ್ತಾತ್ಕಾಲಿಕೀ ಸ್ಮೃತಾ ॥
ಪಾರಣೇ ಮರಣೇ ಚೈವ ತಿಥಿಃ ತಾತ್ಕಾಲಿಕೀಮತಾ ॥
ಇತ್ಯಾದಿ ವಚನೈಃ ಕಾಲನಿರ್ಣಯಾತ್ ॥

ಮರಣಕಾಲದಲ್ಲಿ ಯಾವ ತಿಥಿಯು ಇರುತ್ತದೆಯೋ ಅದೇ ತಿಥಿಯು ಶ್ರಾದ್ಧಾದಿಗಳಿಗೆ ನಿಯಮಿತವಾದುದು । ಜನನದಲ್ಲಿ, ಸಾವಿನಲ್ಲಿ, ಮೈಥುನಕ್ರಿಯೆಯಲ್ಲಿ, ಹಲ್ಲು ಉಜ್ಜುವುದರಲ್ಲಿ । ಅಭ್ಯಂಗಸ್ನಾನದಲ್ಲಿ, ಸಮುದ್ರಸ್ನಾನದಲ್ಲಿ, ಯಾವ ತಿಥಿಯು ಆ ಕಾಲದಲ್ಲಿ ಇರುವುದೋ ಅದೇ ಗ್ರಾಹ್ಯವು । ವ್ರತಗಳ ಪಾರಣೆಯ ದಿನದಲ್ಲಿ, ಸಾವಿನಲ್ಲಿ, ಆ ಕಾಲದಲ್ಲಿ ಇರುವ ತಿಥಿಯನ್ನೇ ಅನುಸರಿಸಬೇಕೆಂದು ಹೇಳುವ ಈ ವಾಕ್ಯಗಳೇ ಇವುಗಳನ್ನು ತಿಳಿಸುವವು ॥

2. ಪ್ರಾಕ್ಶಾಂತಿ ಕರ್ಮಣಃ

ಪ್ರಾಕ್ಶಾಂತಿ ಕರ್ಮಣಃ ಪ್ರಾಚೀನಾವೀತಂ ದಕ್ಷಿಣಾಮುಖಿತ್ವಂ ।

ಸಂಕಲ್ಪಪ್ರಭೃತಿ ದಶಾಹ ಹೋಮಾತ್ಪ್ರಾಚೀನೇಷು ಕರ್ಮಸು ಪ್ರಾಚೀನಾವೀತೀ ದಕ್ಷಿಣಾಮುಖಶ್ಚ ಭವೇತ್ । ಕರ್ತಾ 'ಪ್ರಾಚೀನಾವೀತಂ ಪಿತೃಣಾಂ', ಇತಿ ಶ್ರುತೇಃ ॥ ಪಿತೃಣಾಮಿತಿ ಮೃತಾನಾಮೇವೇದಮಿತಿ । ಪಿತೃಕಾರ್ಯೇಷ್ವಪಿ ಪ್ರಾಚೀನಾವೀತಪ್ರಾಪ್ತ್ಯರ್ಥಂ ಚ ಪಿತೃಗ್ರಹಣಮ್ ॥

ಶಾಂತಿಕರ್ಮಗಳಿಗೆ ಮೊದಲು ಪ್ರಾಚೀನಾವೀತಿಯಾಗಿ ದಕ್ಷಿಣದಿಕ್ಕಿಗೆ ತಿರುಗಬೇಕು। ಸಂಕಲ್ಪದಿಂದ ಪ್ರಾರಂಭಿಸಿ 10 ನೇ ದಿನದ ಹೋಮದವರೆಗೂ ಮಾಡುವ ಕರ್ಮಗಳಲ್ಲಿ ಪ್ರಾಚೀನಾವೀತ ಮತ್ತು ದಕ್ಷಿಣಾಭಿಮುಖವೇ ಆದ್ಯತೆಯು । **'ಪಿತೃಗಳ ಕರ್ಮಗಳಿಗೆ ಪ್ರಾಚೀನಾವೀತಿಯು'**, ಎಂದು ವೇದದಲ್ಲಿ ಹೇಳಿದೆ । ಪಿತೃಗಳಿಗೆ ಎಂದರೆ, ಸತ್ತಿರುವವರಿಗೆ ಎಂದು ಅರ್ಥ । ಪಿತೃಶಬ್ದವನ್ನು ಬಳಸಿರುವುದು ಪಿತೃಕಾರ್ಯಗಳಲ್ಲಿ ಪ್ರಾಚೀನಾವೀತವನ್ನು ಮಾಡಿಕೊಳ್ಳಬೇಕೆಂದು ತಿಳಿಯುವುದಕ್ಕಾಗಿ ॥

ಶುನಃ ಪುಚ್ಛಃ –

ಪ್ರೇತಕೃತ್ಯೇಷು ಪಿತ್ರ್ಯೇಷು ಪ್ರಾಚೀನಾವೀತಮಿಶ್ಯತೇ ।
ದಕ್ಷಿಣಾಗ್ರಾಶ್ಚ ದರ್ಭಾಸ್ಯುಃ ಸ ಚ ವೈ ದಕ್ಷಿಣಾಮುಖಿಃ ॥

ಮರಣದಿನದಿಂದ ಮಾಡುವ ಪಿತೃಕಾರ್ಯಗಳಲ್ಲಿ ಪ್ರಾಚೀನಾವೀತವನ್ನು ಮಾಡಿಕೊಳ್ಳಬೇಕು । ದಕ್ಷಿಣಾಗ್ರವಾಗಿ ದರ್ಭೆಗಳನ್ನು ಇಡಬೇಕು, ಕರ್ತೃವು ದಕ್ಷಿಣಾಭಿಮುಖವಾಗಿ ಈ ಕರ್ಮವನ್ನು ಮಾಡಬೇಕು ॥

ಮನುರಪಿ –

ಪ್ರಾಚೀನಾವೀತಿನಾ ಸರ್ವಮಪಸವ್ಯಮತಂದ್ರಿತಾ ।
ಪಿತೃಮಾನಿಧನಾತ್ ಕಾರ್ಯಂ ವಿಧಿವತ್ ದರ್ಭಪಾಣಿನಾ ।
ಆನಿಧನಾತ್ – ಮರಣಮಾರಭ್ಯೇತ್ಯರ್ಥಃ ॥

ಮನುಋಷಿಗಳು ಹೀಗೆ ಹೇಳಿದ್ದಾರೆ – ತಂದೆತಾಯಿಗಳ ಮರಣದಲ್ಲಿ ಕೈಗೆ 1 ದರ್ಭೆಯ ಪವಿತ್ರವನ್ನು ಹಾಕಿಕೊಂಡು, ದಕ್ಷಿಣಾಭಿಮುಖನಾಗಿ, ಸತ್ತದಿನದಿಂದ ಪ್ರಾಚೀನಾವೀತಿಯಾಗಿ ಮಾಡಬೇಕು ॥ 'ಆನಿಧನಾತ್' ಎಂದರೆ ಸತ್ತದಿನದಿಂದ ಎಂದು ಅರ್ಥ ॥

ಬೋಧಾಯನೀಯೇ ಚ –

ಪ್ರಾಚೀನಾವೀತಿನಾ ಕಾರ್ಯಂ ಪ್ರೇತಕರ್ಮ ಚ ಪೈತೃಕಮ್ ।
ನಿವೀತಿನೋ ವಹೇಯುಸ್ತೇ ಜ್ಞಾತಯೋಽನ್ಯೇ ಚ ವಾಹಕಾಃ ॥

ಬೋಧಾಯನರು ಹೀಗೆ ಹೇಳಿದ್ದಾರೆ – ಮರಣದಿನದಿಂದ ಮಾಡುವ ಪಿತೃಕರ್ಮವನ್ನು ಪ್ರಾಚೀನಾವೀತಿಯಿಂದಲೇ ಮಾಡಬೇಕು । ಶವವನ್ನು ಹೊರುವವರು ಹಾರದಂತೆ(ನಿವೀತ) ಯಜ್ಞೋಪವೀತವನ್ನು ಹಾಕಿಕೊಂಡು ಹೊರಬೇಕು ॥

ಅತಃ –

ಸದೋಪವೀತಿನಾ ಭಾವ್ಯಂ ಸದಾಬದ್ಧ ಶಿಖೇನ ಚ ।
ವಿಶಿಖೋವ್ಯುಪವೀತಶ್ಚ ಯತ್ಕರೋತಿ ನ ತತ್ಕೃತಮ್ ॥
ಇತಿ ವಚನಂ ವಿಷಯಭೇದಾದವಿರುದ್ಧಮ್ ॥

ಈ ಕರ್ಮವನ್ನು(ಪ್ರೇತಕರ್ಮ) ಬಿಟ್ಟು ಬೇರೇ ಕರ್ಮಗಳಲ್ಲಿ ಯಾವಾಗಲೂ ತಲೆ ಕೂದಲುಗಳನ್ನು ಗಂಟುಹಾಕಿಕೊಂಡು ಉಪವೀತಿಯಾಗಿಯೇ ಮಾಡಬೇಕು । ಈ ರೀತಿ ಕೂದಲುಗಳನ್ನು ಗಂಟುಹಾಕಿಕೊಳ್ಳದೇ ಉಪವೀತನಾಗಿ ಮಾಡಿದರೂ ಆ ಕರ್ಮವನ್ನು ಮಾಡಿದಂತೆ ಆಗುವುದಿಲ್ಲ, ಎಂದರೆ ಯಾವಾಗಲೂ ಬದ್ಧಶಿಖಿನಾಗಿಯೇ ಇರಬೇಕು ಎಂದು ಅರ್ಥವು । ಎಂಬ ಮಾತು ಈ ವಿಷಯಭೇದಕ್ಕೆ ಸಮ್ಮತವಾದುದು ॥

3. ಕರ್ಮಕರ್ತುರಾದ್ಯಂತಯೋಃ

ಕರ್ಮಕರ್ತುರಾದ್ಯಂತಯೋಃ ದ್ವಿರಾಚಮನಮಾಹ ಭರದ್ವಾಜಃ ।
ಕರ್ಮಾವಸಾನೇ ಕರ್ಮಾದಾವೇವಂ ಆಚಮನಂ ಪುನಃ ।
ಕುರ್ಯಾತ್ ಸ್ವಕರ್ಮ ಸಿದ್ಧ್ಯರ್ಥಂ ಸರ್ವದಾ ಸರ್ವಕರ್ಮಸು ॥

ಕರ್ಮಾದಿಯಲ್ಲಿಯೂ ಮತ್ತು ಕೊನೆಯಲ್ಲಿಯೂ 2 ಆಚಮನಗಳನ್ನು ಮಾಡಬೇಕೆಂದು ಭರದ್ವಾಜಮುನಿಗಳು ತಿಳಿಸಿದ್ದಾರೆ । ಕರ್ಮಗಳ ಕೊನೆಯಲ್ಲಿ ಮತ್ತು ಮೊದಲಲ್ಲಿ 2 ಆಚಮನಗಳನ್ನು ಮಾಡಬೇಕು । ತಾನು ಮಾಡಿದ ಕರ್ಮಗಳ ಸಿದ್ಧಿಗಾಗಿ ಎಲ್ಲಾ ಕರ್ಮಗಳಲ್ಲೂ ಯಾವಾಗಲೂ ಎರಡೆರಡು ಆಚಮನಗಳನ್ನು ಮಾಡಬೇಕು ॥

4. ಪ್ರಾಚೀನಾವೀತತ್ವಮ್

ಪ್ರಾಚೀನಾವೀತತ್ವ ದಕ್ಷಿಣಾಮುಖತ್ವೇ ಪ್ರಾಣಾಯಾಮೇ ವರ್ಜ್ಯಮ್ ॥ ಶುದ್ಧ್ಯರ್ಥತ್ವಾದಾಚಮನಾದಾವಿವ ಸರ್ವತ್ರ ಪ್ರಾಣಾಯಾಮೇಷು ಯಜ್ಞೋಪವೀತೀಸ್ಯಾತ್ । ಸರ್ವತ್ರ = ದೇವಕಾರ್ಯ, ಪಿತೃಕಾರ್ಯ, ಪ್ರೇತಕಾರ್ಯೇಷು ಇತ್ಯರ್ಥಃ ।

ದೇವಾರ್ಚನೇ ಜಪೇ ಹೋಮೇ ಸ್ವಾಧ್ಯಾಯೇ ಶ್ರಾದ್ಧಕರ್ಮಣಿ ।
ಸ್ನಾನೇ ದಾನೇ ತಥಾಧ್ಯಾನೇ ಪ್ರಾಣಾಯಾಮಾಸ್ತ್ರಯಸ್ತ್ರಯಃ ॥

ತತೋऽಭ್ಯಂತರ ಶುದ್ಧ್ಯರ್ಥಂ ಪ್ರಾಣಾಯಾಮಾನ್ ಸಮಾಚರೇತ್ ಇತಿ ಯಾಜ್ಞವಲ್ಕ್ಯಃ ॥

ಪ್ರಾಣಾಯಾಮ ಮಾಡುವಾಗ ದಕ್ಷಿಣಕ್ಕೆ ತಿರುಗದೇ ಪ್ರಾಚೀನಾವೀತವನ್ನು ಮಾಡಿಕೊಳ್ಳದೇ ಇರಬೇಕು। ಶುದ್ಧಿಗಾಗಿ ಮೊದಲು ಆಚಮನವನ್ನು ಮಾಡುವುದು ಮತ್ತು ಪ್ರಾಣಾಯಾಮ ಮಾಡುವಾಗ ಉಪವೀತಿಯಾಗಿಯೇ ಎಲ್ಲಾ ಕರ್ಮಗಳಲ್ಲೂ ಮಾಡಬೇಕು । ಎಲ್ಲಾ ಕರ್ಮಗಳು ಎಂದರೆ – ದೇವಕಾರ್ಯ, ಪಿತೃಕಾರ್ಯ, ಪ್ರೇತಕಾರ್ಯಗಳು ಎಂದು ಅರ್ಥ ॥ ದೇವಾರ್ಚನೆಯಲ್ಲಿ, ಜಪ ಮಾಡುವಾಗ, ಹೋಮ, ವೇದಾಧ್ಯಯನ, ಶ್ರಾದ್ಧಗಳಲ್ಲಿ। ಸ್ನಾನ, ದಾನಕೊಡುವಾಗ, ಧ್ಯಾನದಲ್ಲಿ, 3 ಪ್ರಾಣಾಯಾಮಗಳನ್ನು ಮಾಡಬೇಕು ॥ ಅಂತಃಕರಣ ಶುದ್ಧಿಗಾಗಿ 3 ಪ್ರಾಣಾಯಾಮಗಳನ್ನು ಮಾಡಬೇಕೆಂದು ಯಾಜ್ಞವಲ್ಕ್ಯರು ಹೇಳಿದ್ದಾರೆ ॥

5. ಪ್ರಾಣಾಯಾಮ ಪ್ರಕಾರಃ

ಪ್ರಣವೇನತು ಸಂಯುಕ್ತಾ ವ್ಯಾಹೃತೀಸ್ಸಪ್ತ ನಿತ್ಯಶಃ ।
ಗಾಯತ್ರೀಂ ಶಿರಸಾಸಾರ್ಧಂ ಮನಸಾತ್ರಿರ್ಜಪೇದ್ದ್ವಿಜಃ ॥

ಪ್ರಾಣಾಯಾಮಃ –

ಮುಖಿನಾಸಿಕಾಬಿಲ ಸಂಚಾರಿಣಃ ಪ್ರಾಣವಾಯೋರ್ನಿರೋಧಃ ।
ತತ್ಕಾಲ ಏವ ಜಪಂ ಕುರ್ಯಾತ್ ನ ತು ರೇಚಕ ಪೂರಕಯೋಃ ।
ಕುಂಭಕೇನ ಜಪಂ ಕುರ್ಯಾತ್ ಪ್ರಾಣಾಯಾಮಸ್ಯ ಲಕ್ಷಣಮ್ ॥
ಇತಿ ಸ್ಮೃತೇಃ

ಓಂ ಕಾರದಿಂದ ಕೂಡಿರುವ 7 ವ್ಯಾಹೃತಿಗಳನ್ನು ಒಳಗೊಂಡಿರುವ । ಗಾಯತ್ರಿಯನ್ನೂ ಸಹಾ ಒಳಗೊಂಡಿರುವ ಹಾಗೂ ಶಿರಸ್ಥಾನೀಯವಾದ (ಓಮಾಪೋ.....) ಮುಂತಾದವುಗಳನ್ನೂ ಸೇರಿಸಿಕೊಂಡು ಬ್ರಾಹ್ಮಣನಾದವನು 3 ಬಾರಿ ಜಪಿಸಬೇಕು ॥

ಬಾಯಿಯನ್ನು ಹಾಗೂ ಮೂಗಿನ 1 ರಂಧ್ರವನ್ನು ಮುಚ್ಚಿಕೊಂಡು, ಗಾಳಿಯನ್ನು ಎಳೆದುಕೊಂಡು(ಪೂರಕ) ಮತ್ತೂ ಗಾಳಿಯನ್ನು ಅಲ್ಲಿ ಹಿಡಿದಿಟ್ಟುಕೊಂಡು(ಕುಂಭಕ) ಈ ಪ್ರಾಣಾಯಾಮ ಮಂತ್ರವನ್ನು ಜಪಿಸಬೇಕು । ಆದರೆ ಪೂರಕ–ರೇಚಕ(ಗಾಳಿಯನ್ನು ಒಳಗೆ ಎಳೆದುಕೊಳ್ಳುವಾಗ ಹಾಗೂ ಹೊರಗೆ ಬಿಡುವಾಗ)ಗಳಲ್ಲಿ ಮಂತ್ರವನ್ನು ಹೇಳಬಾರದು । ಕುಂಭಕದಲ್ಲಿಯೇ ಮಂತ್ರವನ್ನು ಹೇಳುವ ಲಕ್ಷಣಕ್ಕೇ ಪ್ರಾಣಾಯಾಮವೆಂದು ಹೆಸರು ॥

6. ಸಂಕಲ್ಪ ಪ್ರಕಾರಃ

ಸದರ್ಭಹಸ್ತೋ ಜಾನೂರ್ಧ್ವೋ ದಕ್ಷಿಣೇ ದಕ್ಷಿಣೋತ್ತರೌ ।
ಕೃತ್ವಾ ಜಾನುನಿ ಕರ್ತವ್ಯಮೇತತ್ಕರ್ಮ ಕರೋತಿ ಯತ್ ॥
ಸ್ವಮಾನಸೇನ ಸ್ಮರಣಂ ಯತ್ತತ್ಸಂಕಲ್ಪ ಈರಿತಃ ॥

ಇತಿ ಭರದ್ವಾಜಃ । ದಕ್ಷಿಣೋತ್ತರೌ ಕರಾವಿತಿ ಶೇಷಃ । ದಕ್ಷಿಣೇ ಜಾನುನಿ ದಕ್ಷಿಣೋತ್ತರೌ ಕರೌ ಕೃತ್ವೇತಿ ನಿಯಮಾನ್ನಾನ್ಯಥಾ ಕಾರ್ಯಃ ॥

ದರ್ಭೆಗಳನ್ನು ಕೈಯಲ್ಲಿ ಹಿಡಿದುಕೊಂಡು, ಬಲಕಾಲಿನ ಮಂಡಿಯಮೇಲೆ ಎಡಹಸ್ತದ ಮೇಲೆ ಬಲಹಸ್ತವನ್ನು ಇಟ್ಟುಕೊಂಡು । ಎಲ್ಲಾ ಕರ್ಮಗಳಲ್ಲೂ ಸಂಕಲ್ಪವನ್ನು ಈ ರೀತಿಯಾಗಿಯೇ ಮಾಡಬೇಕು । ಬೇರೇ ಕ್ರಮಗಳನ್ನು ಅನುಸರಿಸಬಾರದೆಂದು ಭರದ್ವಾಜರು ಹೇಳಿದ್ದಾರೆ ॥

ಸ್ಮೃತ್ಯರ್ಥಸಾರೇ –

ಆವಾಹನೇऽರ್ಘ್ಯ ಸಂಕಲ್ಪೇ ಪಿಂಡದಾನೇ ತಿಲೋದಕೇ ।
ಅಕ್ಷಯಾಸನಯೋಃ ಪಾದ್ಯೇ ಗೋತ್ರಂ ನಾಮ ಪ್ರಕೀರ್ತಯೇತ್ ॥

ಆವಾಹನೆ ಮಾಡುವಾಗ, ಅರ್ಘ್ಯಕೊಡುವಾಗ, ಸಂಕಲ್ಪ ಮಾಡುವಾಗ, ಪಿಂಡ ಹಾಕುವಾಗ, ಎಳ್ಳಿನ ತರ್ಪಣದಲ್ಲಿ । ಅಕ್ಷಯ್ಯ ವಾಕ್ಯಗಳನ್ನು ಹೇಳುವಾಗ(ಅಕ್ಷಯ್ಯಮಸ್ತ್ವಿತಿ ಬ್ರೂತ.....), ಆಸನವನ್ನು ಕೊಡುವಾಗ, ಪಾದ್ಯವನ್ನು ಕೊಡುವಾಗ, ತಾನು ಯಾರ ಕರ್ಮವನ್ನು ಮಾಡುತ್ತಾನೋ ಅವರ ಗೋತ್ರವನ್ನೂ ಹೆಸರನ್ನೂ ಹೇಳಬೇಕು ॥

7. ನಿಯಮಾಂತರಮಾಹ

ಏಕಂ ವಾಸೋ ದಕ್ಷಿಣಾಗ್ರಾ ದರ್ಭಾಃ ಪ್ರಸವ್ಯಂ ತೂಷ್ಣೀಂ ಸಮಂತಂ ಪರಿಷೇಚನಂ ಪಿತೃತೀರ್ಥೇನೋದಕ ಪಿಂಡಬಲಿ ಪ್ರದಾನಮ್ ॥ ಸಿಗ್ಭಿರವಧೂನ್ವಂತಃ – ತೇಷು ಜ್ಞಾತಯಃ ಇತ್ಯಾದಿ ಬಹುವಚನೇನ ಸರ್ವೇಜ್ಞಾತಯಃ ಪ್ರತ್ಯೇಕಂ ಸಮಂತ್ರಂ ತತ್ತತ್ಕರ್ಮ ಕುರ್ಯುಃ ॥

ಈ ಪಿತೃಕರ್ಮವನ್ನು ಮಾಡುವ ಕರ್ತೃವು ಒಂದೇ ಬಟ್ಟೆಯನ್ನು ಉಡಬೇಕು, ದಕ್ಷಿಣಾಗ್ರವಾಗಿ ದರ್ಭೆಗಳನ್ನು ಉಪಯೋಗಿಸಬೇಕು, ಪ್ರಾಚೀನಾವೀತದಿಂದ ಅಮಂತ್ರಕವಾಗಿ ಅಗ್ನಿಗೆ ಪರಿಷೇಚನ, ಪಿತೃತೀರ್ಥದಿಂದ ತಿಲತರ್ಪಣ, ಪಿಂಡ ಮತ್ತು ಬಲಿಪ್ರದಾನಗಳನ್ನು ಮಾಡಬೇಕು ॥ ಶಿಖೆಯನ್ನು ಅಲ್ಲಾಡಿಸುತ್ತಾ, ಜ್ಞಾತಿಗಳು ಮುಂತಾದವರು ಬಹುವಚನದಿಂದ ಎಲ್ಲಾ ಜ್ಞಾತಿಗಳು ಸಮಂತ್ರಕವಾಗಿ ಬೇರೆಬೇರೆಯಾಗಿ ಆಯಾಯಾ ಕರ್ಮಗಳನ್ನು ಮಾಡಬೇಕು ॥

8. ಜ್ಞಾತಿಬಾಹುಳ್ಯೇ ಧೂನನಾದಿ ಅನುಷ್ಠಾನ ಕ್ರಮಮಾಹ

(ತುಂಬಾ ಜ್ಞಾತಿಗಳು ಇದ್ದಾಗ, ಈ ಗಾಳಿಬೀಸುವ ಕ್ರಮವನ್ನು ಹೀಗೆ ಹೇಳಲಾಗಿದೆ)

ಧೂನನಾದಿಷು ಸರ್ವತ್ರ ಕನಿಷ್ಠಃ ಪ್ರಥಮಂ ಇತರೇ ಮಧ್ಯೇ ಯಥಾ ವೃದ್ಧಂ ಕರ್ತಾ ಪಶ್ಚಾತ್ ಸ್ತ್ರಿಯೋಽಗ್ರೇ ಸರ್ವೇಷಾಂ। ತಾಶ್ಚ ಕನಿಷ್ಠಪ್ರಥಮಾ ಏವೇತಿ ಬೋಧಾಯನಃ। ಸರ್ವತ್ರ ಅವಿರುದ್ಧಾನುಕ್ತಾರ್ಥಸ್ತು ಸಂಗೃಹೀತ ಏವ। ಸರ್ವಶಾಖಾಪ್ರತ್ಯಯ ನ್ಯಾಯೇನ ಸಾ ಕಾಂಕ್ಷಾಣಾ ಮಾಕಾಂಕ್ಷಾ ಪೂರಣಸ್ಯಾನ್ಯತಃ ಕರ್ತುಮುಚಿತತ್ವಾತ್ । ಧೂನನಾದಿಷು – 'ಧೂನನೇಽನ್ವಾರಂಭಣೇ ಸಂಗಾಹನೇ ಸಂಸರ್ಪಣ ಉದಕೋಪಸ್ಪರ್ಶನ ಆರೋಹಣ ಇತಿ। ಸರ್ವತ್ರ ಏವಂ ಪ್ರಕಾರೇಷ್ವೇವೇತಿ ಸೂತ್ರಾರ್ಥಃ।

ಏವಮಾನುಪೂರ್ವ್ಯಾತ್ತತ್ತತ್ಕರ್ಮ ಕುರ್ಯುರಿತಿ ನಿಯಮ್ಯತೇ । ತದೇವಂ ಮಧ್ಯೇ ಕೇಷಾಂಚಿತ್ ಕನಿಷ್ಠಾನುಕ್ರಮ ಕಲ್ಪನಮಜ್ಞಾನ ವಿಜೃಂಭಿತಮೇವ । 'ಇತಿ' ಶಬ್ದಾದವಗಾಹನ ತರ್ಪಣಾದಿಷ್ವೇವಂ ಪ್ರಕಾರ ಇತ್ಯರ್ಥಃ । ಇತಿ ಪರಿಭಾಷಾ ॥

ಈ ಕೆಲಸಗಳನ್ನು ಎಲ್ಲಡೆಯಲ್ಲಿಯೂ ಜ್ಞಾತಿಗಳಲ್ಲಿ ಚಿಕ್ಕವನು ಮೊದಲು ಹಿರಿಯವರು ನಂತರ, ಕೊನೆಯಲ್ಲಿ ಕರ್ತೃವು ಮಾಡಬೇಕು। ಹೆಂಗಸರು ಎಲ್ಲರಿಗಿಂತ ಮೊದಲು। ಆ ಸ್ತ್ರೀಯರಲ್ಲಿಯೂ ಸಣ್ಣವಳೇ ಮೊದಲು ಎಂದು ಬೋಧಾಯನರು ಹೇಳಿದ್ದಾರೆ। ಎಲ್ಲೆಡೆಯಲ್ಲಿಯೂ ವಿರೋಧವಿಲ್ಲದೇ ಹೇಳಿರುವುದನ್ನು ಸಂಗ್ರಹಿಸಲಾಗಿದೆ। 'ಎಲ್ಲಾ ವೇದಶಾಖೆಗಳು ಪ್ರಮಾಣಗಳಾಗಿವೆ ಎಂಬ ನ್ಯಾಯದಿಂದ, ಬೇರೇಶಾಖೆಯ ಅರ್ಥವನ್ನು ಇನ್ನೊಂದು ಶಾಖೆಯ ವೇದಮಂತ್ರಗಳು ಅರ್ಥಪೂರಣೆಗಾಗಿ ಆಕಾಂಕ್ಷೆ(ಸಾಪೇಕ್ಷತೆ)ಯನ್ನು ಹೊಂದಿರುತ್ತವೆಯಾದ್ದರಿಂದ, ಆ ಸಾಪೇಕ್ಷತೆಯನ್ನು ಪೂರ್ಣಗೊಳಿಸುವುದು ನ್ಯಾಯಸಮ್ಮತವಾಗಿ ಇರುವುದರಿಂದ ಎಲ್ಲ ವೇದಶಾಖೆಗಳಿಗೂ ಅವಿರುದ್ಧವಾದಂತಹ ಅರ್ಥವನ್ನು ಸಂಗ್ರಹಣೆ ಮಾಡಿರುವುದು ಯೋಗ್ಯವಾಗಿದೆ', ಎಂಬ ನ್ಯಾಯದಂತೆ। ಗಾಳಿಬೀಸುವಿಕೆ ಮುಂತಾದವುಗಳಲ್ಲಿ – ಶವಕ್ಕೆ ಗಾಳಿಬೀಸುವಿಕೆಯ ವಿಧಿ, ಅನುಸರಿಸಿ ಪ್ರಾರಂಭಿಸುವ ಕರ್ಮ, ಮುಳುಗು ಸ್ನಾನವಿಧಿ, ಶವದ ಜೊತೆ ಹೋಗುವುದು ಮುಂತಾದ ಓಡಾಡುವ ವಿಧಿ, ನೀರು ಮುಟ್ಟುವಿಕೆ ಹಾಗೂ ಆಚಮನ, ಹೊರುವಿಕೆ, ಈ ಎಲ್ಲಾ ಸಂದರ್ಭಗಳಲ್ಲೂ ಹೀಗೆ ಅರ್ಥಮಾಡಬೇಕು। ಎಲ್ಲೆಡೆಯಲ್ಲಿಯೂ ಈ ರೀತಿಯಾಗಿಯೇ ಎಂದು ಸೂತ್ರದ ಅರ್ಥ। ಹೀಗೆ ಸಾಲಾದ ಕರ್ಮಗಳಲ್ಲಿ ಆಯಾಯಾ ಕೆಲಸಗಳನ್ನು ಮಾಡಬೇಕು ಎಂದು ನಿಯಮವನ್ನು ಹೇಳಲಾಗಿದೆ। ಈ ರೀತಿಯಾಗಿ ಇರಲಾಗಿ, ಮಧ್ಯದಲ್ಲಿ ಕೆಲವರು ಕನಿಷ್ಠನಿಂದ ಅನುಕ್ರಮವಾಗಿ ಆರಂಭಿಸುವುದು ಎಂಬ ನಿಯಮವು ಅಜ್ಞಾನದಿಂದ ಹೇಳಿರುವ ನಿಯಮವೆಂದು ಹೇಳುತ್ತಾರೆ । ಇಲ್ಲಿ(ಅವಗಾಹನ ತರ್ಪಣಾದಿಗಳಲ್ಲಿ), "ಇತಿ" ಎಂಬ ಶಬ್ದಕ್ಕೆ "ಈ ಪ್ರಕಾರವಾಗಿ" ಎಂಬ ಅರ್ಥವು ಎಂದು ಪರಿಭಾಷೆಯಲ್ಲಿ ತಿಳಿಸಿದೆ ॥

9. ಆಪತ್ಕಾಲೇ ಮುಮೂರ್ಷುಭಿಃ ಶಾಸ್ತ್ರ ಪ್ರತ್ಯಯೈರನುಷ್ಠೇಯಾನಿ

(ಸಾಯುವ ಕಡೆಕ್ಷಣದಲ್ಲಿ, ಶಾಸ್ತ್ರದಲ್ಲಿ ಹೇಳಿರುವಂತೆ ಅನುಷ್ಠಾನ ಮಾಡಬೇಕಾದವುಗಳು)

ಅಥ ಶಾಸ್ತ್ರಾದಿನಾ ನಿಶ್ಚಿತ ಮರಣಸಂಭಾವನಾಯಾಂ ಪಾಪಭೀರುರಾದೌ ಶರೀರಶುದ್ಧ್ಯರ್ಥಂ ಸಮುದ್ರಗಾ ಮಹಾನದ್ಯಾಂ ಸ್ನಾಯಾತ್ । ತಸ್ಯಾಶಕ್ತೌ ಸ್ವಾರ್ಥಂ ಅನ್ಯೇನ ಪುತ್ರಾದಿನಾ ವಾ ಕಾರಯೇತ್ । ಸಮೀಪಸ್ಥ ಪುಣ್ಯತೀರ್ಥೇ೯ವಾsವಗಾಹಯೇತ್ । ಅಸಾಮರ್ಥ್ಯಾತ್ ಶರೀರಸ್ಯ ಮಂತ್ರಪುತೋಕ್ಷೋದಕೇನ ವಾ ಸ್ನಾಯಾತ್ । ದೇಶಕಾಲ ವೈಷಮ್ಯಾನ್ಮಂತ್ರಸ್ನಾನಂ ಮಾನಸಿಕಸ್ನಾನಂ ವಾ ಯಥಾಶಕ್ತಿ ಮನಃಪೂತಂ ಕೃತ್ವಾsಚಮ್ಯ । ಧೃತಶುದ್ಧವಸ್ತ್ರಃ ತ್ರಿಪುಂಡ್ರೋ ಊರ್ಧ್ವಪುಂಡ್ರೋ ವಾ ಸ್ವಸ್ವಾಚಾರನುಗುಣಂ ರುದ್ರಾಕ್ಷಾದಿ ಮಾಲಾಂ ಧಾರಯಿತ್ವಾ । ಪವಿತ್ರಪಾಣಿಃ ತಾತ್ಕಾಲಿಕಾನಿ ನಿತ್ಯಕರ್ಮಾಣ್ಯನುಷ್ಠಾಯ ಔಪಾಸನಾಗ್ನಿಂ ಸಂಧಾರ್ಯ ಭಗವದಾರಾಧನಂ ಗೀತೋಪನಿಷದಾದೀನಾಂ ಪಾರಾಯಣಂ ಚ ಯಥಾಯೋಗ್ಯಂ ಚರಿತ್ವಾ । ತುಳಸೀದಳ ಸಂಮಿಶ್ರಂ ಭಗವತ್ತೀರ್ಥಂ ಗಂಗಾತೀರ್ಥಂ ಚ ನಿಕ್ಷಿಪ್ಯ ಶರೀರೇsಪಿ ಸೇಚಯೇತ್ । ತತೋ ಭಗವನ್ನಾಮಾನಿ ಸಂಕೀರ್ತಯನ್ ಶ್ರೋತ್ರಿಯೈಃ ಶುದ್ಧೈಶ್ಚ ಮಹದ್ಭಿರವಲೋಕನಸ್ಯ ಪಾತ್ರಂ ಭವೇತ್ ॥

ಸಾವು ಸಮೀಪಿಸುತ್ತಿರುವ, ಪಾಪಗಳಿಗೆ ಹೆದರುವ(ಧರ್ಮಿಷ್ಠನಾದ) ವ್ಯಕ್ತಿಯು ಮೊದಲು ದೇಹಶುದ್ಧಿಗಾಗಿ ಸಮುದ್ರವನ್ನು ಸೇರುವ ಮಹಾನದಿಗಳಲ್ಲಿ ಸ್ನಾನ ಮಾಡಬೇಕು । ಆದರೆ ಅವನ ಅಶಕ್ತತೆಯ ಸಂದರ್ಭದಲ್ಲಿ, ಬೇರೆಯವರಿಂದ ಅಥವಾ ಮಕ್ಕಳಿಂದ ಮಾಡಿಸಬೇಕು। ಹತ್ತಿರದಲ್ಲಿರುವ ಪುಣ್ಯತೀರ್ಥದಲ್ಲಿಯಾದರೂ ಸ್ನಾನ ಮಾಡಬೇಕು । ಇದಕ್ಕೂ ಸಾಮರ್ಥ್ಯವಿಲ್ಲದಾದಾಗ, ಮಂತ್ರದಿಂದ

ಅಭಿಮಂತ್ರಣೆಯಾದ ತೀರ್ಥದಿಂದ ಅಥವಾ ಬಿಸಿನೀರಿನಿಂದ ಸ್ನಾನ ಮಾಡಬೇಕು। ದೇಶ–ಕಾಲ–ಪರಿಸ್ಥಿತಿಗಳಿಗೆ ಅನುಗುಣವಾಗಿ ಮಂತ್ರಸ್ನಾನವನ್ನಾಗಲೀ – ಮಾನಸಿಕಸ್ನಾನವನ್ನಾಗಲೀ – ಯಥಾಶಕ್ತಿ ಮಾನಸಿಕ ಶುದ್ಧತೆಯಿಂದ ಸ್ನಾನವನ್ನು ಮಾಡಿಸಿ, ಆಚಮನವನ್ನು ಮಾಡಿ। ಬಿಳಿಯ ಶುದ್ಧವಸ್ತ್ರವನ್ನು ಧರಿಸಿ, ವಿಭೂತಿ, ತಿಲಕಾದಿಗಳನ್ನು ಧರಿಸಿ, ತಮ್ಮ ಋಷಿಗಳ ನಡವಳಿಕೆಗಳಿಗನುಗುಣವಾಗಿ ರುದ್ರಾಕ್ಷಿ, ತುಳಸೀಹಾರ ಮುಂತಾದವುಗಳನ್ನು ಹಾಕಿ। 1 ದರ್ಭೆಯ ಪವಿತ್ರವನ್ನು ಹಾಕಿಕೊಂಡು, ತಾತ್ಕಾಲಿಕವಾಗಿ ನಿತ್ಯಕರ್ಮಗಳನ್ನು ಮಾಡಿ, ಔಪಾಸನಾಗ್ನಿಯನ್ನು ಧರಿಸಿ, ದೇವರಪೂಜೆ, ಭಗವದ್ಗೀತೆ–ಉಪನಿಷತ್ತು ಮುಂತಾದವುಗಳ ಪಾರಾಯಣವನ್ನೂ ಯಥಾಯೋಗ್ಯವಾಗಿ ಮಾಡಬೇಕು। ತುಳಸೀಸಹಿತವಾದ ಅಭಿಷೇಕದ ತೀರ್ಥವನ್ನು ಮತ್ತು ಗಂಗಾತೀರ್ಥವನ್ನೂ ಕುಡಿಸಿ, ದೇಹಕ್ಕೆಲ್ಲಾ ಪ್ರೋಕ್ಷಿಸಬೇಕು। ಆಮೇಲೆ ಭಗವಂತನ ಹೆಸರುಗಳನ್ನೂ ಹೇಳುತ್ತಾ, ಪರಿಶುದ್ಧರಾದ ವೈದಿಕ ಬ್ರಾಹ್ಮಣರಿಂದ ಮತ್ತು ಮಹಾತ್ಮರಿಂದ ಅವಲೋಕನವನ್ನು ಮಾಡಿಸಬೇಕು ॥

10. ಯಥಾಸಂಭವ ದಾನಾನಿ

ಅನ್ನಪಾನಾಶ್ವ ಗೋ ಭೂ ತಿಲ ಹಿರಣ್ಯ ಕಾರ್ಪಾಸಾಯಃ ಪಿಂಡ ವಸ್ತ್ರಾದಿ ದಾನಾನಿ ಯಥಾಸಂಭವಂ ಕೃತ್ವಾ। ಬ್ರಾಹ್ಮಣಾನ್ ಅನ್ನಾದಿನಾ ತರ್ಪಯಿತ್ವಾ ಯಥಾಶಕ್ತಿ ದಕ್ಷಿಣಾತಾಂಬೂಲಾನಿ ದದ್ಯಾತ್ ॥

ಆಹಾರ, ಪಾನೀಯ, ಕುದುರೆ, ಹಸು, ಭೂಮಿ, ಎಳ್ಳು, ಚಿನ್ನ, ಹತ್ತಿ, ಕಬ್ಬಿಣ, ಬೆಲ್ಲ, ಬಟ್ಟೆ, ಇತ್ಯಾದಿ ದಾನಗಳನ್ನು ಯಥಾಶಕ್ತಿಯಾಗಿ ಮಾಡಬೇಕು। ಬ್ರಾಹ್ಮಣರಿಗೆ ಅನ್ನಾದಿಗಳಿಂದ ತೃಪ್ತಿಗೊಳಿಸಿ, ಶಕ್ತಿಗನುಗುಣವಾಗಿ ದಕ್ಷಿಣೆ ತಾಂಬೂಲಗಳನ್ನು ಕೊಡಬೇಕು ॥

11. ಮರಣಸಂಶಯೇ

ಸ್ನಾನಾದಿನಾ ಶುದ್ಧಸ್ಸನ್ ಗಣಪತಿಪೂಜಾಂ ಪುಣ್ಯಾಹವಾಚನಂ ಕೃತ್ವಾ । ಪ್ರಾಣಾನಾಯಮ್ಯ, ...ಮಮ ಶರೀರಶುದ್ಧ್ಯರ್ಥಂ ಪಂಚಗವ್ಯಪ್ರಾಶನ ಯೋಗ್ಯತಾ ಸಿದ್ಧ್ಯರ್ಥಂ ಪ್ರಾಜಾಪತ್ಯಕೃಚ್ಛ್ರಂ ಹಿರಣ್ಯರೂಪೇನ ಕರಿಷ್ಯೇ – ಇತಿ ಸಂಕಲ್ಪ್ಯ, ತತ್ಕೃತ್ವಾ । ಪಂಚಗವ್ಯ ಪ್ರಾಶನಂ ಚ ಕುರ್ಯಾತ್ ॥

ಮರಣ ಸಂಶಯದಲ್ಲಿ, ಸ್ನಾನ ಮಾಡಿಕೊಂಡು, ಶುದ್ಧವಸ್ತ್ರವನ್ನು ಧರಿಸಿ, ಗಣಪತಿಪೂಜೆ ಮತ್ತು ಪುಣ್ಯಾಹಗಳನ್ನು ಮಾಡಬೇಕು । ನಂತರ ಪ್ರಾಣಾಯಾಮ ಮಾಡಿ, ನನ್ನ ಶರೀರದ ಶುದ್ಧಿಗಾಗಿ, ಪಂಚಗವ್ಯವನ್ನು ಕುಡಿಯಲು ಯೋಗ್ಯತೆಗೆ ಪ್ರಾಜಾಪತ್ಯಕೃಚ್ಛ್ರವನ್ನು ಹಣದ ರೂಪದಲ್ಲಿ ಮಾಡುತ್ತೇನೆಂದು ಸಂಕಲ್ಪಿಸಿ, ಮಾಡಬೇಕು । ನಂತರ ಪಂಚಗವ್ಯವನ್ನು ಕುಡಿಯಬೇಕು ॥

ತತ್ಪ್ರಯೋಗಸ್ತು – ಗೋಮೂತ್ರಂ ಗೋಮಯಂ ಕ್ಷೀರಂ ದಧಿ ಸರ್ಪಿಃ ಕುಶೋದಕಂ । ಇತಿ ಪದಾರ್ಥಾನ್ ಪುರಸ್ತಾದಾರಭ್ಯ ಪ್ರದಕ್ಷಿಣಂ ಸ್ಥಾಪಯಿತ್ವಾ । ತೇಷು ಯಥಾಕ್ರಮಂ ವರುಣ ಹವ್ಯವಾಹನ ಸೋಮ ವಾಯುರವಯ ಇತಿ ದೇವತಾಧಿಷ್ಠಿತಂ ಧ್ಯಾತ್ವಾ । ಯಥಾಸಂಭವಂ ಸಂಪೂಜ್ಯ, ಗಾಯತ್ರ್ಯಾ ಗೋಮೂತ್ರಂ – ಗಂಧದ್ವಾರೇತಿ ಗೋಮಯಂ – ಆಪ್ಯಾಯಸ್ವೇತಿ ಕ್ಷೀರಂ – ದಧಿಕ್ರಾವ್ಣ್ಣ ಇತಿ ದಧಿ – ಶುಕ್ರಮಸೀತ್ಯಾಜ್ಯಂ – ದೇವಸ್ಯತ್ವೇತಿ ಕುಶೋದಕಂ ಚ ಆದಾಯ । ಏಕಸ್ಮಿನ್ ಪಾತ್ರೇ ಯಥಾಕ್ರಮಂ ಸಂಸೃಜ್ಯ, ಸಪ್ತದರ್ಭಪವಿತ್ರೇಣ 'ಓಂ' ಇತ್ಯಾಲೋಡ್ಯ । ಪ್ರಣವೇನ(ಓಂ) ಉದ್ಧೃತ್ಯ ।

ಯತ್ವಗಸ್ಥಿಗತಂ ಪಾಪಂ ದೇಹೇ ತಿಷ್ಠತಿ ದೇಹಿನಾಮ್(ಮಾಮಕೇ) ।
ಪ್ರಾಶನಂ ಪಂಚಗವ್ಯಸ್ಯ ದಹತ್ವಗ್ನಿರಿವೇಂಧನಮ್ ॥

ಇತಿ ಪ್ರಣವೇನ ಚ ಪ್ರಾಶ್ಯಾಚಾಮೇತ್ ॥

ಅದರ ಪ್ರಯೋಗವು ಹೀಗಿದೆ – ಗೋಮೂತ್ರ, ಸಗಣಿ, ಹಾಲು, ಮೊಸರು, ತುಪ್ಪ, ದರ್ಭೆಸಹಿತನೀರು, ಈ 5 ಪದಾರ್ಥಗಳನ್ನು ಪೂರ್ವದಿಕ್ಕಿನಿಂದ ಆರಂಭಿಸಿ, ಪ್ರದಕ್ಷಿಣಾಕಾರವಾಗಿ ಇಡಬೇಕು । ಅವುಗಳಲ್ಲಿ ಕ್ರಮವನ್ನು ಅನುಸರಿಸಿ ವರುಣ, ಅಗ್ನಿ, ಸೋಮ, ವಾಯು, ಸೂರ್ಯ ಈ ದೇವತೆಗಳನ್ನು ಆವಾಹಿಸಿ । ಪೂಜಿಸಿ, ಗಾಯತ್ರೀ ಮಂತ್ರದಿಂದ ಗೋಮೂತ್ರವನ್ನೂ, ಗಂಧದ್ವಾರಾಂ ಮಂತ್ರದಿಂದ ಸಗಣಿಯನ್ನೂ, ಆಪ್ಯಾಯಸ್ವ ಮಂತ್ರದಿಂದ ಹಾಲನ್ನೂ, ದಧಿಕ್ರಾವ್ಣ್ಣ ಮಂತ್ರದಿಂದ ಮೊಸರನ್ನೂ, ಶುಕ್ರಮಸಿ ಮಂತ್ರದಿಂದ ತುಪ್ಪವನ್ನೂ, ದೇವಸ್ಯತ್ವಾ ಮಂತ್ರದಿಂದ ದರ್ಭೆಸಹಿತ ನೀರನ್ನೂ ತೆಗೆದುಕೊಂಡು । ಒಂದು ಪ್ರತ್ಯೇಕಪಾತ್ರೆಗೆ ಹಾಕಿ, ಕ್ರಮವಾಗಿ 7 ದರ್ಭೆಗಳ ಕೂರ್ಚದಿಂದ ಓಂ ಕಾರದಿಂದ ಕೂಡಿಸಿ । ಓಂ ಎಂದು ಆ ಪಾತ್ರೆಯನ್ನು ಎತ್ತಿ ।

ಮೂಳೆಗಳಿಗೂ ಸೇರಿರುವ, ನನ್ನ ದೇಹದಲ್ಲಿರುವ, ಪಾಪಗಳು ಪಂಚಗವ್ಯದ ಕುಡಿಯುವಿಕೆಯಿಂದ । ಅಗ್ನಿಯು ಸೌದೆಯನ್ನು ಹೇಗೆ ದಹಿಸುತ್ತಾನೋ ಹಾಗೇ ನನ್ನ ಎಲ್ಲಾ ಪಾಪಗಳೂ ದಹಿಸಿಹೋಗಲಿ ॥ ಎಂದು ಹೇಳಿ, ಓಂ ಕಾರವನ್ನು ಹೇಳಿ ಕುಡಿಯಬೇಕು, ನಂತರ ಆಚಮನ ಮಾಡಬೇಕು ॥

12. ಅಥ ಸರ್ವಪ್ರಾಯಶ್ಚಿತ್ತಮ್

ಪಾಪವಿಮೋಚನ ಕಾಮಸ್ಸಭ್ಯಾನಾಹೂಯ ಯಥಾಶಕ್ತಿ ಪರಿಷದ್ದಕ್ಷಿಣಾಂ ಗೃಹೀತ್ವಾ ಉತ್ಥಾಯ ಸಭ್ಯಾನ್ ಪ್ರದಕ್ಷಿಣೀಕೃತ್ಯ ।

ಓಂ ನಮಃ ಸದಸೇ.....ಪೃಥಿವ್ಯೈ ॥

ನಮಸ್ಕೃತ್ಯ । ಅಶೇಷೇ, ಹೇ ಪರಿಷತ್.....ಸ್ವೀಕೃತ್ಯ, ... ಗೋತ್ರಸ್ಯ .....ಶರ್ಮಣಃ ಮಮ(ಅಮುಕಸ್ಯ) ಪಿತುಃ ಅವಸ್ಥಾತ್ರಯೇಷು ಕಾಯಿಕ ವಾಚಿಕ ಮಾನಸಿಕಾದಿ ಸಮಸ್ತ ಪಾಪ ಪರಿಹಾರಾರ್ಥಂ ಯಥಾಶಕ್ತಿ ಹಿರಣ್ಯರೂಪೇಣ ಸರ್ವಪ್ರಾಯಶ್ಚಿತ್ತಂ ಕರ್ತುಂ ಯೋಗ್ಯತಾ ಸಿದ್ಧಿಮನುಗೃಹಾಣ, ಇತಿ ಪ್ರಾರ್ಥ್ಯ । ದಕ್ಷಿಣಾನ್ ದದ್ಯಾತ್ । ಯೋಗ್ಯತಾಸಿದ್ಧಿಃ ಅಸ್ತು, ಇತಿ ಪ್ರತಿವಚನಮ್ ॥

ಪಾಪಗಳನ್ನು ನಿವಾರಿಸಿಕೊಳ್ಳಲು ಇಚ್ಛೆಯುಳ್ಳವನು, ಸಾತ್ವಿಕಬ್ರಾಹ್ಮಣರನ್ನು ಕರೆದು, ಶಕ್ತಿಗನುಗುಣವಾಗಿ ದಕ್ಷಿಣೆಯನ್ನು ಹಿಡಿದುಕೊಂಡು, ನಿಂತುಕೊಂಡು ಬ್ರಾಹ್ಮಣರನ್ನು ಮಂತ್ರದಿಂದ ಪ್ರದಕ್ಷಿಣೆ ಮಾಡಿ । ನಮಸ್ಕರಿಸಿ । ಸಂಪೂರ್ಣವಾದ ಎಲೈ ಸಾಧುಗಳೇ,.....ಈ ದಕ್ಷಿಣೆಯನ್ನು ಸ್ವೀಕರಿಸಿ, ಈ ಗೋತ್ರದ, ಈ ಹೆಸರಿನ ನನ್ನ ತಂದೆಯ 3 ಅವಸ್ಥೆಗಳಲ್ಲಿಯೂ, ದೇಹದ–ನಾಲಿಗೆಯ–ಮನಸ್ಸಿನ, ಇತ್ಯಾದಿಗಳಿಂದ ಮಾಡಿದ ಎಲ್ಲಾ ಪಾಪಗಳ ನಿವಾರಣೆಗಾಗಿ, ನನ್ನ ಶಕ್ತಿಗನುಗುಣವಾಗಿ ಹಣದ ರೂಪದಿಂದ ಈ ಎಲ್ಲಾ ಪಾಪಗಳಿಗೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ನನಗೆ ಯೋಗ್ಯತೆಯನ್ನು ಅನುಗ್ರಹಿಸಿ, ಎಂದು ಅವರನ್ನು ಬೇಡಿಕೊಂಡು ದಕ್ಷಿಣೆಯನ್ನು ಇಡಬೇಕು । ನಿನಗೆ ಆ ಅರ್ಹತೆಯು ಉಂಟಾಗಲಿ ಎಂದು ಸಭ್ಯರು ಹರಸಬೇಕು ॥

ಉಪವಿಶ್ಯ, ತ್ರಿಃ ಪ್ರಾಣಾನಾಯಮ್ಯ, ದೇಶಕಾಲೌ ಸಂಕೀರ್ತ್ಯ, ... ಗೋತ್ರಸ್ಯ ಇತ್ಯಾದಿ .....ಮಮ(ಅಮುಕ ಪಿತುಃ) ಜನ್ಮಪ್ರಭೃತಿ ಏತಾವತ್ಕಾಲ ಪರ್ಯಂತಂ, ಬಾಲ್ಯಯೌವನವಾರ್ಧಕೇಷು ಜ್ಞಾನತೋಽಜ್ಞಾನತಶ್ಚ ಕರ್ಮೇಂದ್ರಿಯ ಜ್ಞಾನೇಂದ್ರಿಯ ವ್ಯಾಪಾರೈಃ ಸಂಭಾವಿತಾನಾಂ ಸ್ವಸ್ವಕಾಲೇ ಯಥಾಶಾಸ್ತ್ರಂ ಸ್ನಾನ ಸಂಧ್ಯಾದಿ ನಿತ್ಯಕರ್ಮಾಕರಣೇನ, ನಿಷಿದ್ಧ ಕರ್ಮಾಚರಣೇನ, ನಿಷಿದ್ಧಪದಾರ್ಥ ಭಕ್ಷಣೇನ ವಾ ಸಂಭಾವಿತಾನಾಂ ವಿಶೇಷತಃ ಕಲಿಯುಗೇ ಬ್ರಹ್ಮಚರ್ಯಾದ್ಯಾಶ್ರಮ ವಿಹಿತ ಕರ್ಮಣಾಮನನುಷ್ಠಾನೇನ, ತತ್ಪ್ರತಿಯೋಗ್ಯನುಷ್ಠಾನೇನ ವಾ ಸಂಜಾತ ಮಹಾಪಾತಕೋಪಾತಕಾದಿ ಸಂಕೀರ್ಣಜಾನಾಮೇವಂ ಉಕ್ತಾನುಕ್ತಾನಾಂ ರಹಸಿಕೃತಾನಾಂ ಪ್ರಕಾಶಕೃತಾನಾಂ ಬಹುವಿಧಾನಾಂ ಪಾಪಾನಾಂ ಸದ್ಯಃ ಅಪನೋದನದ್ವಾರಾ ಶರೀರಶುದ್ಧ್ಯರ್ಥಂ, ಸರ್ವಪ್ರಾಯಶ್ಚಿತ್ತಂ ಯಥಾಶಕ್ತಿ ಹಿರಣ್ಯರೂಪೇಣ ಕರಿಷ್ಯೇ(ಕರಿಷ್ಯಾಮಿ) ಇತಿ ಸಂಕಲ್ಪ್ಯ ॥

ಪರಿಷದುಪದಿಷ್ಟಂ ಸ್ವಪಾಪಾನುಗುಣಂ ಹಿರಣ್ಯಂ ಸತಾಂಬೂಲಂ ಗೃಹೀತ್ವಾ । ಹಿರಣ್ಯಗರ್ಭ.....ಮೇ ॥ ಇದಂ ಹಿರಣ್ಯಂ ಮಮ (ಅಮುಕಸ್ಯ) ಜನ್ಮಪ್ರಭೃತಿ ಸಂಭಾವಿತಾನಾಂ ಸಂಕಲ್ಪೋಕ್ತಾನಾಂ ಅನುಕ್ತಾನಾಂ ಚ ಸರ್ವೇಷಾಂ ಪಾಪಾನಾಂ ಪರಿಹಾರಂ ಕಾಮಯಮಾನಃ, ಮಹಾವಿಷ್ಣುಪ್ರೀತಿಂ ಕಾಮಯಮಾನಃ ಬ್ರಾಹ್ಮಣೇಭ್ಯಃ ಸಂಪ್ರದದೇ ನಮಮ । ಇದಂ ಸ್ವೀಕೃತ್ಯ, ಮಮ(ಅಮುಕಸ್ಯ) ಉಕ್ತಾನುಕ್ತ ಸಮಸ್ತ ಪಾಪಪರಿಹಾರದ್ವಾರಾ ಶರೀರಶುದ್ಧಿರಸ್ತ್ವಿತಿ ಭವಂತೋಬ್ರುವಂತು – ಇತಿ ಪ್ರಾರ್ಥಯೇತ್ । ತಥಾಸ್ತು, ಇತಿ ತೇಷಾಂ ಪ್ರತಿವಚನಮ್ ॥

ನಂತರ ಕುಳಿತು, 3 ಪ್ರಾಣಾಯಾಮಗಳನ್ನು ಮಾಡಿ, ದೇಶಕಾಲಗಳನ್ನು ಸ್ಮರಿಸಿ, ಈ ಗೋತ್ರದ, ಈ ಹೆಸರಿನ, ನನ್ನ ತಂದೆಯ ಜನನದಿಂದ ಇಲ್ಲಿಯವರೆವಿಗೂ ಬಾಲ್ಯಯೌವನ,ಮುಪ್ಪು, ಈ 3 ಅವಸ್ಥೆಗಳಲ್ಲೂ – ಜ್ಞಾನದಿಂದ ಅಥವಾ ಅಜ್ಞಾನದಿಂದ ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳಿಂದ ಉಂಟಾಗಿರುವ – ಸರಿಯಾದ ಕಾಲಕ್ಕೆ ವಿಧಿಗನುಗುಣವಾಗಿ ಸ್ನಾನ, ಸಂಧ್ಯಾದಿ ನಿತ್ಯಕರ್ಮಗಳನ್ನು ಮಾಡದೇ ಇರುವುದರಿಂದ – ಮಾಡಬಾರದು ಎಂಬ ಕರ್ಮಗಳನ್ನು ಮಾಡಿರುವುದರಿಂದ – ನಿಂದಿತಪದಾರ್ಥಗಳನ್ನು ತಿನ್ನುವುದರಿಂದ – ವಿಶೇಷವಾಗಿ ಈ ಕಲಿಯುಗದಲ್ಲಿ ಬ್ರಹ್ಮಚರ್ಯವೇ ಮುಂತಾದ ಆಶ್ರಮಗಳಿಗೆ ವಿಧಿಸಿರುವ ಕರ್ಮಗಳನ್ನು ಮಾಡದಿರುವುದರಿಂದ – ಅವುಗಳಿಗೆ ವಿರುದ್ಧವಾದ ಕರ್ಮಗಳನ್ನು ಮಾಡಿರುವುದರಿಂದ – ಉಂಟಾಗಿರುವ ಮಹಾಪಾಪ, ಸಾಧಾರಣಪಾಪ ಇವುಗಳ ಸೇರುವಿಕೆಯಿಂದ – ಹೀಗೆ ಹೇಳಿರುವ ಮತ್ತು ಹೇಳದಿರುವ – ರಹಸ್ಯವಾಗಿ ಮಾಡಿರುವ – ಎಲ್ಲರಿಗೂ ತಿಳಿಯುವಂತೆ ಮಾಡಿರುವ – ಈ ರೀತಿಯಾದ ಎಲ್ಲಾ ಪಾಪಗಳ ಪರಿಹಾರಕ್ಕಾಗಿ ನನ್ನ ದೇಹಶುದ್ಧಿಗಾಗಿ(ಮೃತನ ಶುದ್ಧಿಗಾಗಿ) ಇವುಗಳೆಲ್ಲದರ ನಿವಾರಣೆಗಾಗಿ ನನ್ನ ಶಕ್ತಿಗನುಗುಣವಾಗಿ ಹಣದ ರೂಪದಿಂದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆಂದು ಸಂಕಲ್ಪಿಸಿ, ಆ ಸಭೆಯು ಹೇಳುವಷ್ಟು ದಕ್ಷಿಣೆಯನ್ನು ಅವನ ಪಾಪಗಳಿಗೆ ಅನುಗುಣವಾಗಿ ಹಣವನ್ನು ತಾಂಬೂಲದೊಡನೆ ಇಟ್ಟುಕೊಂಡು, ಶ್ಲೋಕವನ್ನು ಹೇಳಿ, ಈ ಹಣವನ್ನು ಸ್ವೀಕರಿಸಿ, ನನ್ನ ತಂದೆಗೆ ಸಂಬಂಧಿಸಿದ ಈ ಹಿಂದೆಹೇಳಿದ ಹಾಗೂ ಹೇಳದಿರುವ ಎಲ್ಲಾ ಪಾಪಗಳ ನಿವಾರಣೆಯನ್ನು ಇಚ್ಛಿಸುವವನಾಗಿ ಶ್ರೀಮಹಾವಿಷ್ಣುವಿನ ಪ್ರಸಾದವನ್ನು ಬಯಸುತ್ತಾ, ನಿಮಗೆ ಕೊಟ್ಟಿದ್ದೇನೆ, ಇದು ನನ್ನದಲ್ಲ, ಇದನ್ನು ಸ್ವೀಕರಿಸಿ ನನ್ನ ತಂದೆಯ ಎಲ್ಲಾ ಪಾಪಗಳನ್ನೂ ನಿವಾರಿಸುತ್ತಾ, ಇವರ ಶರೀರವು ಸಂಸ್ಕಾರಕ್ಕೆ ಅರ್ಹ ಎಂದು ನೀವುಗಳು ಅನುಗ್ರಹಿಸಿರಿ, ಎಂದು ಪ್ರಾರ್ಥಿಸಿಬೇಕು – ಹಾಗೆಯೇ ಆಗಲಿ ಎಂದು ಬ್ರಾಹ್ಮಣರು ಆಶೀರ್ವದಿಸಬೇಕು ॥

13. ಅಗ್ನ್ಯಾ ದಿ ಹೀನಯಜ್ಞಸ್ಯ ರಿಪುತ್ವಮಾಹ

ಅಗ್ನಿಹೀನಮನಾವೃಷ್ಟಿಃ ಮಂತ್ರಹೀನಂ ತು ಋತ್ವಿಜಮ್ ।
ಆಜ್ಯಹೀನಂ ಕುಲಂಹಂತಿ ಸ್ವರಹೀನಂ ತು ಪತ್ನಯಃ ॥
ಯಜ್ಞಾನಂ ದಕ್ಷಿಣಾಹೀನಂ ಅನ್ನಹೀನಸ್ತು ರಾಷ್ಟ್ರಕಮ್ ।
ಸರ್ವಹೀನಂ ಸದಸ್ಯಾನಿ ನಾಸ್ತಿಯಜ್ಞ ಸಮಾರಿಪುಃ ॥
ತಸ್ಮಾತ್ ಸರ್ವಪ್ರಯತ್ನೇನ ಕಿಂಚಿದ್ದ್ರವ್ಯಸಮಾಚರೇತ್ ।
ಶ್ರಿಯಃಕಾಮಶ್ಚರೇತ್ ಸರ್ವಂ ಸಮೃದ್ಧಂ ಸಹದಕ್ಷಿಣಮ್ ॥
ಏವಂ ಋಷಿವಿಧಾನೋಕ್ತಂ ಮುನೀನಾಂ ತತ್ವವೇದಿನಾಮ್ ।
ಸ್ವರವೇದಾಹ್ನಿಕಂ ಹೋಮಂ ಸರ್ವಲೋಕೇಷು ಪೂಜಿತಮ್ ॥
ಸರ್ವಲೋಕೇಷು ಪೂಜಿತಮಿತ್ಯಾಹ ಭಗವಾನ್ ಬೋಧಾಯನಃ ॥

ಹೀನವಾದ ಅಗ್ನಿಯಲ್ಲಿ ಅನುಷ್ಠಾನವನ್ನು ಮಾಡಿದರೆ ಕ್ಷಾಮವು ಬರುತ್ತದೆ, ಮಂತ್ರವು ಹೀನವಾಗಿದ್ದರೆ ಋತ್ವಿಜನಿಗೆ ಅಧೋಗತಿಯಾಗುತ್ತದೆ । ಹೋಮದಲ್ಲಿ ಆಜ್ಯವು ಹೀನವಾಗಿದ್ದರೆ ಯಜಮಾನನ ಕುಲವನ್ನೇ ನಾಶಮಾಡುತ್ತದೆ, ಮಂತ್ರದ ಸ್ವರ ಹೀನವಾದರೆ ಯಜಮಾನನ ಪತ್ನಿಯನ್ನು ಕೊಲ್ಲುತ್ತದೆ । ದಕ್ಷಿಣೆಯು ಹೀನವಾದರೆ ಯಜಮಾನನನ್ನು ಕೊಲ್ಲುತ್ತದೆ, ಭೋಜನವು ಹೀನವಾದರೆ ದೇಶವನ್ನೇ ನಾಶಪಡಿಸುತ್ತದೆ । ಇದೆಲ್ಲವೂ ಹೀನವಾಗಿದ್ದರೆ ಆ ಯಜ್ಞದ ಸದಸ್ಯರನ್ನು ನಾಶಪಡಿಸುತ್ತದೆ, ಹೀಗೆ ಮಾಡಿದರೆ ಯಜ್ಞಕ್ಕೆ ಸಮನಾದ ಶತ್ರುವೇ ಬೇರೆ ಇರುವುದಿಲ್ಲ!! । ಆದ್ದರಿಂದ ಸರ್ವಪ್ರಯತ್ನದಿಂದ ಉತ್ತಮದ್ರವ್ಯಗಳಿಂದ ಕೂಡಿದ ಯಾಗಕರ್ಮವನ್ನು ಮಾಡಬೇಕು । ಸಂಪತ್ತನ್ನು ಅಪೇಕ್ಷಿಸುವವನು, ಆಜ್ಯ–ದಕ್ಷಿಣೆ–ಮುಂತಾದ ಎಲ್ಲವನ್ನೂ ಸಮೃದ್ಧಿಯಾಗಿ, ಸರಿಯಾಗಿ ಉಪಯೋಗಿಸಬೇಕು । ಹೀಗೆ ಋಷಿಗಳು ವಿಧಾನಮಾಡಿದ ಹಾಗೂ

ತತ್ವಜ್ಞಾನಿಗಳಾದ ಮುನಿಗಳು ಹೇಳಿದ, ಸ್ವರಶುದ್ಧಿಯಿಂದ ಕೂಡಿದ ಎಲ್ಲಾ ಉತ್ತಮ ದ್ರವ್ಯಗಳಿಂದ ಕೂಡಿದ, ಮಂತ್ರಪೂರ್ವಕವಾದ ಯಾಗವು(ಕರ್ಮವು) ಎಲ್ಲ ಲೋಕಗಳಲ್ಲಿಯೂ ಪೂಜಿಸಲ್ಪಟ್ಟದ್ದಾಗಿರುತ್ತದೆ । ಎಂದು ಪೂಜ್ಯರಾದ ಬೋಧಾಯನರು ಹೇಳುತ್ತಾರೆ ॥

ಈ ಗ್ರಂಥದ ಉಳಿದ ವಿಷಯಗಳು ಮುಂದಿನ ಸಂಚಿಕೆಯಲ್ಲಿ

****

ಶ್ರೀ ಚೈತನ್ಯ ಗುರುನಾಥ ಪ್ರಕಾಶನ
ವೇದಬ್ರಹ್ಮ ಶ್ರೀ ವಿ.ಸಿ. ಶಕ್ತಿಧರ ಶರ್ಮಾ
ಸಂಪಾದಕರು, ಅನುವಾದಕರು ಮತ್ತು ಪ್ರಕಾಶಕರು
C/o ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು
ನಿಸರ್ಗ ಬಡಾವಣೆ, ಭಾರತ್ ಪೆಟ್ರೋಲ್ ಬಂಕ್ ಎದುರು
ಎಂ.ಆರ್.ಎಸ್. ಬೈಪಾಸ್ ರಸ್ತೆ,
ಶಿವಮೊಗ್ಗ – 577202, ಕರ್ನಾಟಕ
ಮೊ: 9686497982

ಬೆಲೆ : ರೂ. 160/-